# ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 8 ಸಂಚಿಕೆ 52

ಡಿಸೆಂಬರ್ 28, 2014

ಪುಟ 16 ರೂ. 10/-

Blog :janashakthi.wordpress.com e-mail : js_weekly@yahoo.com







## ಸಾಮಾಜಿಕ ನ್ಯಾಯಕ್ಕಾಗಿ ಸಿಪಿಐ(ಎಂ) ಸಂಘರ್ಷ



## ಸಂಸತ್ತಿನಲ್ಲಿ ಹೇಳಿಕೆ ನೀಡಲು ಪ್ರಧಾನಿಗೇಕೆ ಹಿಂಜರಿಕೆ?



## ಪೇಶಾವರ : ಮುಗ್ಧ ಮಕ್ಕಳ ಮಾರಣ ಹೋಮ



## ಮರಳು ಮಾಫಿಯಾಕ್ಕೆ ಕಡಿವಾಣ ಹಾಕಿ

# ನಮ್ಮನ್ನು ನೆಮ್ಮದಿಯಿಂದ ಬದುಕಲು ಬಿಡಿ, ನಮ್ಮ ಬದುಕುವ ಹಕ್ಕನ್ನು ಕಸಿಯಬೇಡಿ –

## ಜಿಲ್ಲಾಧಿಕಾರಿಗೆ ಮೊರೆಯಿಟ್ಟ ಕುತ್ಲೂರಿನ ಆದಿವಾಸಿ ಜನತೆ

ಕುದುರೆಮುಖ ರಾಷ್ಟ್ರೀಯ ಉದ್ಯಾನದೊಳಗೆ ವಾಸಿಸುತ್ತಿರುವ ಕುಟುಂಬಗಳನ್ನು ಒಕ್ಕಲೆಬ್ಬಿಸಲು ಸರಕಾರವಾಗಲಿ, ಜಿಲ್ಲಾಡಳಿತವಾಗಲಿ ಯಾವುದೇ ಎನ್‌ಜಿಓಗಳಿಗೆ ಈ ಬಗ್ಗೆ ಅಧಿಕಾರ ನೀಡಲಿಲ್ಲ. ಒಕ್ಕಲೆಬ್ಬಿಸುವಂತೆ ಒತ್ತಾಯ ಮಾಡುವವರ ಮೋಸಕ್ಕೆ ಯಾರು ಬಲಿಯಾಗಬಾರದು. ಅರಣ್ಯದಲ್ಲಿ ವಾಸಿಸುವುದು, ಹೊರಬರುವುದು ಮೂಲನಿವಾಸಿಗಳ ಸ್ವಯಂ ನಿರ್ಧಾರವಾಗಿದೆ. ಇಲ್ಲಿ ವಾಸಿಸುವವರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸರಕಾರ ಬದ್ಧವಾಗಿದೆ.

**– ಎ.ಬಿ. ಇಬ್ರಾಹಿಂ, ಜಿಲ್ಲಾಧಿಕಾರಿ**

ಕುತ್ಲೂರು ಪ್ರದೇಶ ನಕ್ಸಲ್ ಬಾಧಿತ ಪ್ರದೇಶವಾಗಿದ್ದು ಕಳೆದ 10 ವರ್ಷಗಳಿಂದ ಇಲ್ಲಿ ನಕ್ಸಲರ ನಿಗ್ರಹಕ್ಕಾಗಿ ಜಿಲ್ಲಾ ಮಟ್ಟದ ಎಎನ್‌ಎಸ್, ರಾಜ್ಯ ಮಟ್ಟದ ಎಎನ್‌ಎಫ್ ಪಡೆಗಳು ಕಾರ್ಯಾಚರಿಸುತ್ತಿದೆ. ನಮ್ಮ ಉದ್ದೇಶ ನಕ್ಸಲ್ ನಿಗ್ರಹವೇ ಹೊರತು ಜನರಿಗೆ ತೊಂದರೆ ನೀಡುವುದಲ್ಲ. ನಕ್ಸಲರಿಂದ ಜನರಿಗೆ ಹಾಗೂ ಆಸ್ತಿ ಪಾಸ್ತಿಗಳಿಗೆ ತೊಂದರೆ ಉಂಟಾಗದಂತೆ ಕಾರ್ಯಾಚರಣೆ ಕೈಗೊಳ್ಳಲಾಗುತ್ತಿದೆ ಮಾತ್ರವಲ್ಲದೆ ಜನರ ಮೂಲಭೂತ ಸಮಸ್ಯೆಗಳಿಗೂ ಸ್ಪಂದಿಸಲಾಗುತ್ತಿದೆ. ನಕ್ಸಲರ ಚಲನವಲನಗಳ ಬಗ್ಗೆ ಇಲಾಖೆಗೆ ಮಾಹಿತಿ ನೀಡಿ ಇಲಾಖೆಯೊಂದಿಗೆ ನಾಗರಿಕರು ಕೈಜೋಡಿಸಬೇಕು. ಈಗಾಗಲೇ ಎ.ಎನ್.ಎಫ್.ನಿಂದ ಆಗಿರುವ ಪ್ರಮಾದಕ್ಕೆ ವಿಷಾಧವಿದೆ.

**– ಡಾ. ಶರಣಪ್ಪ ಎಸ್.ಡಿ., ಪೊಲೀಸ್ ವರಿಷ್ಠಾಧಿಕಾರಿ**

**ಬೆಳ್ತಂಗಡಿ:**

ಕುದುರೆಮುಖ ರಾಷ್ಟ್ರೀಯ ಉದ್ಯಾನವನದೊಳಗಿರುವ ನಕ್ಸಲ್ ಪೀಡಿತ ಕುತ್ಲೂರು ಗ್ರಾಮದ ಅಲಂಬ ಮೂಲ ನಿವಾಸಿಗಳ ಕಾಲೋನಿಗೆ ದ.ಕ. ಜಿಲ್ಲಾಧಿಕಾರಿ ಎ.ಬಿ.ಇಬ್ರಾಹಿಂ ಬುಧವಾರ ಭೇಟಿ ನೀಡಿ, ಪರಿಶೀಲನೆ ನಡೆಸಿ ಜನರ ಅಹವಾಲುಗಳನ್ನು ಆಲಿಸಿದರು.

ಜಿಲ್ಲಾಧಿಕಾರಿಯವರ ಮುಂದೆ ತಮ್ಮ ಸಂಕಷ್ಟಗಳ ಸರಮಾಲೆಯನ್ನು ಬಿಚ್ಚಿಟ್ಟ ಮೂಲನಿವಾಸಿಗಳು ಕಾಡಿನ ನಡುವೆ ನೆಮ್ಮದಿಯ ಬದುಕನ್ನು ನಡೆಸುತ್ತಿದ್ದೇವು. ಈಗ ಸಮಸ್ಯೆಗಳ ನಡುವೆ ಸಿಲುಕಿಕೊಂಡಿದ್ದೇವೆ. ನಮ್ಮನ್ನು ನಮ್ಮಷ್ಟಕ್ಕೆ ಬದುಕಲು ಬಿಡಿ ಎಂದು ಅವಲತ್ತುಕೊಂಡರು. ಕೆಲ ಎನ್‌ಜಿಓಗಳು ಒಕ್ಕಲೇಳುವಂತೆ ಒತ್ತಾಯಿಸುತ್ತಾ ಆಮೀಷಗಳನ್ನು ಒಡ್ಡಿ ನಮ್ಮನ್ನು ದಾರಿ ತಪ್ಪಿಸುತ್ತಿದ್ದಾರೆ. ಇದಕ್ಕೆ ಪೂರಕವಾಗಿ ನಕ್ಸಲ್ ನಿಗ್ರಹ ದಳದವರು ಮನೆಗಳಿಗೆ ನುಗ್ಗಿ ಬೆದರಿಸುತ್ತಿದ್ಧಾರೆ. ನಮ್ಮ ಬದುಕೇ ಅತಂತ್ರ ಸ್ಥಿತಿಯಲ್ಲಿದೆ ಎಂದು ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ಮುಖಂಡ ಸ್ಥಳೀಯ ನಿವಾಸಿ ವಿಠಲ ಮಲೆಕುಡಿಯ ತಮ್ಮ ಅಳಲನ್ನು ಹಂಚಿಕೊಂಡರು.



ಸರಕಾರದ ಪುನರ್ವಸತಿ ಯೋಜನೆಯನ್ನು ನಂಬಿ ಅರಣ್ಯದಿಂದ ಹೊರಬಂದು ಕಂದಾಯ ಇಲಾಖೆಯ ಜಮೀನಿನಲ್ಲಿ ಮನೆ ಕಟ್ಟಿ ಕುಳಿತ ಕುಟುಂಬಗಳಿಗೆ ಇತ್ತ ಪರಿಹಾರವೂ ಇಲ್ಲ. ಅತ್ತ ಜಮೀನಿನ ಹಕ್ಕು ಪತ್ರವೂ ಇಲ್ಲ. ಸರಕಾರ ನಮ್ಮನ್ನು ನಡು ನೀರಿನಲ್ಲೇ ಕೈಬಿಟ್ಟಿದೆ ಎಂದು ನಾಯ್ದುಗುರಿಯ ಸಂತ್ರಸ್ತ ಕುಟುಂಬಗಳ ನೋವನ್ನು ಸಂತ್ರಸ್ತ ಗಣೇಶ ಹಂಚಿಕೊಂಡರು. ಭೂಮಿಯ ಹಕ್ಕು ಪತ್ರವೂ ಇಲ್ಲ. ರಸ್ತೆ ದುರಸ್ತಿಗೆ ಅವಕಾಶ ನಿರಾಕರಿಸಲಾಗುತ್ತಿದೆ. ವಿದ್ಯುತ್ ಸಂಪರ್ಕ ಇಲ್ಲವೇ ಇಲ್ಲ. ಹಿಂದೆ ನೀಡಿದ ಸೋಲಾರ್ ಲೈಟ್‌ಗಳು ಉರಿಯುತ್ತಿಲ್ಲ. ಮೂಲಭೂತ ಸೌಕರ್ಯಗಳನ್ನು ಒದಗಿಸುವ ಬಗೆಗಿನ ಭರವಸೆಗಳೆಲ್ಲವೂ ಭರವಸೆಯಾಗಿಯೇ ಉಳಿಯುತ್ತಿದೆ ಎಂದು ಸ್ಥಳೀಯ ನಿವಾಸಿ ಪೂವಪ್ಪ ಮಲೆಕುಡಿಯ ವಿವರಿಸಿದರು.

**ಅರಣ್ಯ ಹಕ್ಕು ಅರ್ಜಿಗಳ ವಿಲೇಗೆ ಸೂಚನೆ :**

ಅರಣ್ಯ ಹಕ್ಕು ಕಾಯಿದೆ ಅಡಿಯಲ್ಲಿ ರಾಷ್ಟ್ರೀಯ ಉದ್ಯಾನವನ ನಿವಾಸಿಗಳು ಸಲ್ಲಿಸಿರುವ ಅರ್ಜಿಗಳನ್ನು ಈ ಹಿಂದೆ ತಿರಸ್ಕರಿಸಲಾಗಿದೆ. ಈಗ ಸಲ್ಲಿಕೆಯಾಗಿರುವ 19 ಅರ್ಜಿಗಳನ್ನು ಕೂಡಲೇ ಪರಿಶೀಲಿಸುವಂತೆ ಸೂಚಿಸಿದ ಜಿಲ್ಲಾಧಿಕಾರಿಯವರು ಅನಗತ್ಯ ವಿಳಂಬ ಮಾಡುತ್ತಿರುವ ಬಗ್ಗೆ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ಒಂದೇ ವಾರದಲ್ಲಿ ಈ ಅರ್ಜಿಗಳ ಸಮೀಕ್ಷೆ ಹಾಗೂ ಸರ್ವೆ ಕಾರ್ಯ ಮುಗಿಸಿ ತಾಲೂಕು ಮಟ್ಟದ ಸಮಿತಿಗೆ ಕಳುಹಿಸಿ ಕೊಡಬೇಕು. ಜನವರಿ 15ರ ಒಳಗೆ ಈ ಅರ್ಜಿಗಳು ಜಿಲ್ಲಾಧಿಕಾರಿ ಅಧ್ಯಕ್ಷತೆಯ ಸಮಿತಿಯ ಮುಂದೆ ಬರಬೇಕು. ಜನವರಿ ಅಂತ್ಯದೊಳಗೆ ಪ್ರಕರಣಗಳನ್ನು ವಿಲೇ ಮಾಡಿ ಅರ್ಹರಿಗೆ ಹಕ್ಕು ಪತ್ರ ವಿತರಿಸುವ ಕ್ರಮ ಕೈಗೊಳ್ಳುತ್ತೇನೆ ಎಂದು ಜಿಲ್ಲಾಧಿಕಾರಿ ಇಬ್ರಾಹಿಂ ತಿಳಿಸಿದರು. ಸ್ಥಳೀಯವಾಗಿ ಸೋಲಾರ್ ವಿದ್ಯುತ್ ಉತ್ಪಾದಿಸಿ ಮನೆಗಳಿಗೆ ಸಂಪರ್ಕ ಕಲ್ಪಿಸುವ ಕೇಂದ್ರ ಸರಕಾರದ ಹೊಸ ಯೋಜನೆಯನ್ನು ಜಾರಿಗೆ ತಂದಿದ್ದು ಕುತ್ಲೂರು ಈ ಯೋಜನೆಯಡಿಯಲ್ಲಿ ಬರಲಿದೆ. ಇಲ್ಲಿ ಕೂಡಲೇ ಯೋಜನೆಯನ್ನು ಅನುಷ್ಠಾನಗೊಳಿಸುವಂತೆ ಮೆಸ್ಕಾಂ ಅಧಿಕಾರಿಗಳಿಗೆ ಸೂಚಿಸಿದರು.

ಪುನರ್‌ವಸತಿ ಯೋಜನೆಯಡಿ ಹಣ ಪಡೆದುಕೊಂಡು ಹೊರಗೆ ಹೋಗಿರುವ ಕಿಟ್ಟು ಮಲೆಕುಡಿಯ ಎಂಬವರು ತಮ್ಮ ಸಮಸ್ಯೆಯನ್ನು ಜಿಲ್ಲಾಧಿಕಾರಿಗಳ ಮುಂದೆ ಇಟ್ಟರು. ಎರಡು ವರ್ಷದ ಹಿಂದೆ 1.20 ಎಕ್ರೆ ಜಾಗಕ್ಕೆ 8.95 ಲಕ್ಷ ರೂ. ಪರಿಹಾರ ಪಡೆದು ಹೊರಗೆ ಹೋಗಿದ್ದೇನೆ. ಆದರೆ ಆ ಹಣಕ್ಕೆ ಎಲ್ಲಿಯು ಜಾಗ ಸಿಗ್ತಾ ಇಲ್ಲ. ಆಗ ಸರ್ಕಾರಿ ಜಾಗ ಕೂಡಾ ನೀಡುತ್ತೇವೆ ಎಂಬ ಭರವಸೆ ನೀಡಿದ್ದರು. ಈಗ ಜಾಗವಿಲ್ಲದೆ ತಮ್ಮನ ಮನೆಯಲ್ಲಿದ್ದೇನೆ ಎಂದಾಗ ಅವರಿಗೆ ಸುಲ್ಕೇರಿಯ ನಾಯ್ದುಗುರಿಯಲ್ಲಿ ಪುನರ್ವಸತಿಗೆಂದು ಮೀಸಲಿರಿಸಿರುವ ಜಾಗದಲ್ಲಿ ನಿವೇಶನ ಮಂಜೂರು ಮಾಡುವಂತೆ ಸೂಚಿಸಿದರು.

**ರಸ್ತೆ ಅಭಿವೃದ್ಧಿಗೆ ಹೊಸ ಪ್ರಸ್ತಾವನೆ :**

ಕುಕ್ಕುಜೆ–ಅಲಂಬ ರಸ್ತೆ ಹಾಗೂ ಅಲಂಬ ಕುರಿಯಾಡಿ ರಸ್ತೆ ದುರಸ್ತಿಗಾಗಿ ಸಲ್ಲಿಸಿರುವ ಪ್ರಸ್ತಾವನೆಗಳನ್ನು ಅರಣ್ಯ ಇಲಾಖೆ ನಿರಂತರವಾಗಿ ತಿರಸ್ಕರಿಸುತ್ತಾ ಬರುತ್ತಿರುವ ಬಗ್ಗೆ ಮಾಹಿತಿ ನೀಡಿದಾಗ ಯಾವುದೇ ಮರಗಳನ್ನು ಕಡಿಯದೆ ಇರುವ ರಸ್ತೆಯನ್ನು ದುರಸ್ತಿ ಮಾಡಲು ಹೊಸ ಪ್ರಸ್ತಾವನೆಯನ್ನು ಕಳುಹಿಸಿ. ಕುಕ್ಕುಜೆ ಅರಣ್ಯ ಇಲಾಖೆ ಗೇಟಿನಿಂದ ಅಲಂಬದವರೆಗೆ ಡಾಂಬರು ರಸ್ತೆಗೆ ಹಾಗೂ ಕುರಿಯಾಡಿ ಕಚ್ಚಾ ರಸ್ತೆ ದುರಸ್ತಿಗೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಗಿರಿಜನ ಅಭಿವೃದ್ಧಿ ಯೋಜನೆಯ ಅಧಿಕಾರಿಗಳಿಗೆ ಸೂಚಿಸಿದರು. ಅರಣ್ಯ ಇಲಾಖೆಯವರು ಇದನ್ನು ಸಮಪರ್ಕವಾಗಿ ಪರಿಶೀಲಿಸಿ ಅನುಮತಿ ಒದಗಿಸುವಂತೆ ಸಲಹೆ ನೀಡಿದರು.

ನಕ್ಸಲ್ ನಿಗ್ರಹ ದಳದವರು ಮೂಲನಿವಾಸಿಗಳಿಗೆ ಅನಗತ್ಯ ಕಿರುಕುಳ ನೀಡುತ್ತಿರುವ ಬಗ್ಗೆ ಪ್ರಸ್ತಾವಿಸಿದಾಗ ದ.ಕ. ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಶರಣಪ್ಪ ಪ್ರತಿಕ್ರಿಯಿಸಿ, ಈ ಬಗ್ಗೆ ದಲಿತರ ಕುಂದುಕೊರತೆ ಸಭೆಯಲ್ಲಿ ಪ್ರಸ್ತಾಪ ಬಂದಿದ್ದು ನಕ್ಸಲ್ ನಿಗ್ರಹದಳದ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಿದ್ದೇನೆ. ಮೂಲ ನಿವಾಸಿಗಳಿಗೆ ಯಾವುದೇ ಕಿರುಕುಳ ನೀಡದಂತೆ ಎಚ್ಚರಿಕೆ ವಹಿಸಲಾಗುವುದು. ನಕ್ಸಲ್‌ರ ವಿರುದ್ಧದ ಕಾರ್ಯಾಚರಣೆ ನಡೆಯಲಿದೆ.

**ಫ್ಯಾಷನ್ ಶೋಗೆ ಬಂದಿದ್ದೀರಾ ?**

ಜಿಲ್ಲಾಧಿಕಾರಿಯವರು ಆದಿವಾಸಿಗಳ ಸಮಸ್ಯೆಗಳನ್ನು ಆಲಿಸಿ ಅದಕ್ಕೆ ಪರಿಹಾರಗಳನ್ನು ಸೂಚಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸುತ್ತಿದ್ದರು. ಪ್ರತಿಯೊಬ್ಬರು ಅವರವರ ಇಲಾಖೆಗೆ ಸಂಬಂಧಪಟ್ಟ ಸಮಸ್ಯೆಗಳನ್ನು ತಮ್ಮ ಪುಸ್ತಕಗಳಲ್ಲಿ ದಾಖಲಿಸಲು ಸೂಚಿಸುತ್ತಿದ್ದರು. ಆದರೆ ಸ್ಥಳದಲ್ಲಿದ್ದ ನಾರಾವಿ ಗ್ರಾಮ ಪಂಚಾಯತ್ ಪಿಡಿಓ ರಮೇಶ್ ನಾಯಕ್ ಕೈಯಲ್ಲೊಂದು ಮೊಬೈಲ್ ಹಿಡಿದು ನಿಂತಿರುವುದನ್ನು ಗಮನಿಸಿದ ಜಿಲ್ಲಾಧಿಕಾರಿಯವರು ನೀವೇನು ಫ್ಯಾಶನ್ ಶೋಗೆ ಬಂದಿದ್ದೀರಾ? ಎಂದು ಪ್ರಶ್ನಿಸಿ ಜನರು ಹೇಳುತ್ತಿರುವ ಸಮಸ್ಯೆಗಳನ್ನು ಪಟ್ಟಿ ಮಾಡಿ ಅದಕ್ಕೆ ಪರಿಹಾರ ಸೂಚಿಸಬೇಕಾದ ನೀವು ಸುಮ್ಮನೆ ನಿಂತಿದ್ದೀರಲ್ಲಾ? ಎಂದು ತರಾಟೆಗೆ ತೆಗೆದುಕೊಂಡರು. ನಂತರ ಯಾವುದೋ ಕಾಗದವೊಂದನ್ನು ತೆಗೆದು–ಕೊಂಡು ಜನರ ಸಮಸ್ಯೆಗಳನ್ನು ಪಟ್ಟಿ ಮಾಡಿದರು. ಜಿಲ್ಲಾಧಿಕಾರಿಯವರ ಮಾತಿನ ಬಳಿಕ ಸ್ಥಳದಲ್ಲಿದ್ದ ಎಲ್ಲಾ ಅಧಿಕಾರಿಗಳು ಜನರ ಸಮಸ್ಯೆಗಳನ್ನು ಪಟ್ಟಿ ಮಾಡಲು ಪ್ರಾರಂಭಿಸಿದರು. ಸಮಸ್ಯೆಗೆ ಅಸಂಬದ್ಧ ಉತ್ತರಗಳನ್ನು ನೀಡುತ್ತಿದ್ದ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡು ಎಲ್ಲಾ ಸಮಸ್ಯೆಗಳಿಗೂ ತ್ವರಿತವಾಗಿ ಸ್ಪಂದಿಸಿ ಜಿಲ್ಲಾಡಳಿತಕ್ಕೆ ವರದಿ ನೀಡಲು ಸೂಚಿಸಿದರು.

**ನಾಯ್ದುಗುರಿಗೆ ಭೇಟಿ–ವಾರದೊಳಗೆ ಪರಿಹಾರ ಸೂಚನೆ :**

2011ರಲ್ಲಿ ಆಗಿನ ಜಿಲ್ಲಾಧಿಕಾರಿಗಳ ಸೂಚನೆಯಂತೆ ಅರಣ್ಯದಿಂದ ಹೊರಬಂದು ಸುಲ್ಕೇರಿ ಗ್ರಾಮದ ನಾಯಿದಗುರಿ ಎಂಬಲ್ಲಿ ವಾಸಿಸುತ್ತಿರುವ 5 ಕುಟುಂಬಗಳನ್ನು ಭೇಟಿಯಾಗಿ ಸಮಸ್ಯೆಯನ್ನು ಜಿಲ್ಲಾಧಿಕಾರಿಯವರು ಆಲಿಸಿದರು. ಈ ಕುಟಂಬಗಳು ಕಾಡಿನೊಳಗೆ ಇದ್ದ ತಮ್ಮ ಕೃಷಿಯನ್ನು ಬಿಟ್ಟು ಇಲ್ಲಿ ವಾಸಿಸುತ್ತಿದ್ದು, ಈಗ ಅಲ್ಲಿ ಪರಿಹಾರವೂ ಇಲ್ಲದೆ, ಇಲ್ಲಿ ಹಕ್ಕುಪತ್ರವೂ ಇಲ್ಲದೆ ಅತಂತ್ರ ಸ್ಥಿತಿಯ ಬಗ್ಗೆ ತಿಳಿದುಕೊಂಡರು. ಅರಣ್ಯದೊಳಗಿರುವ ಅವರ ಜಾಗಕ್ಕೆ ಹಕ್ಕುಪತ್ರ ಇಲ್ಲದ ಕಾರಣ ಅವರಿಗೆ ಪರಿಹಾರ ನೀಡಲು ಸಾಧ್ಯವಿಲ್ಲ ಎಂಬ ನೆಪ ಒಡ್ಡಿದ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ಜಿಲ್ಲಾಧಿಕಾರಿಯವರು ಅವರ ಕೃಷಿ ಹಾಗೂ ಮನೆಗಳಿಗೆ ಪರಿಹಾರ ನೀಡುವಂತೆ ಸೂಚಿಸಿದರು. ಈ ಹಿಂದೆ ಆಗಿರುವ ಮೌಲ್ಯಮಾಪನ ಸರ್ವೆಯ ಮಾಹಿತಿಗಳನ್ನು ತರಿಸಿಕೊಂಡು ಜಿಲ್ಲಾಧಿಕಾರಿಯವರು ಪರಿಶೀಲಿಸಿದರು. ಸರ್ವೆ ಕಾರ್ಯ ಸರಿಯಾಗಿ ನಡೆದಿಲ್ಲ. ಹೆಚ್ಚು ಮೌಲ್ಯವನ್ನು ಗುರುತಿಸಲಾಗಿದೆ. ಇದನ್ನು ವಿತರಿಸಲು ಸಾಧ್ಯವಿಲ್ಲ ಎಂದು ವನ್ಯಜೀವಿ ವಿಭಾಗದ ಅಧಿಕಾರಿಗಳು ತಿಳಿಸಿದಾಗ ಅದ–ಕ್ಕೆ ಪ್ರತಿಕ್ರಿಯಿಸಿದ ಡಿಸಿಯವರು ಕಂದಾಯ ಇಲಾಖೆ, ಅರಣ್ಯ ಇಲಾಖೆ ಹಾಗೂ ತೋಟಗಾರಿಕೆ ಇಲಾಖೆಯವರು ಜಂಟಿಯಾಗಿ ಬುಧವಾರದಂದೇ ಸರ್ವೆ ನಡೆಸಿ ಸಂಜೆಯೊಳಗೆ ವರದಿ ನೀಡುವಂತೆ ತಹಶೀಲ್ದಾರ್‌ಗೆ ಸೂಚಿಸಿದರು. ಈ ವರಿದಿಯನ್ನು ಪರಿಶೀಲನೆ ನಡೆಸಿ ವಾರದೊಳಗೆ ಪರಿಹಾರ ನೀಡುವ ಬಗ್ಗೆ ಭರವಸೆ ನೀಡಿದರು.

ನಾಯಿದಗುರಿ ಪ್ರದೇಶದಲ್ಲಿ ಮೂಲ ನಿವಾಸಿಗಳ ಪುನರ್‌ವಸತಿಗೆಂದು 190 ಎಕರೆ ಜಮೀನನ್ನು ಮೀಸಲಿರಿಸಲಾಗಿದೆ. ಆದರೆ ಇದನ್ನು ಕಾಡಿನೊಳಗೆ ನೀಡಿರುವ ಬಗ್ಗೆ ಆಕ್ಷೇಪ ಬಂದ ಹಿನ್ನಲೆಯಲ್ಲಿ ಪುನರ್ ಸರ್ವೆ ನಡೆಸುವಂತೆ ಹಾಗೂ ಅರಣ್ಯದಿಂದ ಹೊರತಾದ ಪ್ರದೇಶದಲ್ಲಿ ಮೀಸಲು ಜಮೀನನ್ನು ಗುರುತಿಸಿ ಸಂರಕ್ಷಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ಒತ್ತುವರಿ ಆಗಿರುವ ಜಾಗದ ಬಗ್ಗೆಯೂ ಸರ್ವೆ ನಡೆಸುವಂತೆ ಸೂಚಿಸಿದರು.

ಬೆಳ್ತಂಗಡಿ ತಹಶೀಲ್ದಾರ್ ಪುಟ್ಟ ಶೆಟ್ಟಿ., ವನ್ಯಜೀವಿ ಇಲಾಖೆಯ ಅರಣ್ಯ ಸಂರಕ್ಷಣಾಧಿಕಾರಿ ಡಾ. ರಮೇಶ್ ಕುಮಾರ್ ಪಿ., ವಲಯ ಅರಣ್ಯಾಧಿಕಾರಿ ಶ್ರೀನಾಥ್ ಎಂ., ತೋಟಗಾರಿಕಾ ಇಲಾಖಾ ಸಹಾಯಕ ನಿರ್ದೇಶಕ ಯೋಗೀಶ್, ಅದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ಶೇಖರ್ ಎಲ್. ಸುಧಾಕರ ಮಲೆಕುಡಿಯ, ಶಶಿಧರ ಮಲೆಕುಡಿಯ, ಕರ್ನಾಟಕ ಪ್ರಾಂತ ರೈತ ಸಂಘದ ಮುಖಂಡ ಹರಿದಾಸ್, ದಲಿತ ಮುಖಂಡರಾದ ಸಂಜೀವ ಆರ್., ಬೇಬಿ ಸುವರ್ಣ, ನಾರಾವಿ ಗ್ರಾ. ಪಂ. ಸದಸ್ಯ ಉದಯ ಹೆಗ್ಡೆ, ಉಪಸ್ಥಿತರಿದ್ದರು.●

ಸಂಪಾದಕೀಯ



▌ನಿತ್ಯಾನಂದಸ್ವಾಮಿ

# ಮರಳು ಮಾಫಿಯಾ ಹಾವಳಿಯಿಂದ ಕಟ್ಟಡ ನಿರ್ಮಾಣ ಕಾರ್ಮಿಕರು ಉಪವಾಸ

ಶಾಸಕರು ಮತ್ತು ಲೋಕೋಪಯೋಗಿ ಹಾಗೂ ಪೊಲೀಸ್ ಅಧಿಕಾರಿಗಳು ಶಾಮೀಲಾಗಿ ನಡೆಸುತ್ತಿರುವ ಅಕ್ರಮ ಮರಳು ದಂಧೆ ವಿರುದ್ಧ ರೋಣ ತಾಲೂಕಿನ ಗಜೇಂದ್ರಗಡ ಪಟ್ಟಣದಲ್ಲಿ ಸಿಪಿಐ(ಎಂ) ನೇತೃತ್ವದಲ್ಲಿ ಕಟ್ಟಡ ನಿರ್ಮಾಣ ಕಾರ್ಮಿಕರು ಇತರ ಸಾಮೂಹಿಕ ಸಂಘಟನೆಗಳ ಬೆಂಬಲದೊಂದಿಗೆ ಅನಿರ್ದಿಷ್ಟ ಧರಣಿ ಮುಷ್ಕರ ನಡೆಸಿದ್ದು ಇತ್ತೀಚೆಗೆ ವರದಿಯಾಗಿದೆ. ಮರಳು ಮಾಫಿಯಾಕ್ಕೆ ಕಡಿವಾಣ ಹಾಕಲು ಒತ್ತಾಯಿಸಿ ರಾಜ್ಯದ ಅನೇಕ ಕಡೆ ಇದೇ ರೀತಿಯ ಪ್ರತಿಭಟನೆಗಳು ನಡೆದಿವೆ. ಇದೇ ಡಿಸೆಂಬರ್ 17 ರಂದು ಮುಖ್ಯ ಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಬೆಳಗಾವಿ ಸುವರ್ಣಸೌಧದ ಸಮ್ಮೇಳನ ಸಭಾಂಗಣದಲ್ಲಿ ನಡೆದ ಕಾಂಗ್ರೆಸ್ ಶಾಸಕಾಂಗ ಸಭೆಯಲ್ಲಿ ಕೆಲವು ಶಾಸಕರು ಇದೇ ಪ್ರಶ್ನೆಯನ್ನು ಎತ್ತಿಕೊಂಡು ಗಂಭೀರ ಆರೋಪ ಮಾಡಿದ್ದಾರೆ ಎನ್ನಲಾಗಿದೆ.

ಮದ್ಯ ಮಾಫಿಯಾ, ಭೂ ಮಾಫಿಯಾ, ಗಣಿ ಮಾಫಿಯಾ ನಂತರ ಈಗ ಮರಳು ಮಾಫಿಯಾ ತಲೆ ಎತ್ತುತ್ತಿದ್ದು ಇದರಲ್ಲಿ ತೊಡಗಿದವರು ಕೋಟ್ಯಾಂತರ ರೂ. ಗಳ ಮಾಲೀಕರಾಗಿದ್ದಾರೆ. ಮಳೆಯಾದಾಗೊಮ್ಮೆ ಹೊಳೆ ಹಳ್ಳಗಳಲ್ಲಿ ಹರಿದು ಬರುವ ಮರಳಿನ ಮೇಲೆ ಇವರು ಕಣ್ಣಿಡುತ್ತಾರೆ. ಭ್ರಷ್ಟ ಅಧಿಕಾರಿಗಳ ಬೆಂಬಲದಿಂದ ರಾತ್ರೋರಾತ್ರಿ ಲಭ್ಯವಿರುವ ಮರಳನ್ನು ದೂರದ ಪ್ರದೇಶಗಳಿಗೆ ಸಾಗಿಸಿ ದುಬಾರಿ ದರಕ್ಕೆ ಮಾರಾಟಮಾಡಿ ಬಾರೀ ಲಾಭ ಗಳಿಸುತ್ತಾರೆ. ಈ ಅಕ್ರಮ ದಂಧೆಯಿಂದಾಗಿ ಸರಕಾರಕ್ಕೆ ತೆರಿಗೆ ರೂಪದಲ್ಲಿ ಬರುವ ಆದಾಯಕ್ಕೂ ಕತ್ತರಿ ಬೀಳುತ್ತದೆ. ಮಾತ್ರವಲ್ಲ ಜನಸಾಮಾನ್ಯರಿಗೆ ಸುಲಭ ದರದಲ್ಲಿ ಮರಳು ಸಿಗದಂತಾಗುತ್ತದೆ.


ಕಟ್ಟಡ ನಿರ್ಮಾಣ ಕೈಗಾರಿಕೆ ಇಂದು ಬೆಳೆಯುತ್ತಿರುವ ಕೈಗಾರಿಕೆಯಾಗಿದೆ. ಹೀಗಾಗಿ ಮರಳು, ಸಿಮೆಂಟ್, ಕಬ್ಬಿಣ ಮೊದಲಾದ ಸರಕುಗಳಿಗೆ ಎಲ್ಲಿಲ್ಲದ ಬೇಡಿಕೆ ಬಂದಿದೆ. ನಗರ ಪ್ರದೇಶಗಳಲ್ಲಿ ದೊಡ್ಡ ದೊಡ್ಡ ಕಟ್ಟಡ ನಿರ್ಮಾಣ ಗುತ್ತಿಗೆದಾರರು ಎಷ್ಟು ಬೆಲೆ ಕೊಟ್ಟಾದರೂ ಮರಳನ್ನು ಕೊಂಡುಕೊಳ್ಳುತ್ತಾರೆ. ಆದರೆ ಜನ ಸಾಮಾನ್ಯರಿಗೆ ದುಬಾರಿ ದರದಲ್ಲಿ ಮರಳನ್ನು ಕೊಂಡುಕೊಳ್ಳುವುದು ಅಸಾಧ್ಯವಾಗುತ್ತದೆ. ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಮನೆಗಳನ್ನು ಕಟ್ಟಿಕೊಳ್ಳಲು ಆರಂಭಿಸುವ ಇಂತಹ ಸಾಮಾನ್ಯ ಜನರಿಗೆ ನ್ಯಾಯವಾದ ದರದಲ್ಲಿ ಮರಳು ಲಭ್ಯವಾಗದಿದ್ದಾಗ ಅವರು ಪರದಾಡುವಂತಾಗುತ್ತದೆ ಸರ್ಕಾರ ರೂಪಿಸುವ ಮರಳು ನೀತಿ ಈ ವಿಭಾಗದ ಜನರ ಹಿತ ಕಾಪಾಡುವಂತಿರಬೇಕಲ್ಲವೆ?

ಕೃಷಿ ಕ್ಷೇತ್ರಕ್ಕೆ ವ್ಯಾಪಿಸಿರುವ ಬಿಕ್ಕಟ್ಟಿನಿಂದಾಗಿ ಗ್ರಾಮೀಣ ಪ್ರದೇಶದಲ್ಲಿ ಇಂದು ನಿರುದ್ಯೋಗ ತೀವ್ರಗೊಳ್ಳುತ್ತಿದೆ. ಜೀವನ ನಿರ್ವಹಣೆಗಾಗಿ ಗ್ರಾಮೀಣ ಯುವಕರು ದೊಡ್ಡ ಸಂಖ್ಯೆಯಲ್ಲಿ ಕಟ್ಟಡ ನಿರ್ಮಾಣ ಕಾರ್ಮಿಕರಾಗಿ ಪರಿವರ್ತನೆಯಾಗಿದ್ದಾರೆ. ಆದರೆ ಇತ್ತೀಚೆಗೆ, ಸರ್ಕಾರದ ತಪ್ಪು ಮರಳು ನೀತಿ ಹಾಗೂ ಅಧಿಕಾರಿಗಳ ಮಟ್ಟದ ಭ್ರಷ್ಟಾಚಾರದಿಂದಾಗಿ ಮರಳು ಕೊರತೆ ಉಂಟಾಗಿದ್ದು ಗ್ರಾಮೀಣ ಕಟ್ಟಡ ನಿರ್ಮಾಣ ಕಾರ್ಮಿಕರು ಕೆಲಸವಿಲ್ಲದೆ ಉಪವಾಸ ಬೀಳುವಂತಾಗಿದೆ. ನಿತ್ಯದ ದುಡಿಮೆಯನ್ನೇ ಅವಲಂಭಿಸಿ ಬದುಕುವ ಈ ಅಸಂಘಟಿತ ವಲಯದ ಕಾರ್ಮಿಕರ ಹಿತ ರಕ್ಷಣೆ ಸರ್ಕಾರದ ಆದ್ಯತೆಯಾಗಬೇಕಾಗಿದೆ.

ಮರಳನ್ನು ಅಕ್ರಮವಾಗಿ ಸಾಗಾಟಮಾಡಿ, ಕಾಳಸಂತೆಯಲ್ಲಿ ಮಾರಾಟ ಮಾಡುವವರ ವಿರುದ್ಧ ಅಧಿಕಾರಿಗಳು ಕ್ರಮ ಜರಗಿಸುವುದಿಲ್ಲ. ಮರಳು ನೀತಿಗೆ ಅನುಗುಣವಾಗಿ ನಿರ್ದಿಷ್ಟ ಕೇಂದ್ರಗಳಲ್ಲಿ ಮರಳನ್ನು ಸಂಗ್ರಹಿಸಿ ತೆರಿಗೆ ವಿಧಿಸಿ ಅಧಿಕೃತವಾಗಿ ಮಾರಾಟ ಮಾಡುವ ಬದಲು ಮರಳು ಲೂಟಿಗೆ ಅವಕಾಶ ನೀಡುತ್ತಾರೆ. ಸಾಮಾನ್ಯ ಜನ, ತುರ್ತಾಗಿ ಬೇಕಾಗುವ ಒಂದೋ ಎರಡೋ ಲೋಡ್ ಮರಳನ್ನು ಹತ್ತಿರದ ಹಳ್ಳದಿಂದ ಸಂಗ್ರಹಿಸಿ ತಂದರೆ ಅವರ ವಿರುದ್ಧ ಪೊಲೀಸರು ತಪ್ಪದೆ ಕೇಸ್ ದಾಖಲು ಮಾಡುತ್ತಾರೆ ಮತ್ತು ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ದುಬಾರಿ ದಂಡ ವಿಧಿಸುತ್ತಾರೆ. ಅತ್ತ ಮರಳಿನ ಅಕ್ರಮ ಸಾಗಾಟ ಅವ್ಯಾಹತವಾಗಿ ನಡೆಯುತ್ತಲೇ ಇರುತ್ತದೆ.


ಸಮಸ್ಯೆಯನ್ನು ಪರಿಶೀಲಿಸಿ ಶೀಘ್ರವಾಗಿ ಬಗೆಹರಿಸಲಾಗುವುದು ಎಂದು ಮುಖ್ಯ ಮಂತ್ರಿ ಸಿದ್ದರಾಮಯ್ಯ ಕಾಂಗ್ರೆಸ್ ಶಾಸಕರಿಗೆ ಭರವಸೆ ನೀಡಿದ್ದಾರೆ ಎನ್ನಲಾಗಿದೆ. ಜಿಲ್ಲಾ ಮಟ್ಟದಲ್ಲಿ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ಸಮಿತಿ ರಚಿಸಬೇಕು ಮತ್ತು ಜಿಲ್ಲೆಯ ಶಾಸಕರು ಅದರ ಸದಸ್ಯರಾಗಿರ ಬೇಕು ಎಂದು ಕೆಲ ಶಾಸಕರು ಮುಖ್ಯ ಮಂತ್ರಿಗೆ ಸಲಹೆ ನೀಡಿದ್ದಾರೆ, ಶಾಸಕರ ಸಲಹೆಯನ್ನು ಒಪ್ಪಿದರೆ ಮರಳು ಅಕ್ರಮ ದಂಧೆಗೆ ಕಡಿವಾಣ ಬೀಳುತ್ತದೆ ಎಂಬುದು ಅನುಮಾನಾಸ್ಪದ. ಮರಳು ದರ ನಿಗದಿ ಮಾಡುವ ವಿಷಯದಲ್ಲಿ ಜನಾಭಿಪ್ರಾಯವನ್ನು ಪಡೆಯಲು ಅವಕಾಶ ಇರಬೇಕು. ಜಿಲ್ಲಾ ಮಟ್ಟದ ಸಮಿತಿಯಲ್ಲಿ ಜನಸಂಘಟನೆಗಳ ಹಾಗೂ ವಿಶೇಷವಾಗಿ ಕಟ್ಟಡ ನಿರ್ಮಾಣ ಕಾರ್ಮಿಕರ ಸಂಘದ ಪ್ರತಿನಿಧಿಗಳನ್ನು ಸೇರಿಸಲು ಅವಕಾಶವಾಗುವಂತೆ ಮರಳು ನೀತಿಯನ್ನು ಸಮಗ್ರವಾಗಿ ಪರಿಷ್ಕರಿಸಬೇಕು.

# ಸಾಹಿತ್ಯ ಸಮ್ಮೇಳನ : ಮಾತೃಭಾಷಾ ಕಲಿಕೆಯ ಮಾಧ್ಯಮದ ಪ್ರಶ್ನೆ




'ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ' ಎಂದು ಹೇಳಲಾಗುವ ಕನ್ನಡ ಸಾಹಿತ್ಯ ಪರಿಷತ್ತಿಗೆ ನೂರರ ಸಂಭ್ರಮ. ಈ ಸಂದರ್ಭದಲ್ಲೇ 2015ರ ಆರಂಭದಲ್ಲಿ ಹಾಸನ ಜಿಲ್ಲೆಯಲ್ಲಿ ನಡೆಯಲಿರುವ 81ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರ ಆಯ್ಕೆ ಚರ್ಚೆಗೆ ಈಡಾಗಿದೆ. ಹಿಂದೆಯೂ ಪ್ರತಿ ಬಾರಿಯೂ ಅಧ್ಯಕ್ಷರನ್ನು ಆಯ್ಕೆ ಮಾಡಿದ ಬಳಿಕ ವಾದ-ವಿವಾದ ಏಳುತ್ತಿದ್ದುದು ಸಾಮಾನ್ಯ. ಆದರೆ ಈಗಿನದು ವ್ಯಕ್ತಿಗತ ನೆಲೆಯಂತಹದ್ದಲ್ಲ ಎಂಬುದೇ ವಿಶೇಷ.

ನೂರರ ಸಂಭ್ರಮದ ಕಾಲಕ್ಕೆ ಸಮ್ಮೇಳನದ ಅಧ್ಯಕ್ಷತೆಯನ್ನು ಈ ಬಾರಿ ದಲಿತ ಸಾಹಿತಿಗೇ ವಹಿಸಬೇಕು ಎಂಬುದು ಕ.ಸಾ.ಪ.ದ ಅಧ್ಯಕ್ಷರಾದ ಪುಂಡಲೀಕ ಹಾಲಂಬಿ ಮತ್ತು ಸಮಿತಿಯ ದೃಢ ಅಭಿಪ್ರಾಯ. ಅದಕ್ಕಾಗಿ ನಾಡಿನ ಒಬ್ಬ ಹಿರಿಯ ಸಾಹಿತಿ, ಸಮಾನತೆಯ ಹೋರಾಟಗಾರರೂ ಆಗಿರುವ ದೇವನೂರು ಮಹಾದೇವರನ್ನು ಆಯ್ಕೆ ಮಾಡಿದ್ದು ಅತ್ಯಂತ ಸ್ವಾಗತಾರ್ಹ, ಶ್ಲಾಘನೀಯ ತೀರ್ಮಾನ. ಇದುವರೆಗೂ ಈ ನೂರು ವರುಷಗಳಲ್ಲಿ ಒಬ್ಬರೇ ಒಬ್ಬ ದಲಿತ ಸಾಹಿತಿ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಲು ಅವಕಾಶವೇ ದೊರೆತಿರಲಿಲ್ಲ ಎಂಬುದು ತಿಳಿದರೆ ತೀರ್ಮಾನದ ಮಹತ್ವ ಅರ್ಥವಾದೀತು. ಈ ಹಿನ್ನೆಲೆಯಲ್ಲಿ ದೇವನೂರರ ಆಯ್ಕೆ ಕೇವಲ ಪ್ರಗತಿಪರರಿಗೆ ಮಾತ್ರವಲ್ಲ, ಸಮಾನತೆ, ಮಾನವೀಯತೆಗೆ ಮಿಡಿಯುವ ಎಲ್ಲರಿಗೂ ಸಂತಸದ ವಿಷಯವೇ.



ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಆಹ್ವಾನವನ್ನು ದೇವನೂರರು ಒಪ್ಪದಿರುವುದು ಗಮನ ಸೆಳೆದ ಮತ್ತೊಂದು ವಿಷಯ. ಈ ಹಿಂದೆಯೂ ಎರಡು ಬಾರಿ ನಿರಾಕರಿಸಿದ್ದಿದೆ. ಹಾಗೆಯೇ ನೃಪತುಂಗ ಪ್ರಶಸ್ತಿಯನ್ನೂ. ಈಗ ಅವರು ಎತ್ತಿದ ಪ್ರಶ್ನೆಯೂ ಅತ್ಯಂತ ಗಹನವಾದ ಮಹತ್ವದ ಸಂಗತಿಯೂ ಕೂಡ. ಪ್ರಾಥಮಿಕ ಶಿಕ್ಷಣದಲ್ಲಿ ಕಲಿಕೆಯ ಮಾಧ್ಯಮವಾಗಿ ಮಗುವಿನ ಮಾತೃಭಾಷೆಯ ಕಲಿಕೆ ಅಥವಾ ಕನ್ನಡದಂತಹ ಪ್ರಾದೇಶಿಕ ಭಾಷೆಯ ಕಲಿಕೆಯ ಸರಕಾರದ ನಿರ್ದೇಶನವನ್ನು ಸರ್ವೋಚ್ಚ ನ್ಯಾಯಾಲಯವು ತಳ್ಳಿಹಾಕಿದೆ. ಈ ಹಿಂದೆ ಕರ್ನಾಟಕ ಸರಕಾರವು 1989 ರಿಂದಲೂ ನಡೆದ ಹಲವಾರು ಪ್ರಕ್ರಿಯೆಗಳ ಬಳಿಕ 1994ರ ಏಪ್ರಿಲ್ 29 ರಂದು ಹೊರಡಿಸಿದ ಆದೇಶಕ್ಕೆ ಬಂದ ಆಕ್ಷೇಪದ ವಿಚಾರಣೆ ನಡೆಸಿ ರಾಜ್ಯ ಉಚ್ಚ ನ್ಯಾಯಾಲಯವು 2008ರ ಜುಲೈ 2ರಂದು ನೀಡಿದ ತೀರ್ಪಿನಲ್ಲಿ ಸರಕಾರದ ನಿರ್ಧಾರವನ್ನು ತಳ್ಳಿ ಹಾಕಿದೆ. ಇದು ಶಿಕ್ಷಣದ ವ್ಯಾಪಾರಿಗಳು ಮತ್ತು 'ಪಾಲಕರೂ' ಸುಪ್ರಿಂ ಕೋರ್ಟ್‌ನ ಮೆಟ್ಟಿಲೇರಿದ್ದರಿಂದ ಮೇ 6, 2014 ರಂದಿನ ತನ್ನ ತೀರ್ಪಿನಲ್ಲಿ ಹೈಕೋರ್ಟ್‌ನ ತೀರ್ಪನ್ನು ಎತ್ತಿ ಹಿಡಿಯಿತು ಮಾತ್ರವಲ್ಲ, ಪ್ರಾಥಮಿಕ ಶಿಕ್ಷಣದಲ್ಲಿ ಮಾತೃಭಾಷಾ ಕಲಿಕೆಯನ್ನು ಶಿಕ್ಷಣದ ನೀತಿಯನ್ನಾಗಿ ಮಾಡುವುದನ್ನು ಹೇರಿಕೆಯೆಂದೂ, ಮೂಲಭೂತ ಹಕ್ಕುಗಳ ಉಲ್ಲಂಘನೆಯೆಂದೂ ಸಂವಿಧಾನದ ಪೀಠವು ಸಾರಿತು. ಭಾಷಾ ಮಾಧ್ಯಮದ ಆಯ್ಕೆ ಪ್ರತಿ ಮಗುವಿನ ಅಥವಾ ಅದರ ಪಾಲಕರ ಹಕ್ಕು ಎಂದೂ ಪ್ರತಿಪಾದಿಸಿತು. ಖಾಸಗಿ ಸಂಸ್ಥೆಗಳು ಆಂಗ್ಲ ಭಾಷೆಯನ್ನೂ ಒಳಗೊಂಡು ಶಿಕ್ಷಣ ಮಾಧ್ಯಮವನ್ನಾಗಿ ಕಲಿಸಲು(ವ್ಯಾಪಾರ ಮಾಡಲು) ತಮಗೆ ನೀಡಿದ ಮುಕ್ತ ಅವಕಾಶ ಎಂದು ಸಾರಿದವು. ಒಟ್ಟಾರೆ ಇಲ್ಲಿಯವರೆಗೂ ಇಡೀ ಜಗತ್ತಿನಲ್ಲಿ ಆಳವಾದ ಅಧ್ಯಯನ, ಅನುಭವಗಳಿಂದ ರೂಪಿತವಾಗಿ, ಪಾಲಿಸಿಕೊಂಡು ಬರಲಾಗಿದ್ದ ಪ್ರಮುಖ ನೀತಿಯನ್ನೇ ನಿರ್ಬಂಧಿಸುವ ತೀರ್ಪು ಇದಾಗಿದೆ ಎನ್ನಬಹುದು. ಇದು ಕೇವಲ ಕರ್ನಾಟಕ ಮಾತ್ರವಲ್ಲ, ಇಡೀ ಭಾರತ ದೇಶವನ್ನೇ ವ್ಯಾಪಕವಾಗಿ ಬಾಧಿಸಲಿದೆ, ಪ್ರಭಾವಿಸಲಿದೆ.

ಸರ್ವೋಚ್ಚ ನ್ಯಾಯಾಲಯವು ತನ್ನ ತೀರ್ಪಿಗೆ ಸಂವಿಧಾನದ ಮೂಲಭೂತ ಹಕ್ಕುಗಳು, ಅಭಿವ್ಯಕ್ತಿ ಸ್ವಾತಂತ್ರ್ಯದಂತಹ ವಿಧಿಗಳನ್ನು ಆಧಾರವಾಗಿರಿಸಿಕೊಳ್ಳಲಾಗಿದೆ ಎಂದು ಹೇಳಿದೆ. ಅದಕ್ಕೆ ಅದರದ್ದೇ ಆದ ಮಿತಿಗಳೂ ಇರಬಹುದು. ಆದರೆ ವಾಸ್ತವದಲ್ಲಿ ಅವೆಲ್ಲಾ ಜಾಗತೀಕರಣದ ಪ್ರಕ್ರಿಯೆಗೆ ಅನುಗುಣವಾಗಿ ಬಂದ ಹೊಸ ವ್ಯಾಖ್ಯಾನಗಳೇ ಆಗಿವೆ. ಅದರ ವಾಸ್ತವಿಕ ಜಾರಿಯಲ್ಲಿ ಕನ್ನಡದಂತಹ ದೇಸೀ ಭಾಷೆಗಳು, ಸಂಸ್ಕೃತಿ ದುರ್ಬಲವಾಗುತ್ತಾ ನಾಶವಾಗುವುದರಲ್ಲಿ ಅನುಮಾನವಿಲ್ಲ. ವಸಾಹತುಶಾಹಿಗಳ ಆಳ್ವಿಕೆ ಅಡಿಯಲ್ಲಿ ನಲುಗಿದ ಆಫ್ರಿಕಾ ಖಂಡದ ಅನುಭವ ಇಂತಹುದೇ ಕ್ರೂರ ಸತ್ಯವನ್ನು ರಾಚುತ್ತಿದೆ. ಅಂದರೆ ಜನ ಭಾಷೆಗಳ ಸಾವು ಎಂದರೆ ಜನಾಂಗಗಳ ಸಾವು ಎಂದೇ ಅರ್ಥ.

ಈ ವಿಷಯದಲ್ಲಿ ದೇವನೂರರು ಎತ್ತಿರುವ ಪ್ರಶ್ನೆ ಗಂಭೀರ ನಿಜ. ಆದರೆ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ನಿರಾಕರಿಸುವುದರಿಂದ ಪರಿಹಾರ ಸಿಗಲು ಸಾಧ್ಯವೇ? ಸರ್ವೋಚ್ಚ ನ್ಯಾಯಾಲಯದ ಐದು ನ್ಯಾಯಮೂರ್ತಿಗಳ ಸಂವಿಧಾನ ಪೀಠದ ತೀರ್ಪನ್ನು ಮರು ಪರಿಶೀಲನೆ ಕೋರುವುದಿದ್ದರೆ ಅಲ್ಲಿಗೇ ಹೋಗಬೇಕು. ಈಗಾಗಲೇ ರಾಜ್ಯ ಸರಕಾರ 'ಕ್ಯುರೇಟರ್' ಅರ್ಜಿಯನ್ನು ಹಾಕಿದೆ. ಹಾಗೆಯೇ ಸಂವಿಧಾನದ ವಿಧಿಗಳೇ ಹಾಗಿವೆಯೆಂದರೆ ಸಂವಿಧಾನದ ತಿದ್ದುಪಡಿಯೇ ಅನಿವಾರ್ಯ. ಅಂದರೆ ಇದು ಅಂತಿಮವಾಗಿ ಒಂದು ಮಹತ್ವದ ರಾಜಕೀಯ ಪ್ರಶ್ನೆಯಾಗಿದೆ.

ಆದ್ದರಿಂದ ಈ ಪ್ರಶ್ನೆಯ ಆಧಾರದಲ್ಲೇ ಕರ್ನಾಟಕದಲ್ಲಿಯೂ, ದೇಶದಲ್ಲಿಯೂ ಒಂದು ತೀವ್ರವಾದ ರಾಜಕೀಯ ಜನಾಂದೋಲನ ನಡೆಯಬೇಕಿದೆ. ಇದು ಜಾಗತೀಕರಣ-ಕ್ಕೆ ಮುಖಾಮುಖಿಯಾಗುವ ಹೋರಾಟ. ಈ ಅಂಶಗಳನ್ನು ದೇವನೂರರು ತಮ್ಮ ಇತ್ತೀಚಿನ ಬಹಿರಂಗ ಪತ್ರದಲ್ಲಿ ಗುರುತಿಸಿದ್ದಾರೆ.

ಹೀಗಿರುವಾಗಲೂ, ದೇವನೂರರು ಸಮ್ಮೇಳನದ ಅಧ್ಯಕ್ಷರಾಗಿ ಈ ಪ್ರಶ್ನೆಯನ್ನು

ಪುಟ 12 ಕ್ಕೆ



# ರೈತ ಕಾರ್ಮಿಕರನ್ನು ಕಡೆಗಣಿಸಿದ ಕೇಂದ್ರ ಸರ್ಕಾರದ ನೀತಿಯ ವಿರುದ್ಧ ಹೋರಾಡಲು

## 6ನೇ ಬೆಳಗಾವಿ ಜಿಲ್ಲಾ ಸಮ್ಮೇಳನ ಕರೆ

ಡಿಸೆಂಬರ 6 ಮತ್ತು 7 ರಂದು ಎರಡು ದಿನ ಬೆಳಗಾವಿಯ ಕನ್ನಡ ಸಾಹಿತ್ಯ ಭವನದಲ್ಲಿ ಸಿಪಿಐ(ಎಂ) ಪಕ್ಷದ 6 ನೇ ಜಿಲ್ಲಾ ಸಮ್ಮೇಳನ ನಡೆಯಿತು.

ಕರ್ನಾಟಕ ರಾಜ್ಯದಲ್ಲಿಯೇ ಕುಂದಾನಗರಿ ಎಂದು ಹೆಸರು ವಾಸಿಯಾದ ಬೆಳಗಾವಿ ಅತೀ ದೊಡ್ಡ ಜಿಲ್ಲೆ. 13,454 ಚ.ಮೀ. ಭೌಗೋಳಿಕ ವಿಸ್ತೀರ್ಣ ಹೊಂದಿರುವ ಜಿಲ್ಲೆಯಲ್ಲಿ 47,79,661 ಜನಸಂಖ್ಯೆಯುಳ್ಳ 9,83,854 ಕುಟುಂಬಗಳುಳ್ಳ ಜಿಲ್ಲೆಯಾಗಿದೆ. ರಾಜ್ಯದಲ್ಲಿ ಎರಡನೇಯ ಕೈಗಾರಿಕಾ ಪ್ರದೇಶ ಬೆಳಗಾವಿ.





ಜಿಲ್ಲೆಯಲ್ಲಿ ಯಾವಾಗಲೂ ಗಡಿ ಹಾಗೂ ಭಾಷೆ ಚರ್ಚೆಯ ವಿಷಯವಾಗಿರುತ್ತದೆ. ಗಡಿಯ ಕುರಿತು ಗೊಂದಲದ ಹುಟ್ಟಿಸುವಂತಹ ರಾಜಕೀಯ ನಡೆದಿದೆ. ಜಿಲ್ಲೆಯಲ್ಲಿ 18 ವಿಧಾನಸಭಾ ಕ್ಷೇತ್ರಗಳು, 86 ಜಿಲ್ಲಾ ಪಂಚಾಯತ, 336 ತಾಲೂಕಾ ಪಂಚಾಯತ, 485 ಗ್ರಾಮ ಪಂಚಾಯತ ಕ್ಷೇತ್ರಗಳಿವೆ. ಇದರಲ್ಲಿ ಬಹುತೇಕ ಕಡೆಗಳಲ್ಲಿ ಬಿಜೆಪಿಯ ಪ್ರಾಬಲ್ಯವಿದೆ. 485 ಗ್ರಾಮ ಪಂಚಾಯತಗಳಲ್ಲಿ 8441 ಪಂಚಾಯತ ಚುನಾಯಿತ ಸದಸ್ಯರಿದ್ದಾರೆ. ಇದರಲ್ಲಿ 4798 ಪುರುಷರು, 3643 ಮಹಿಳೆಯರು ಇದ್ದು, 1155 ಪರಿಶಿಷ್ಟ ಜಾತಿ ಪ್ರತಿನಿಧಿಗಳು ಇದ್ದಾರೆ. ಇದರಲ್ಲಿ 521 ಪುರುಷರು, 634 ಮಹಿಳೆಯರು ಇದ್ದಾರೆ. ಜಿಲ್ಲೆಯಲ್ಲಿ ಚುನಾಯಿತ ಮಹಿಳೆಯರಿದ್ದರೂ ಬಹುತೇಕ ಪಂಚಾಯತಗಳಲ್ಲಿ ಅವರ ಕುಟುಂಬದವರ ಮಧ್ಯಪ್ರವೇಶ ಹೆಚ್ಚಾಗಿದೆ.



ಬೆಳಗಾವಿ ಜಿಲ್ಲೆಯಲ್ಲಿ 94964 ಪರಿಶಿಷ್ಟ ಜಾತಿಯ ಕುಟುಂಬಗಳಿದ್ದು, 18431 ಕುಟುಂಬಗಳು ನಗರ ಪ್ರದೇಶದಲ್ಲಿ ವಾಸಿಸುತ್ತಿದ್ದರೆ, ಇನ್ನುಳಿದ 73533 ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ವಾಸಿಸುತಿದ್ದ ಪರಿಶಿಷ್ಟ ಜಾತಿಯ ಜನ ಅನಕ್ಷರಸ್ಥರಾಗಿದ್ದಾರೆ. ಇದರಲ್ಲಿ ಸಣ್ಣ ರೈತರು ಇದ್ದಾರೆ. ಇವರು ಹೊಂದಿರುವ ಜಮೀನು 9773.2 ಹೆಕ್ಟರ್ ಭೂಮಿ 1 ಹೆಕ್ಟರ್ ಭೂಮಿ ಹೊಂದಿದ 23217 ಜನರು ಇದ್ದಾರೆ.

18 ವಿಧಾನಸಭಾ ಕ್ಷೇತ್ರಗಳು ಹೊಂದಿರುವ ಜಿಲ್ಲೆಯಲ್ಲಿ 9 ಕ್ಷೇತ್ರ ಬಿಜೆಪಿ, 6 ಕ್ಷೇತ್ರ ಕಾಂಗ್ರೆಸ್, ಎಂಇಎಸ್–2, ಹಾಗೂ ಬಿಎಸ್ಆರ್ 1 ಕ್ಷೇತ್ರ ಹೊಂದಿರುತ್ತದೆ. 18 ಕ್ಷೇತ್ರಗಳ ಪೈಕಿ 2 ಕ್ಷೇತ್ರಗಳು ಮಾತ್ರ ಪರಿಶಿಷ್ಟ ಜಾತಿಗೆ ಮೀಸಲಾಗಿರುವ ಕ್ಷೇತ್ರಗಳು. (ರಾಯಬಾಗ, ಕುಡುಚಿ) ಇವೆ. ಹಾಗೂ ಯಮಕನಮರಡಿ ಪರಿಶಿಷ್ಟ ಪಂಗಡಕ್ಕೆ ಮೀಸಲಾಗಿರುವ ಕ್ಷೇತ್ರ. ಉಳಿದಂತೆ 13 ಕ್ಷೇತ್ರಗಳು ಲಿಂಗಾಯತ ಸಮುದಾಯದವರ ಕೈಯಲ್ಲಿ ಇವೆ. 2 ಕ್ಷೇತ್ರಗಳು (ಬೆಳಗಾವಿ ನಗರ) ಅಲ್ಪಸಂಖ್ಯಾತರ ಕೈಯಲ್ಲಿ ಇವೆ. (ಜೈನ್, ಮುಸ್ಲಿಂ) ಇದರಿಂದ ಜಿಲ್ಲೆಯಲ್ಲಿ ಹೆಚ್ಚು ಜಾತಿಯ ರಾಜಕಾರಣ ನಡೆ–ಯುತ್ತಿದೆ.

ಸಾಮಾಜಿಕವಾಗಿ–ಆರ್ಥಿಕವಾಗಿ ಜಿಲ್ಲೆಯಲ್ಲಿ ಎಸ್.ಸಿ., ಎಸ್.ಟಿ. ಜನರು ಹಿಂದುಳಿದಿದ್ದಾರೆ. ಅವರ ಮೂಲ ಕಸಬು ಚಪ್ಪಲಿ ಹೊಲಿಯುವುದು, ಬುಟ್ಟಿ ಮಾಡುವುದು, ಮೀನು ಮಾರಾಟ, ಹಮಾಲಿ, ಸಣ್ಣ ಸಣ್ಣ ಕೆಲಸಗಳಲ್ಲಿದ್ದಾರೆ. ಕೆಲವರು ಸರ್ಕಾರಿ ಹುದ್ದೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ.

ಈಗಲೂ ಜಿಲ್ಲೆಯ ಕೆಲವೊಂದು ಕಡೆ ದಲಿತರ ಮೇಲೆ ಹಲ್ಲೆಗಳು ನಡೆಯುತ್ತಲಿವೆ. ಒಂದು ವರ್ಷದ ಹಿಂದೆ ಅಥಣಿ ತಾಲೂಕಿನ ಶೇಗುಣಿಸಿ ಗ್ರಾಮದಲ್ಲಿ ಯಲ್ಲಮ್ಮನ ದೇವಸ್ಥಾನದ ಗರ್ಭ ಗುಡಿಯಲ್ಲಿ ದಲಿತ ಯುವಕ ಪ್ರವೇಶ ಮಾಡಿದ್ದಕ್ಕೆ ಅಲ್ಲಿಯ ಸವರ್ಣೀಯರು ಹಲ್ಲೆ ಮಾಡಿ ಬಹಿಷ್ಕಾರ ಹಾಕಿದ್ದರು. ಸಿಪಿಐ(ಎಂ) ಮಧ್ಯ ಪ್ರವೇಶ ಮಾಡಿತು.

ಬೆಳಗಾವಿ ಜಿಲ್ಲೆಯಲ್ಲಿ ಕಬ್ಬು ಬೆಳೆಗಾರ ರೈತರ ಸಂಖ್ಯೆ ಹೆಚ್ಚು ಇದೆ. ರೈತರು ಬೆಳೆದ ಕಬ್ಬಿಗೆ ನಿಗದಿತ ದರ ನೀಡಲು ಹೋರಾಟ ಮಾಡಿದ್ದರಿಂದ ಕಳೆದ ಅಧಿವೇಶನದಲ್ಲಿ ಸರ್ಕಾರವೇ ರೂ. 2500/– ನಿಗದಿಪಡಿಸಿದ್ದು, ಒಂದು ವರ್ಷ ಕಳೆದರೂ ಇನ್ನೂವರೆಗೆ ಸರ್ಕಾರವೇ ನಿಗದಿ ಪಡಿಸಿದ ದರ ರೈತರಿಗೆ ಸಿಕ್ಕಿಲ್ಲ. ಈ ಕುರಿತು ರೈತ ಸಂಘಟನೆಗಳು ಹೋರಾಟ ನಡೆಸಿದ್ದಾರೆ.

ಡಿಸೆಂಬರ 6 ಮತ್ತು 7 ಎರಡು ದಿನ ಪಕ್ಷದ 6ನೇ ಜಿಲ್ಲಾ ಸಮ್ಮೇಳನ ಬೆಳಗಾವಿ ಕನ್ನಡ ಸಾಹಿತ್ಯ ಭವನದಲ್ಲಿ ಜರುಗಿದೆ. ಸಮ್ಮೇಳನದ ಅಂಗವಾಗಿ ಕನ್ನಡ ಸಾಹಿತ್ಯ ಭವನವನ್ನು ಕೆಂಬಾವುಟಗಳಿಂದ ಸಿಂಗರಿಸಲಾಗಿತ್ತು. ಒಂದು ಕಡೆ ಚಳಿಗಾಲ ಅಧಿವೇಶನದ ಭರಾಟೆಯ ಬ್ಯಾನರ್‌ಗಳು ರಾರಾಜಿಸುತ್ತಿದ್ದರೆ ಸಮ್ಮೇಳನದ ಅಂಗವಾಗಿ ಕನ್ನಡ ಸಾಹಿತ್ಯ ಭವನ ಹೊರ–ಒಳಗೆ ಕೆಂಬಾವುಟಗಳು ರಾರಾಜಿಸುತ್ತಿದ್ದವು.

ಸಮ್ಮೇಳನದ ಅಂಗವಾಗಿ ಮಧ್ಯಾಹ್ನ 12.30 ಕ್ಕೆ ಜಿಲ್ಲೆಯ ಪಕ್ಷದ ಹಿರಿಯ ಮುಖಂಡರಾದ ವ್ಹಿ.ಪಿ. ಕುಲಕರ್ಣಿರವರು ಧ್ವಜಾರೋಹಣ ಮಾಡುವುದರ ಮೂಲಕ ಸಮ್ಮೇಳನದ ಕಲಾಪಗಳಿಗೆ ಚಾಲನೆ ನೀಡಿದರು.

ಅನಂತರ ನಡೆದ ಬಹಿರಂಗ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯರಾದ ಎಸ್. ಪ್ರಸನ್ನ ಕುಮಾರ ಕಳೆದ 6 ತಿಂಗಳ ಹಿಂದೆ ಕೇಂದ್ರದಲ್ಲಿ ಆಯ್ಕೆಯಾದ ಬಿಜೆಪಿ ಸರ್ಕಾರದ ಪ್ರಧಾನಿ ನರೇಂದ್ರ ಮೋದಿಯವರು ಕಾರ್ಮಿಕ ಕಾನೂನುಗಳನ್ನು ತಿದ್ದುಪಡಿ ಮಾಡಿ, ದೇಶದ ಕಾರ್ಮಿಕರನ್ನು ಕಡೆಗಣಿಸಿ, ಬಂಡವಾಳಿಗರ ಪರವಾಗಿ ಕೆಲಸ ಮಾಡುತ್ತಿದ್ದಾರೆ. ಇದರ ವಿರುದ್ಧ ದುಡಿಯುವ ಜನ ಒಗ್ಗಟ್ಟಾಗಿ ಹೋರಾಟ ನಡೆಸಬೇಕಾಗಿದೆ ಎಂದರು.

ಕೋಮು ಆಧಾರದಲ್ಲಿ ಬಿಜೆಪಿಯವರು ಕೋಮು ರಾಜಕಾರಣ ಮಾಡುತ್ತಿದ್ದಾರೆ. ಇಂದು ಅಂದರೆ ಡಿಸೆಂಬರ 6 ಬಾಬ್ರಿ ಮಸೀದಿ ಧ್ವಂಸ ಮಾಡಿ ಒಂದು ಕೋಮಿನ ಜನರಿಗೆ ಅವಮಾನಿಸಿದ ದಿನವಾಗಿದೆ. ಇಂಥಹ ಕೋಮುವಾದಿ ಪಕ್ಷವೇ ಇವತ್ತು ಕೇಂದ್ರದಲ್ಲಿ ನಮ್ಮನಾಳುತ್ತಿದೆ. ಹಿಂದಿನ ಸರ್ಕಾರದವರು ಜಾರಿಗೆ ತಂದಿರುವ ರೇಗಾ ಕಾನೂನು ಬದಲಾವಣೆ ಮಾಡಿ ರೇಗಾ ಯೋಜನೆ ನಾಶ ಮಾಡುತ್ತಿರುವ ಕೋಮುವಾದಿ ಪಕ್ಷವನ್ನು ಹಿಮ್ಮೆಟ್ಟಿಸಲು ನಾವು ಪಕ್ಷದ ಸಂಘಟನೆಯನ್ನು ಬಲಿಷ್ಠವಾಗಿ ಬೆಳೆಸಬೇಕೆಂದು ಮಹಾರಾಷ್ಟ್ರ ರಾಜ್ಯದ ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯರಾದ ಪ್ರಕಾಶ ಚೌಧರಿ ಹೇಳಿದರು.

ವಿದೇಶಿ ಪ್ರಯಾಣ ಮಾಡುವುದರಲ್ಲೇ ಮುಳುಗಿರುವ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ನಮ್ಮ ದೇಶದ ವಿಮಾ, ರಕ್ಷಣಾ, ರೇಲ್ವೆ, ಇತರ ರಂಗಗಳಲ್ಲಿ ವಿದೇಶದ ಖಾಸಗೀ ಬಂಡವಾಳವನ್ನು ಆಹ್ವಾನಿಸಿ ಆ ಮೂಲಕ ವಿದೇಶಿ ಬಂಡವಾಳ ಶಾಹಿಗಳಿಗೆ ನಮ್ಮ ದೇಶಕ್ಕೆ ಬರಲು ರತ್ನ ಗಂಬಳಿ ಹಾಸುತ್ತಿದ್ದಾರೆ. ಇದನ್ನು ನೋಡಿದ–ರೆ ಮೋದಿಯವರು ಕಾರ್ಪೋರೇಟ್ ಕಂಪನಿಗಳ ಏಜೆಂಟ್‌ನಂತೆ ಕೆಲಸ ಮಾಡುತ್ತಿದ್ದಾರೆಂದು ಅನಿಸುತ್ತಿದೆ ಎಂದು ಸಭೆಯ ಅಧ್ಯಕ್ಷತೆಯನ್ನು ವಹಿಸಿದ ಜಿ.ಎಂ. ಜೈನೆಖಾನ ಹೇಳಿದರು.

ಎರಡನೇ ದಿನ ಪ್ರತಿನಿಧಿ ಅಧಿವೇಶನ ನಡೆಯಿತು. ಮಾತುಗಳ ಮೂಲಕ ಜನರನ್ನು ಮರಳು ಮಾಡಲು ಹೊರಟಿರುವ ಮೋದಿಯ ಮೋಡಿ ಜನರಿಗೆ ತಿಳಿಯದೇ ಇರುವುದಿಲ್ಲ. ಒಳ್ಳೆಯ ದಿನ ಬರಲಿವೆ ಎಂದು ಸುಳ್ಳು ಹೇಳಿದ ಪ್ರಧಾನಿಯವರು ಈ ದೇಶದ ದುಡಿಯುವ ವರ್ಗಕ್ಕೆ ಕೆಟ್ಟ ದಿನಗಳನ್ನು ಕೊಟ್ಟು, ಬಂಡವಾಳ ಶಾಹಿಗಳಿಗೆ ಒಳ್ಳೆಯ ದಿನಗಳನ್ನು ಕೊಡುತ್ತಿದ್ದಾ–ರೆ ಎಂದು ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯರಾದ ನಿತ್ಯಾನಂದ ಸ್ವಾಮಿಯವರು ಹೇಳಿದರು. ಮುಂದುವರೆದು ಅವರು ಸಮ್ಮೇಳನದ ಉದ್ದೇಶವನ್ನು ವಿವರವಾಗಿ ತಿಳಿಸಿದರು.

ಕಾರ್ಯದರ್ಶಿಯವರು ಮಂಡಿಸಿದ ಕರಡು ವರದಿಯ ಮೇಲೆ 17 ಜನ ಸಂಗಾತಿಗಳು ಮಾತನಾಡಿದರು.

ಕೊನೆಯಲ್ಲಿ ಜಿಲ್ಲಾ ಸಮಿತಿ ರಚನೆಯಾಗಿ 9+1 ಒಟ್ಟು 10 ಜನರ ಬೆಳಗಾವಿ ಜಿಲ್ಲಾ ಸಂಘಟನಾ ಸಮಿತಿ ರಚಿಸಲಾಯಿತು. ಜಿ.ಎಂ. ಜೈನೆಖಾನ ಸಂಘಟನಾ ಜಿಲ್ಲಾ ಸಮಿತಿಯ ಕಾರ್ಯದರ್ಶಿಯಾಗಿ ಸರ್ವಾನುಮತದಿಂದ ಆಯ್ಕೆಯಾದರು. ಉಳಿದಂತೆ ಸಿ.ಎ. ಖರಾಡೆ, ಜಿ.ವ್ಹಿ. ಕುಲಕರ್ಣಿ, ಎಲ್.ಎಸ್. ನಾಯ್ಕ, ದಾದಾ ಸಾಹೇಬ, ಎಫ್.ಎಂ. ನದಾಫ್, ಎಸ್.ಬಿ. ಹಳ್ಳಿ, ಪ್ರೇಮಾ ಕಿಲ್ಲೇದಾರ, ನಾಗಪ್ಪ ಸಂಗೊಳ್ಳಿ ಸಮಿತಿ ಸದಸ್ಯರಾಗಿ ಹಾಗೂ ವ್ಹಿ.ಪಿ. ಕುಲಕರ್ಣಿ ಕಾಯಂ ಆಹ್ವಾನಿತರಾಗಿ ಆಯ್ಕೆಯಾದರು.

**ವರದಿ – ಜಿ.ಎಂ. ಜೈನೆಖಾನ**

ಜನಶಕ್ತಿ
ಕನ್ನಡ ವಾರಪತ್ರಿಕೆ

# ಕಾರ್ಪೊರೇಟ್ ಪ್ರೇರಿತ ಪ್ರಧಾನ ಮಂತ್ರಿಗಳ ಬಣ್ಣದ ಮಾತಿನಿಂದ ಮೂಲಭೂತ ಸಮಸ್ಯೆಗಳಿಗೆ ಪರಿಹಾರ ದೊರಕದು – ಜಿ. ಎನ್. ನಾಗರಾಜ್

ವರದಿ – ಎನ್.ಎಲ್. ಭರತ್‌ರಾಜ್




ಮಂಡ್ಯ ಜಿಲ್ಲೆ ಜುಲೈ 1ರ 1939ರಲ್ಲಿ ಉದಯವಾಗಿ 75 ವರ್ಷಗಳನ್ನು ಪೂರೈಸಿ ಅಮೃತ ಮಹೋತ್ಸವವನ್ನು ಆಚರಿಸಿಕೊಳ್ಳುವ ಸಂದರ್ಭದಲ್ಲಿ ಸಿಪಿಐ(ಎಂ) ಪಕ್ಷದ 7ನೇ ಜಿಲ್ಲಾ ಸಮ್ಮೇಳನ ಮದ್ದೂರು ಟೌನ್‌ನಲ್ಲಿ ಡಿಸೆಂಬರ್ 1 ಮತ್ತು 2, 2014ರಂದು ನೆರವೇರಿತು.

ಜಿಲ್ಲೆಯ ಆಡಳಿತದಲ್ಲಿ ಅಭಿವೃದ್ಧಿಗಿಂತ ಬಿಕ್ಕಟ್ಟುಗಳು ವ್ಯಕ್ತಿಪ್ರತಿಷ್ಠೆಗಳು ಹೆಚ್ಚಾಗಿ ಜಾತಿ ಪ್ರತಿಷ್ಠೆಗಳು ಮೇಲುಗೈ ಸಾಧಿಸಿವೆ. ಆರ್ಥಿಕ ಸಾಮಾಜಿಕ ಶೈಕ್ಷಣಿಕ ಅಸಮಾನತೆಯನ್ನು ಹೋಗಲಾಡಿಸುವ ಬದಲು ಪಾಳೇಗಾರಿ ಪ್ರಭುತ್ವ ಪ್ರತಿಗಾಮಿ ಧೋರಣೆಗಳಿಗೆ ಒತ್ತು ನೀಡುವುದೇ ಹೆಚ್ಚಾಗಿದೆ. ಅಂತರ್ ರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆಯುವ ಐ.ಟಿ. ಬಿ.ಟಿ. ನಗರವಾದ ಬೆಂಗಳೂರು ಮತ್ತು ಟಿಪ್ಪು ಸುಲ್ತಾನ್ ಹಾಗೂ ಮೈಸೂರು ಒಡೆಯರ ಆಳ್ವಿಕೆಯ ಸಂಕೇತವಾಗಿ ನಡೆಯುವ ದಸರಾ ಮಹೋತ್ಸವವು ಅಂತರರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆಯುವ ಸಾಂಸ್ಕೃತಿಕ ನಗರವಾದ ಮೈಸೂರು – ಬೆಂಗಳೂರು ಮಧ್ಯದಲ್ಲಿ ಮಂಡ್ಯ ಜಿಲ್ಲೆ. ಆದರೆ 2 ನಗರಗಳ ಬೆಳವಣಿಗೆಗೆ ಹೋಲಿಸಿದರೆ ಮಂಡ್ಯದ ಅಭಿವೃದ್ಧಿ ಏನೇನು ಸಾಲದು. 7 ತಾಲ್ಲೂಕುಗಳಲ್ಲಿ ಮಳವಳ್ಳಿ, ನಾಗಮಂಗಲ, ಕೆ.ಆರ್. ಪೇಟೆ ಅತಿ ಹಿಂದುಳಿದ ತಾಲ್ಲೂಕುಗಳಾಗಿದ್ದು, ಪಾಂಡವಪುರ ಶ್ರೀರಂಗಪಟ್ಟಣ ಹಿಂದುಳಿದ ತಾಲ್ಲೂಕುಗಳಾಗಿವೆ. ಮಂಡ್ಯಾ ತಾಲ್ಲೂಕು ಒಂದು ಮಾತ್ರ ಮುಂದುವರೆದ ತಾಲ್ಲೂಕು ಎಂದು ಡಾ. ನಂಜುಂಡಪ್ಪ ವರದಿ ಹೇಳುತ್ತದೆ.

ಜಿಲ್ಲೆಯ ಒಟ್ಟು ಜನಸಂಖ್ಯೆ 2011ರ ಜನಗಣತಿಯ ಪ್ರಕಾರ 18,05,769 ಅದರಲ್ಲಿ 9,05,085 ಪುರುಷರು ಮತ್ತು 9,00,0684 ಮಹಿಳೆಯರಿದ್ದಾರೆ. ಗ್ರಾಮಾಂತರ ಪ್ರದೇಶದಲ್ಲಿ 14,80,990 (83.97%) ಜನರಿದ್ದು 2,82,715 (16.03%) ಪಟ್ಟಣ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ. 1949 ಗ್ರಾಮಗಳಿದ್ದು 31 ಹೋಬಳಿಗಳಲ್ಲಿ 1369 ಜನವಸತಿಯ ಗ್ರಾಮಗಳಿವೆ. ಒಟ್ಟು ಜನಸಂಖ್ಯೆಯಲ್ಲಿ 2,64,406 ಜನರು (14.99%) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರಿದ್ದಾರೆ. ಇವರಲ್ಲಿ 29% ರಷ್ಟು ಭೂ ಹಿಡುವಳಿದಾರರಿದ್ದಾರೆ. 12.5% ರಷ್ಟು ಮಹಿಳಾ ಭೂಹಿಡುವಳಿದಾರರು, 7% ರಷ್ಟು ಪರಿಶಿಷ್ಟ ಜಾತಿಯವರು ಮಂದಿ ಮಾತ್ರ ಭೂಹಿಡುವಳಿದಾರರು. ಒಟ್ಟು 232 ಗ್ರಾಮ ಪಂಚಾಯ್ತಿಗಳಿದ್ದು 3,813 ಸದಸ್ಯರು ಪ್ರತಿನಿಧಿಸುತ್ತಿದ್ದಾರೆ. 90 ಮಂದಿ ತಾಲ್ಲೂಕು ಪಂಚಾಯ್ತಿ, 40 ಮಂದಿ ಜಿಲ್ಲಾ ಪಂಚಾಯ್ತಿ ಸದಸ್ಯರಿದ್ದು 25 ಮಂದಿ ಪುರುಷರು 15 ಮಂದಿ ಮಹಿಳೆಯರಿದ್ದಾರೆ. 3 ಹಂತದ ಪಂಚಾಯ್ತಿಗಳಲ್ಲಿ 33% ಕ್ಕಿಂತ ಹೆಚ್ಚು ಮಹಿಳೆಯರು ಇರುವುದು ಸಕಾರಾತ್ಮಕ ಅಂಶ. ಶಿಕ್ಷಣದಲ್ಲಿ ಜಿಲ್ಲೆ 61%ರಷ್ಟಿದ್ದು ರಾಜ್ಯದ ಸರಾಸರಿ 66.64%ಕ್ಕಿಂತ ಮಂಡ್ಯ ಜಿಲ್ಲೆ ಕಡಿಮೆ ಇದೆ. ಗ್ರಾಮಾಂತರ ಪ್ರದೇಶದಲ್ಲಿ ಪುರುಷರು 67.8% ಶಿಕ್ಷಣ ಪಡೆದರೆ 47% ಮಹಿಳೆಯರು ಶಿಕ್ಷಣ ಪಡೆದಿದ್ದಾರೆ. ನಗರ ಪ್ರದೇಶ 84.3% ರಷ್ಟು ಪುರುಷರು ಶಿಕ್ಷಣ ಪಡೆದಿದ್ದರೆ, 72.3% ರಷ್ಟು ಮಹಿಳೆಯರು ಶಿಕ್ಷಣ ಪಡೆದಿದ್ದಾರೆ ಒಟ್ಟಾರೆ 72.5% ಪುರುಷ 51.5% ರಷ್ಟು ಮಹಿಳೆಯರು ಶಿಕ್ಷಣ ಪಡೆದಿದ್ದಾರೆ. ಇಡೀ ಜಿಲ್ಲೆಯು ಭೌಗೋಳಿಕವಾಗಿ 4,961 ಚದರ ಕಿ.ಮೀ. ಹರಡಿದ್ದು, 4,98,244 ಹೆಕ್ಟೇರ್ ಭೂವಿಸ್ತೀರ್ಣದಲ್ಲಿದೆ. ಬೆಳಿ ಬೆಳೆಯುವ ವಿಸ್ತೀರ್ಣ 2,48,825 ಹೆಕ್ಟೇರ್ ಭೂವಿಸ್ತೀರ್ಣದಲ್ಲಿದೆ. ಇದರಲ್ಲಿ 1,16,901 ಹೆಕ್ಟೇರ್ ನೀರಾವರಿಗೆ ಒಳಪಟ್ಟಿತ್ತು. ಕೆ.ಆರ್.ಎಸ್.ನಿಂದ 88,000 ಹೆಕ್ಟೇರ್, ಹೇಮಾವತಿಯಿಂದ 16,000 ಹೆಕ್ಟೇರ್ ಮತ್ತು ಕೆರೆ ಕಟ್ಟೆ ಬೋರ್‌ವೆಲ್‌ಗಳಿಂದ 21,000 ಹೆಕ್ಟೇರ್ ನೀರಾವರಿ ಸೌಲಭ್ಯ ಹೊಂದಿದೆ.

ಮಂಡ್ಯ ಜಿಲ್ಲೆಯ ಆರ್ಥಿಕತೆ ಈಗಲೂ ಕೃಷಿ ಪ್ರಧಾನವಾಗಿದೆ. 5 ಸಕ್ಕರೆ ಕಾರ್ಖಾನೆಗಳನ್ನು ಹೊರತು ಪಡಿಸಿದರೆ ಯಾವುದೇ ಬೃಹತ್ ಕೈಗಾರಿಕೆಗಳು ಇಲ್ಲ. ಸರ್ಕಾರಿ ಅಂಕಿ ಅಂಶಗಳ ಪ್ರಕಾರ 5 ಲಕ್ಷ ಜನರು ರೈತರಾಗಿ ಕೃಷಿ ಚಟುವಟಿಕೆಯಲ್ಲಿ ತೊಡಗಿದ್ದಾರೆ. ಕೃಷಿ ಕೂಲಿಕಾರರು ಮತ್ತು ಕಬ್ಬು ಕಡಿಯುವವರು ಸೇರಿ ಸರಿಸುಮಾರು 8 – 9 ಲಕ್ಷದಷ್ಟು ಜನತೆ ಕೃಷಿ ಚಟುವಟಿಕೆಯಲ್ಲಿ ಅವಲಂಭಿತರಾಗಿದ್ದಾರೆ. ರೈತರು ಮುಖ್ಯವಾಗಿ ಕಬ್ಬನ್ನು ವಾಣಿಜ್ಯ ಬೆಳೆಯಾಗಿ ಬೆಳೆಯುತ್ತಾರೆ. ಸುಮಾರು 30 ಲಕ್ಷ ಟನ್ ಕಬ್ಬು ಬೆಳೆಯುತ್ತಾರೆ. ಸರ್ಕಾರದ ನೀತಿ ಮತ್ತು ಸಕ್ಕರೆ ಕಾರ್ಖಾನೆಗಳ ಲಾಭಕೋರತನದಿಂದಾಗಿ ಕಬ್ಬು ಬೆಳೆಗಾರರು ಗಂಭೀರವಾದ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಕೇಂದ್ರ ಸರ್ಕಾರಗಳು ರಸಗೊಬ್ಬರಗಳಿಗೆ ನೀಡುತ್ತಿದ್ದ ಸಹಾಯಧನ ಕಡಿತದ ಪರಿಣಾಮ ರಸಗೊಬ್ಬರದ ಬೆಲೆ 2–3 ಪಟ್ಟು ಹೆಚ್ಚಾಗಿದೆ. ಕಬ್ಬಿನ ಉತ್ಪಾದನಾ ವೆಚ್ಚವೂ ಅಧಿಕವಾಗಿದೆ. ಸಕಾಲದಲ್ಲಿ ಕಬ್ಬು ಕಟಾವು ಆಗುತ್ತಿಲ್ಲ. ಸಮಯಕ್ಕೆ ಸರಿಯಾಗಿ ಹಣ ಪಾವತಿ ಮಾಡುತ್ತಿಲ್ಲವಾದ್ದರಿಂದ ಕಬ್ಬು ಬೆಳೆಗಾರರು ಸಂಕಷ್ಟದಲ್ಲಿದ್ದಾರೆ. ಕಳೆದ ಬಾರಿ ಪ್ರೋತ್ಸಾಹ ಧನವು ಸೇರಿ 2650 ರೂ. ಸಿಗುತ್ತಿತ್ತು. ಈಗ 2,200ಕ್ಕಿಂತ ಹೆಚ್ಚು ಹಣ ನೀಡಲು ಮಾಲೀಕರು ಒಪ್ಪುತ್ತಿಲ್ಲ. ರಾಜಕಾರಣಿಗಳೆ ಕಾರ್ಖಾನೆ ಮಾಲೀಕರಾಗಿರುವುದರಿಂದ ಸರ್ಕಾರ ಮಾಲೀಕರನ್ನು ನಿಯಂತ್ರಿಸಲು ಅಸಮರ್ಥವಾಗಿದೆ. ಕನಿಷ್ಠ ಟನ್‌ಗೆ 3,000 ರೂ. ಬೆಲೆ ನಿಗದಿ ಮಾಡಬೇಕು. ವರ್ಷಕ್ಕೆ ಸರಿಯಾಗಿ ಕಬ್ಬು ಕಟಾವು ಮಾಡಿದ 14 ದಿನದೊಳಗೆ ಹಣ ಪಾವತಿ ಮಾಡಿದರೆ ಮಾತ್ರ ರೈತ ಉಸಿರಾಡಲು ಸಾಧ್ಯವಾಗುತ್ತದೆ.

ಇಂತಹ ಸಂಧರ್ಭದಲ್ಲೆ ಮಂಡ್ಯ ಜಿಲ್ಲೆಯ ಸಮಗ್ರ ಅಭಿವೃದ್ಧಿಗಾಗಿ ಎಂಬ ಘೋಷಣೆಯೊಂದಿಗೆ 7ನೇ ಜಿಲ್ಲಾ ಸಮ್ಮೇಳನವನ್ನು ನಡೆಸಲಾಯಿತು. ಸಮ್ಮೇಳನದ ಭಾಗವಾಗಿ ಮದ್ದೂರಿನ ಪ್ರಮುಖ ಬೀದಿಯಲ್ಲಿ ಮೆರಣಿಗೆ ಹಾಗೂ ಕೆಮ್ಮಣ್ಣು ನಾಲಾ ಸರ್ಕಲ್‌ನಲ್ಲಿ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿತ್ತು. ಈ ಸಮ್ಮೇಳನದ ಉದ್ಘಾಟನೆಯನ್ನು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಎನ್. ನಾಗರಾಜ್ ನೆರವೇರಿಸಿದರು. ಅವರು ಮಾತನಾಡುತ್ತಾ ಕೇಂದ್ರದಲ್ಲಿ ಆಡಳಿತ ನಡೆಸುವ ಬಿಜೆಪಿ ಸರ್ಕಾರ ಕಾರ್ಪೊರೇಟ್ ಕಂಪನಿಗಳ ತಾಳಕ್ಕೆ ಹೆಜ್ಜೆ ಹಾಕುತ್ತಾ ಬರಿ ಬಣ್ಣದ ಮಾತುಗಳನ್ನು ಆಡುತ್ತಾ ಜನರನ್ನು ನಂಬಿಸಲು ಹೊರಟಿದ್ದಾರೆ. ಜನರ ಮೂಲಭೂತ ಪ್ರಶ್ನೆಗಳ ಪರಿಹರಿಸುವ ದಿಕ್ಕಿನಲ್ಲಿ ಚಿಂತನೆ ಮಾಡುತ್ತಿಲ್ಲ. ಎಡಪಕ್ಷಗಳ ಒತ್ತಾಯದ ಮೇರೆಗೆ ಜಾರಿಯಾಗಿದ್ದ ರೇಗಾವನ್ನು ದುರ್ಬಲಗೊಳಿಸಲು ಹೊರಟಿದ್ದು ಕೃಷಿ ಕೂಲಿಕಾರರ ಬದುಕನ್ನು ಅವನತಿ ಎಡೆಗೆ ತೆಗೆದುಕೊಂಡು



ಕಾರ್ಯದರ್ಶಿ – ಜಿ. ರಾಮಕೃಷ್ಣ

ಹೋಗುತ್ತಿದ್ದಾರೆ. ಕಾರ್ಮಿಕ ಹಕ್ಕುಗಳ ಧಮನ, ವಿಮೆ, ಬ್ಯಾಂಕ್, ಚಿಲ್ಲರೆ ವ್ಯಾಪಾರದಲ್ಲಿ ಕ್ಷೇತ್ರದಲ್ಲಿ ವಿದೇಶಿ ಕಂಪನಿಗಳಿಗೆ ಅವಕಾಶವನ್ನು ಕೊಟ್ಟು ದೇಶದ ಸಾರ್ವಭೌಮತ್ವವನ್ನು ನಾಶ ಮಾಡಲು ಹೊರಟಿದ್ದಾರೆ ಎಂದು ಟೀಕಿಸಿದರು. ರಾಜ್ಯದಲ್ಲಿ ಆಡಳಿತ ನಡೆಸುವ ಕಾಂಗ್ರೆಸ್ ಸರ್ಕಾರ ಅಹಿಂದ ಹೆಸರಲ್ಲಿ ಅಧಿಕಾರಕ್ಕೆ ಬಂದು ಆ ಜನಾಂಗವನ್ನು

ಪುಟ 7 ಕ್ಕೆ


## ರೈತರ ಸಂಕಷ್ಟ ಪರಿಹರಿಸುವಲ್ಲಿ ರಾಜ್ಯ–ಕೇಂದ್ರ ಸರ್ಕಾರಗಳು ವಿಫಲ ಮಳವಳ್ಳಿ ಸಿಪಿಐ(ಎಂ) ತಾಲ್ಲೂಕು ಸಮ್ಮೇಳನದಲ್ಲಿ ಎಸ್.ವೈ. ಗುರುಶಾಂತ ಟೀಕೆ

ಮಂಡ್ಯ ಜಿಲ್ಲೆಯಲ್ಲಿ ಮಳವಳ್ಳಿ ತಾಲ್ಲೂಕು ಪಕ್ಷದ ಬೆಳವಣಿಗೆಯಲ್ಲಿ ಮುಂಚೂಣಿಯಲ್ಲಿದೆ. ಕೂಲಿಕಾರ, ಮಹಿಳಾ, ಯುವಜನ ಚಳುವಳಿಗಳು ಪ್ರಧಾನವಾಗಿರುವ ಮತ್ತು ಪಕ್ಷದ ಅರ್ಧದಷ್ಟು ಸದಸ್ಯರನ್ನು ಹೊಂದಿರುವ ತಾಲ್ಲೂಕಾಗಿದ್ದು ಆರ್ಥಿಕವಾಗಿ ಅತೀ ಹಿಂದುಳಿದ ತಾಲ್ಲೂಕು ಸಹ ಆಗಿದೆ. ನಿರುದ್ಯೋಗಿಗಳ ಸಂಖ್ಯೆ ವಲಸೆ ಪ್ರಮಾಣ ಹೆಚ್ಚಾಗಿದೆ. ಭೂವಿಸ್ತೀರ್ಣಕ್ಕೆ ಹೋಲಿಸಿದರೆ ನೀರಾವರಿ ಭೂಮಿ ಕಡಿಮೆ ಇದೆ. ಜಿಲ್ಲೆಯ ಏಕೈಕ ಮೀಸಲು ಕ್ಷೇತ್ರವಾದ ಮಳವಳ್ಳಿ ಅಭಿವೃದ್ಧಿಯಲ್ಲಿ ಬಹಳ ಹಿಂದೆ ಉಳಿದಿದೆ. ಒಂದೇ ಒಂದು ಬೃಹತ್ ಕೈಗಾರಿಕೆ ಇಲ್ಲ. ಕೈಗಾರಿಕಾ ಪ್ರದೇಶವು ಇಲ್ಲ. ಪ್ರವಾಸ್ಯೋದ್ಯಮವನ್ನು ಅಭಿವೃದ್ಧಿ ಪಡಿಸಲು ಬಹಳಷ್ಟು ಅವಕಾಶಗಳು ಇದ್ದರೂ ಅದರ ಕಡೆ ಗಮನ ನೀಡಲಾಗುತ್ತಿಲ್ಲ. ರೇಷ್ಮೆ, ಹೈನುಗಾರಿಕೆ, ಪಶುಸಂಗೋಪನೆ ಮುಖಾಂತರ ಜೀವನ ನಡೆಸುವ ಪರಿಸ್ಥಿತಿ ಎದುರಾಗಿದೆ. ಬರದ ಸಂದರ್ಭದಲ್ಲಿ ಊರಿಗೆ ಊರೇ ಗುಳೇ ಹೋದ ಉದಾಹರಣೆ ಇದೆ. ಅದರಲ್ಲಿ ದಲಿತರ ಬದುಕು ಬಹಳ ಸಂಕಷ್ಟಕರವಾಗಿದೆ. ಅಭಿವೃದ್ಧಿ ಎಂದರೆ ರಸ್ತೆ, ಸರ್ಕಾರಿ ಬಿಲ್ಡಿಂಗ್, ವಿದ್ಯುತ್ ದೀಪ ಎಂಬ ಕಲ್ಪನೆಯಿಂದ ಹೊರಗೆ ಬಂದಿಲ್ಲ ಜನಪ್ರತಿನಿಧಿಗಳು. ಇಂತಹ ಸಂದರ್ಭದಲ್ಲಿ ತಾಲ್ಲೂಕಿನ ಸಮಗ್ರ



ನೂತನ ತಾಲ್ಲೂಕು ಕಾರ್ಯದರ್ಶಿ ದೇವಿ

ಅಭಿವೃದ್ಧಿ ದೃಷ್ಟಿಇಟ್ಟುಕೊಂಡು ಸಿಪಿಐ(ಎಂ) ತಾಲ್ಲೂಕು ಸಮ್ಮೇಳನ ನವೆಂಬರ್ 22ರಂದು ಮಳವಳ್ಳಿ ಪಟ್ಟಣದಲ್ಲಿ ಜರುಗಿತು. ಪ್ರಮುಖ ಬೀದಿಗಳಲ್ಲಿ ನೂರಾರು ಮಂದಿ ಮೆರವಣಿಗೆ ಹೊರಟು ಶಾದಿಮಹಲ್‌ನಲ್ಲಿ ಉದ್ಘಾಟನಾ ಸಮಾರಂಭ ನಡೆಯಿತ್ತು. ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯರಾದ ಎಸ್.ವೈ. ಗುರುಶಾಂತ್ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡುತ್ತ ದೇಶಕ್ಕೆ ಅನ್ನ ನೀಡುವ ರೈತ ಸಂಕಷ್ಟದಲ್ಲಿದ್ದಾನೆ, ನಿರುದ್ಯೋಗಿಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಸಾರ್ವಜನಿಕ ವಲಯಗಳಲ್ಲಿ ಉದ್ಯೋಗ ಸೃಷ್ಠಿ ಕಡಿಮೆಯಾಗುತ್ತಿದ್ದು. ಖಾಸಗಿ ವಲಯದಲ್ಲಿ ಅಭದ್ರತೆಯ ಕನಿಷ್ಠ ಕೂಲಿಯೂ ಇಲ್ಲದ ಉದ್ಯೋಗಗಳು ಹೆಚ್ಚಾಗುತ್ತಿವೆ. ಬಡವರಿಗೆ ನಿವೇಶನ, ವಸತಿ, ಕುಡಿಯಲು ನೀರು, ಆರೋಗ್ಯವಿಲ್ಲದಿರುವಾಗ ಬಂಡವಾಳಿಗರಿಗೆ ಸಾವಿರಾರು ಎಕರೆ ಭೂಮಿಯನ್ನು ಬಂಡವಾಳ ಎಂಬ ಹೆಸರಿನಲ್ಲಿ ಎಲ್ಲಾ ಮೂಲಭೂತ ಸೌಲಭ್ಯಗಳೊಂದಿಗೆ ನೀಡಲು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ತುದಿಗಾಲ ಮೇಲೆ ನಿಂತಿವೆ ಎಂದರು. ಈ ಪರಿಸ್ಥಿತಿಯಿಂದ ಅರಳುವ ಭಾರತ ಮತ್ತು ನರಳುವ ಭಾರತವಾಗಿ ನಿರ್ಮಾಣವಾಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ತಾಲ್ಲೂಕು ಕಾರ್ಯದರ್ಶಿಯಾದ ದೇವಿಯವರು ವಹಿಸಿದ್ದರು. ಜಿ. ರಾಮಕೃಷ್ಣ, ಪುಟ್ಟಮಾದು, ಕೃಷ್ಣೇಗೌಡ, ಲಿಂಗರಾಜಮೂರ್ತಿ, ಬಸವರಾಜು, ಆನಂದ್ ಉಪಸ್ಥಿತರಿದ್ದರು. ನೂತನ ತಾಲ್ಲೂಕು ಕಾರ್ಯದರ್ಶಿಯಾಗಿ ದೇವಿಯವರು ಆಯ್ಕೆಯಾಗಿದ್ದು, ಲಿಂಗರಾಜಮೂರ್ತಿ, ಗುರುಸ್ವಾಮಿ, ಬಸವರಾಜು, ಸುಶೀಲ, ಸುನೀತ, ಸರೋಜಮ್ಮ, ಪ್ರೇಮ್‌ಕುಮಾರಿ, ಶಿವಬೋರಯ್ಯ, ಹನುಮಂತು, ಮಹಾದೇವಮ್ಮ, ಡಿ.ಸಿ. ಚೌಡೇಗೌಡ, ಆರ್. ಕೃಷ್ಣ ಒಳಗೊಂಡ 13 ಮಂದಿಯ ತಾಲ್ಲೂಕು ಸಮಿತಿಯನ್ನು ಆಯ್ಕೆ ಮಾಡಲಾಯಿತು.



# ಸಂಸತ್ತಿನಲ್ಲಿ ಆಶ್ವಾಸನೆ ಕೊಡಲು ಪ್ರಧಾನ ಮಂತ್ರಿಗಳ ಹಿಂದೇಟು ಏಕೆ?

ªÀÄÄvÉÛ¸ÀÀ ¸ÀwÛ£À°èEPÀÌlÄÖ;ªÀÄvÀÛzÉÃPÁgÀt¢AzÁV-ªÉÆÃ¢ ¸ÀgÀPÁgÀzÀ
ºÀoÀªÀÄiÁjvÀ£À¢AzÁVAzÉzÉÃ¥ÀæzsÁ£ÀªÀÄAwæUÀ¼ÀÄD±Áé¸À£ÉPÉÆnÖzÀÝgÀÄDzÀgÉ
£ÀAvÀgÀªÀÇ©eÉ¦ªÀÄAwæUÀ¼ÀÄªÀÄvÀÄÛ¸ÀA¸ÀzÀgÀÄ¸ÀA«zsÁ£ÀG®èAWÀ£ÉUÀ¼À°èÀÄvÀÄÛ
²PÀëºÀðªÁzÀC¥ÀgÁzsÀUÀ¼É¤¸ÀÄªÀZÀÌÄªÀnPÉUÀ¼À°è¤gÀvÀAPÀªÁVÉÆqÀVAiÉÄÃ
EzÁÝgÉCzÀÝjAzÀ ¨ÉÃFUÀD±Áé¸À£É¤ÃqÀÄªÀÅzÀµÉÖÃC®è,F¨ÁjPÀæªÀÄªÀ£ÀÀÆß
PÉÊUÉÆ¼ÀîÉÃPÀÄÝAzÀÄ¥ÀæzsÁ£ÀªÀÄAwæUÀ¼À£ÀÄßEÃ¼ÀÄÃUÀÄwÛzÉzÀ£ÉßÃPÉ¸ÀÄ¸ÀwÛ£À
PÀ¯Á¥ÀUÀ¼À£ÀÄßPÉr¸ÀÄªÀ£É¥ÀUÀ¼ÉAzÀÄvÀ½îºÁPÀ¯ÁUÀÄwÛzÉ?

**ಸೀತಾರಾಮ್ ಯೆಚುರಿ**

ಮತ್ತೊಮ್ಮೆ ಮೋದಿ ಸರಕಾರದ ಹಠಮಾರಿತನದಿಂದಾಗಿ ಸಂಸತ್ತಿನಲ್ಲಿ ಇಕ್ಕಟ್ಟು ಉಂಟಾಗಿದೆ. ವಿವಾದಾಸ್ಪದ ಪ್ರಶ್ನೆಗಳ ಮೇಲೆ ಸದನಕ್ಕೆ ಭರವಸೆಯ ಲವಲೇಶವನ್ನೂ ಕೊಡದ್ದರಿಂದ ರಾಜ್ಯ ಸಭೆಯ ಕಲಾಪಗಳು, ಈ ಸಂಚಿಕೆ ಸಿದ್ಧವಾಗುವ ವೇಳೆಗೆ, ಸತತ ನಾಲ್ಕನೇ ದಿನ ಸ್ಥಗಿತಗೊಂಡಿವೆ.

ಎರಡು ವಿವಾದಾಸ್ಪದ ಪ್ರಶ್ನೆಗಳು ಪರಸ್ಪರ ಹೊಸೆದು ಕೊಂಡಿವೆ–ಒಂದು ದೇಶಾದ್ಯಂತ ಆರೆಸ್ಸೆಸ್/ಬಿಜೆಪಿ ಮತ್ತು ಅದರ ವಿವಿಧ ಕಬಂಧ ಬಾಹುಗಳು ಧಾರ್ಮಿಕ ಅಲ್ಪಸಂಖ್ಯಾತ ಸಮುದಾಯಗಳಿಗೆ ಸೇರಿದ ಜನರ, ಅದರಲ್ಲೂ ಮುಸ್ಲಿಮ್ ಮತ್ತು ಕ್ರೈಸ್ತ ಧರ್ಮಗಳಿಗೆ ಸೇರಿದವರ ಸಾಮೂಹಿಕ ಮರು ಮತಾಂತರ; ಜಾಗತಿಕವಾಗಿ ಆಚರಿಸುವ ಕ್ರಿಸ್‍ಮಸ್ ದಿನವನ್ನು 'ಒಳ್ಳೆ ಆಡಳಿತ'ದ ದಿನವಾಗಿ ಶಾಲೆಗಳು ಮತ್ತು ಇತರ ಶೈಕ್ಷಣಿಕ ಸಂಸ್ಥೆಗಳಲ್ಲಿ ಅಟಲ್ ಬಿಹಾರಿ ವಾಜಪೇಯಿಯವರ ಜನ್ಮದಿನದ ಸ್ಮರಣಾರ್ಥ ಆಚರಿಸುವಂತೆ ಮಾಡುವ ಈ ಸರಕಾರದ ಪ್ರಯತ್ನಗಳು.

**ಆಗ ದುರಂತ–ಈಗ ಪ್ರಹಸನ**

ಈ ಎರಡನೇ ಪ್ರಯತ್ನದಲ್ಲಿ ಪಾಕಿಸ್ತಾನದೊಂದಿಗೆ ಹೋಲಿಸಿಕೊಂಡೇ ಭಾರತ ತಾನು ಜೀವಂತವಾಗಿದ್ದೇನೆ ಎಂದನಿಸಿಕೊಳ್ಳಬೇಕು ಎಂಬಂತಹ ಆರೆಸ್ಸೆಸ್/ಬಿಜೆಪಿಯ ಎಂದಿನ ಗೀಳು ಬಿಂಬಿತವಾಗಿದೆ. ಪಾಕಿಸ್ತಾನದಲ್ಲಿ ಡಿಸೆಂಬರ್ 25 ಪ್ರಥಮತಃ ಮಹಮ್ಮದ್ ಅಲಿ ಜಿನ್ನಾರವರ ಜನ್ಮದಿನವೆಂದು, ಎರಡನೆಯದಾಗಿಯಷ್ಟೇ ಕ್ರಿಸ್‍ಮಸ್ ಎಂದು ರಜಾದಿನವಾಗಿದೆ. ಈ ಹಿಂದೆ ವಾಜಪೇಯಿ ಸರಕಾರ ಪೋಖ್ರಾನ್–2ರ ಮೂಲಕ ಪಾಕಿಸ್ತಾನಕ್ಕೆ ಭಾರತಕ್ಕೆ ಹೆಗಲೆಣೆಯಾಗಿ ಒಂದು ಪರಮಾಣು ಶಕ್ತಿ ದೇಶ ಎಂಬ ಸ್ಥಾನಮಾನಕ್ಕೇರಲು ಅವಕಾಶ ಒದಗಿಸಿತು. ಈ ಬಾರಿ ಮೋದಿ ಸರಕಾರ ಡಿಸೆಂಬರ್ 25 ಕ್ಕೆ ಸಂಬಂಧಪಟ್ಟಂತೆ ಅಂತಹುದೇ ಸಮಾನತೆಯ ಪ್ರಯತ್ನಕ್ಕೆ ಕೈಹಾಕಿದೆ. ನಿಜವಾಗಿಯೂ, ಮೊದಲ ಬಾರಿ ಅದು ದುರಂತವಾಗಿ ಬಿಟ್ಟರೆ, ಈ ಎರಡನೇ ಬಾರಿ ಅದು ಒಂದು ಪ್ರಹಸನವಾಗುತ್ತಿದೆ! ಚುನಾವಣಾ ಪ್ರಚಾರದ ವೇಳೆಗೆ '56ಇಂಚಿನ' ಹೆಮ್ಮೆ ಕೊಚ್ಚಿಕೊಂಡ ಮೋದಿಯವರ ಸರಕಾರ ಈಗ ನಮ್ಮನ್ನು ಪಾಕಿಸ್ತಾನದೊಂದಿಗೆ ಹೋಲಿಸಿಕೊಳ್ಳುವ ಅಸಿತ್ವಕ್ಕೆ ಇಳಿಸಿದೆ.

ಎರಡನೇ ಪ್ರಶ್ನೆಯನ್ನು ಎತ್ತಿಕೊಳ್ಳೋಣ. ಡಿಸೆಂಬರ್ 25ನ್ನು 'ಒಳ್ಳೆಯ ಆಡಳಿತ' ದಿನವಾಗಿ ಆಚರಿಸಬೇಕು, ಕ್ರಿಸ್‍ಮಸ್ ಆಗಿ ಅಲ್ಲ ಎಂದು ಶಾಲೆಗಳಿಗೆ ಕೇಂದ್ರ ಮಂತ್ರಾಲಯದಿಂದ ಸೂಚನೆಗಳು ಹೋಗಿವೆ ಎಂಬ ಮಾಧ್ಯಮ ವರದಿಗಳನ್ನು ರಾಜ್ಯಸಭೆಯಲ್ಲಿ ಎತ್ತಿದಾಗ ಕೇಂದ್ರ ಹಣಕಾಸು ಮಂತ್ರಿಗಳು ಮೊದಲಿಗೆ ಈ ವರದಿಗಳ ಸತ್ಯಾಸತ್ಯತೆ ಬಗ್ಗೆಯೇ ಸವಾಲು ಹಾಕಿದರು. ಆದರೆ ವಾಸ್ತವ ಸಂಗತಿ ತದ್ವಿರುದ್ಧವಾಗಿದೆ ಎಂದು ಪುರಾವೆ ತೋರಿಸಿದಾಗ ಸರಕಾರ ಹಿಂದೆ ಸರಿಯಿತು, ಅದು ಕೇವಲ ನವೋದಯ ಶಾಲೆಗಳಿಗಷ್ಟೇ ಸೀಮಿತವಾದದ್ದು, ಏಕೆಂದರೆ ಅವು ವಸತಿ ಶಾಲೆಗಳು, ಆದ್ದರಿಂದ ರಜಾದಿನವನ್ನೇನೂ ನಿರಾಕರಿಸಿಲ್ಲ ಎಂದು ನುಣುಚಿಕೊಳ್ಳಲು ಪ್ರಯತ್ನಿಸಿತು (ಚಳಿಗಾಲದ ರಜಾದಿನಗಳ ಗತಿ?).

ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಲಿಗೆ ಕೇಂದ್ರ ಸರಕಾರ ದಿಂದ ಹೋಗಿರುವ ಪತ್ರವನ್ನು ತೋರಿಸಿದಾಗ ಸರಕಾರದ ಬಳಿ ಉತ್ತರವಿರಲಿಲ್ಲ. ದೇಶದಲ್ಲಿ ಎಲ್ಲ ತಾಂತ್ರಿಕ ಶಿಕ್ಷಣ ಸಂಸ್ಥೆಗಳು ಈ ದಿನವನ್ನು ವಿದ್ಯಾರ್ಥಿಗಳು ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸುವಂತೆ ಮಾಡಬೇಕು ಎಂದು ಆ ಪತ್ರದಲ್ಲಿ ಹೇಳಲಾಗಿತ್ತು. ಇಂತಹ ಕಸರತ್ತುಗಳ ಮೂಲಕ ಈ ಮೋದಿ ಸರಕಾರ ಧಾರ್ಮಿಕ ಅಲ್ಪಸಂಖ್ಯಾತರ ವಿರುದ್ಧವಾದ ಅಜೆಂಡಾವನ್ನು ಕಳ್ಳತನದಿಂದ ತರುತ್ತಿಲ್ಲ ಎಂದು ಇನ್ನೂ ಸಂಸತ್ತಿಗೆ ಮನವರಿಕೆಯಾಗುವಂತೆ ತೋರಿಸಿ ಕೊಟ್ಟಿಲ್ಲ.

ಮರುಮತಾಂತರ ಅಥವ "ಘರ್ ವಾಪಸಿ"(ಮರಳಿ ಮನೆಗೆ) ಬಗ್ಗೆ ಹೇಳುವುದಾದರೆ, ಇಲ್ಲಿ ಕೂಡ, ತನಗೆ ಬೇರೆ ದುರುದ್ದೇಶಗಳಿಲ್ಲ ಎಂದು ಸಂಸತ್ತಿಗಾಗಲೀ, ದೇಶಕ್ಕಾಗಲೀ ಮನವರಿಕೆ ಮಾಡಿಸುವುದು ಮೋದಿ ಸರಕಾರಕ್ಕೆ ಸಾಧ್ಯವಾಗಿಲ್ಲ. ಪ್ರತಿಪಕ್ಷಗಳು ಕೇಳಿರುವುದು ಇಷ್ಟೇ– ಪ್ರಧಾನ ಮಂತ್ರಿಗಳು ಸದನಕ್ಕೆ ಬಂದು ನಮ್ಮ ಸಂವಿಧಾನದ ಭರವಸೆಗಳನ್ನು ಬಹಿರಂಗವಾಗಿ ಉಲ್ಲಂಘಿಸುವ ಇಂತಹ ದುಷ್ಟ ಕಸರತ್ತುಗಳು ನಡೆಸಿದ ತಪ್ಪು ಮಾಡಿದ್ದಾರೆ ಎಂದು ಕಂಡು ಬಂದವರ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಬೇಕು.

**ಸಂವಿಧಾನ, ಐಪಿಸಿ ಇರುವಾಗ ಹೊಸ ಕಾನೂನಿನ ನೆಪವೇಕೆ?**

ಅದರ ಬದಲು ಕೇಂದ್ರ ಹಣಕಾಸು ಮಂತ್ರಿಗಳು ಪ್ರತಿಪಕ್ಷಗಳಿಗೆ ಸವಾಲೊಡ್ಡಿದರು– ಮತಾಂತರಗಳು ಮತ್ತು ಬಲವಂತದ ಮರುಮತಾಂತರಗಳನ್ನು ನಿಷೇಧಿಸುವ ಒಂದು ಹೊಸ ಕಾನೂನನ್ನು ಒಪ್ಪಲು ಸಿದ್ಧರಿದ್ದೀರಾ? ಇಂತಹ ಯಾವುದೇ ಹೊಸ ಕಾನೂನಿನ ಅಗತ್ಯವಿಲ್ಲ, ಏಕೆಂದರೆ ಭಾರತದ ಸಂವಿಧಾನ ಮತ್ತು ಭಾರತದ ದಂಡಸಂಹಿತೆ(ಐಪಿಸಿ) ಯಲ್ಲಿ ಈಗಾಗಲೇ ಇದಕ್ಕೆ ಅವಕಾಶವಿದೆ ಎಂದು ತೋರಿಸಿ ಕೊಟ್ಟಾಗ, ಮತ್ತೆ ಸರಕಾರ ನಿರುತ್ತರ.

ಒಂದು ಹೊಸ ಕಾನೂನಿನ ಹೆಸರಲ್ಲಿ ಮೋದಿ ಸರಕಾರ ನಡೆಸುತ್ತಿರುವುದು ದೇಶದಲ್ಲಿ ಧಾರ್ಮಿಕ ಅಲ್ಪಸಂಖ್ಯಾತರ ವಿರುದ್ಧ ಪ್ರಚಾರಗಳ ಮೂಲಕ ಕೋಮುವಾದ ಧ್ರುವೀಕರಣವನ್ನು ತೀಕ್ಷ್ಣಗೊಳಿಸುವ ನಗ್ನ ಪ್ರಯತ್ನಗಳನ್ನು. ಈ ಹೊಸ ಕಾನೂನು ಕೊಡಬೇಕೆಂದಿರುವ ರಕ್ಷಣೆಯನ್ನು ನಮ್ಮ ಸಂವಿಧಾನ ಆಗಲೇ ಕಲಮುಗಳು 25 ಮತ್ತು 26ರಲ್ಲಿ ಕೊಟ್ಟಿದೆ. "ಮನಸ್ಸಾಕ್ಷಿಯ ಸ್ವಾತಂತ್ರ್ಯ ಮತ್ತು ಧರ್ಮದ ಮುಕ್ತ ಪ್ರತಿಪಾದನೆ, ಆಚರಣೆ ಮತ್ತು ಪ್ರಸಾರ" ಹಾಗೂ "ಧಾರ್ಮಿಕ ವಯವಹಾರಗಳನ್ನು ನಿರ್ವಹಿಸುವ ಸ್ವಾತಂತ್ರ್ಯ". ಭಾರತೀಯ ದಂಡ ಸಂಹಿತೆಯ ಸೆಕ್ಷನ್ 153 ಎ ಧರ್ಮದ ಹೆಸರಿನಲ್ಲಿ ಬಲವಂತದ ಪ್ರಯತ್ನವನ್ನು ಶಿಕ್ಷಾರ್ಹ ಅಪರಾಧ ಎಂದು ವರ್ಗೀಕರಿಸಿದೆ. ಆದ್ದರಿಂದ ಮೋದಿ ಸರಕಾರ ಈಗ ಹೇಳುತ್ತಿರುವ ಮತಾಂತರಗಳನ್ನು ಕುರಿತ ಹೊಸ ಕಾನೂನು ಏನೂ ಬೇಕಾಗಿಲ್ಲ. ಪ್ರತಿಯೊಬ್ಬ ಭಾರತೀಯನಿಗೆ/ಳಿಗೆ "ಜಾತಿ, ಮತ ಅಥವ ಲಿಂಗ ಭೇದವಿಲ್ಲದೆ" ತನ್ನ ಧಾರ್ಮಿಕ ನಂಬಿಕೆಯನ್ನು ಆರಿಸಿ ಕೊಳ್ಳುವ ಸ್ವಾತಂತ್ರ್ಯ ಇದೆ. ಈ ಹಕ್ಕಿಗೆ ಭಂಗ ತರುವ ಯಾವುದೇ ಬಲವಂತದ ಪ್ರಯತ್ನ ಕಾನೂನಿನ ಪ್ರಕಾರ ಶಿಕ್ಷಾರ್ಹವಾದ ಅಪರಾಧ.

ಸರಕಾರ ಮತ್ತು ಅಧಿಕಾರಿಗಳ ಕೆಲಸ ಸಂವಿಧಾನ ನೀಡಿದ ಭರವಸೆಗಳನ್ನು ಪಾಲಿಸುವುದು ಮತ್ತು ನಮ್ಮ ದಂಡ ಸಂಹಿತೆಯನ್ನು ಉಲ್ಲಂಘಿಸುವವರನ್ನು ಶಿಕ್ಷಿಸುವುದು.

ಇದರ ಬದಲಿಗೆ ಇಂದು ಆರೆಸ್ಸೆಸ್/ಬಿಜೆಪಿ ಮತ್ತು ಅದರ ಕಬಂಧ ಬಾಹುಗಳು ಮಾಡುತ್ತಿರುವ ಕೆಲಸ ಎಂದರೆ ಇಂತಹ ಮರು ಮತಾಂತರ, 'ಘರ್ ವಾಪಸೀ'ಗಳ ಮೂಲಕ ಕೋಮು ಧ್ರುವೀಕರಣವನ್ನು ತೀಕ್ಷ್ಣಗೊಳಿಸುವ ರಾಷ್ಟ್ರೀಯ ಪ್ರಚಾರಗಳನ್ನು ಸಂಘಟಿಸುವುದು. ಆರೆಸ್ಸೆಸ್‍ಗೆ ಸೇರಿದ ಉತ್ತರ ಪ್ರದೇಶದ ಒಂದು ಸಂಘಟನೆ, 'ಧರ್ಮ ಜಾಗರಣ್ ಸಮಿತಿ' ನಡೆಸಿದ 57 ಮುಸ್ಲಿಂ ಕುಟುಂಬಗಳ 'ಮರು ಮತಾಂತರ' ಕುರಿತ ಮಾಧ್ಯಮ ವರದಿಗಳು ಬಹಳಷ್ಟು ಸಂಗತಿಗಳನ್ನು ಬಿಚ್ಚಿಟ್ಟಿವೆ.

**ಮಾಧ್ಯಮ ವರದಿಗಳು ಕೊಡುವ ಚಿತ್ರ**

"ಈ 57 ಮುಸ್ಲಿಂ ಕುಟುಂಬಗಳು, ಅವರಲ್ಲಿ ಹೆಚ್ಚಿನವರು ಬಂಗಾಲಿ–ಭಾಷಿಕರು, ಆಗ್ರಾದ ಮಧುನಗರ ಕೊಳೇಗೇರಿಯಲ್ಲಿ ವಾಸಿಸುತ್ತಿರುವವರು. ದೇಶದಲ್ಲಿರುವ ಬಹಳಷ್ಟು ಕೊಳೇಗೇರಿವಾಸಿಗಳಂತೆ ಅವರಿಗೆ ಯಾವುದೇ ರೀತಿಯ ಅಧಿಕೃತ ಗುರುತುಪತ್ರಗಳಿರಲಿಲ್ಲ. ಅವರಲ್ಲಿ ಒಬ್ಬರ ಪ್ರಕಾರ ಧರ್ಮ ಜಾಗರಣಾ ಸಮಿತಿಯ ಕಾರ್ಯಕರ್ತರು ಅವರನ್ನು ಒಂದು ಸಮಾರಂಭಕ್ಕೆ ಕರೆದರು, ಅದರಲ್ಲಿ ಬಿಪಿಎಲ್ ಕಾರ್ಡು, ಆಧಾರ್ ಕಾರ್ಡು ಮತ್ತು ವೋಟರ್ ಕಾರ್ಡುಗಳನ್ನು ಕೊಡಿಸುವುದಾಗಿ ಭರವಸೆ ನೀಡಿದರು. ಅವರು ಮುಸ್ಲಿಂ ಟೋಪಿಗಳನ್ನು ಹಾಕಿಕೊಳ್ಳಬೇಕು ಎಂದೂ ಅವರು ಹೇಳಿದರು. ಇದು ಆ ಮುಸ್ಲಿಮರಿಗೆ ತಾವು ಯಾವ ಸಮಾರಂಭದಲ್ಲಿ ಭಾಗವಹಿಸುತ್ತಿದ್ದೇವೆ ಎಂದು ತಿಳಿದಿತ್ತು ಎಂಬ ವಾದವನ್ನು ಹುಸಿಗೊಳಿಸುತ್ತದೆ. ಮುಸ್ಲಿಂ ಕುಟುಂಬಗಳು ಒದಗಿಸಿರುವ ಸಂಗತಿಗಳು ಸರಿಯಾಗಿದ್ದರೆ ಇದು ಮೋಸದ ವಿಧಾನಗಳಿಂದ ಮತಾಂತರದ ಒಂದು ಕೇಸಾಗುತ್ತದೆ. ಇದೊಂದು ಶಿಕ್ಷಾರ್ಹ ಅಪರಾಧ."– ಇದು ವೆಬ್ ತಾಣ, ಡೈಲ್ಯೊ ಡಿಸೆಂಬರ್ 10, 2014ರಂದು ಪ್ರಕಟಿಸಿದ ವರದಿ.

ಇಷ್ಟೇ ಅಲ್ಲ, ಮಾಧ್ಯಮ ವರದಿಗಳು ಇನ್ನಷ್ಟು ಸಂಗತಿಗಳನ್ನು ಬಿಚ್ಚಿಟ್ಟಿವೆ. ವಿವಿಧ ಆರೆಸ್ಸೆಸ್ ಕಬಂಧ ಬಾಹುಗಳು ಈ 'ಮರುಮತಾಂತರ ಪ್ರಚಾರಾಂದೋಲನ'ಕ್ಕೆ 'ಉದಾರ ಕೊಡುಗೆ'ಗಳನ್ನು ಸಂಗ್ರಹಿಸುತ್ತಿವೆಯಂತೆ, ಒಬ್ಬ ಮುಸ್ಲಿಮನನ್ನು ಮತಾಂತರ ಮಾಡಲು 5ಕ್ಷ ರೂ, ಒಬ್ಬ ಕ್ರೈಸ್ತನ

➡




ÌÉ¼ÀªÀÀÂUÉUÀ¼ÀªÀÄÄÄRªÁqÀUÀ¼À»ÀÆÉÁªÀgÀtUÉÆ¼ÀÄÀwÛgÀÄªÀÀÅzÀÄ
ªÉÆÃ¢¸ÀgÀPÁgÀzÀªÀÄgÀuÁAwPÀgÀ¸ÁAiÀÄ£ÀMAzÉqÉAiÀÄ°è
'C©üªÀÈ¢Þ'ÀiÀÄªÀÄÄÆ®PÀ¸ÀªÀÄÈ¢ÞÀiÀÄÉÊsÀ¸ÉÇÃ¥ÉÃvÀsÀæÉÄUÀ¼À£ÀÄß
ªÀiÁgÀÄªÀÀÅzÀÄÇvÀÛG£ÀävÀÛPÉÆÃªÀÄÄªÁ¢zsÀÄæ‹ÃPÀgÀtÀ£ÀÄßÀjÀiÀÄ
©qÀÄªÀÅzÀÄDzÀgÉÃ£ÀÄ§À¼ÀµÀÄÖDqÀÄ§gÀ¢AzÀªÀ©qÀÄwÛgÀÄªÀ
§®Æ£ÀÄUÀ¼ÀÄ£É®zÀªÁ¸ÀÛªÀvÉUÀ½AzÀMqÉzÀÄºÉÆÃUÀÄwÛªÉ

ಮರಳಿ ಮನೆಗೆ


**ಅರ್ಥಾತ್ ವಿಕಾಸ ಪುರುಷನಿಂದ ಸಾಂಪ್ರದಾಯಿಕ ಪುರುಷ**

ಇದು ಬಲವಂತದ ಮತಾಂತರ

ಎಂದಾದರೂ ಹೇಳ್ರಲ್ಲಾ, ಮೋದೀಜೀ!

ಕೃಪೆ: ಸತೀಶ್ ಆಚಾರ್ಯ, ಸಿಫಿ.ಕಾಂ

**ಗೆಲುವಿನ ರೇಖೆ'ಯನ್ನು ಬಾಧಿಸದ ಲಕ್ಷ್ಮಣ ರೇಖೆ!**




ಕೃಪೆ:ಸುರೇಂದ್ರನ್, ದಿ ಹಿಂದು

ಜನಶಕ್ತಿ
ಕನ್ನಡ ವಾರಪತ್ರಿಕೆ

# ಪ್ರಧಾನ ಮಂತ್ರಿಗಳ ಹಿಂದೇಟು

➡ ಮತಾಂತರಕ್ಕೆ 2 ಲಕ್ಷ ರೂ. ಈ ಬೆಲೆ ವ್ಯತ್ಯಾಸಕ್ಕೆ ಕಾರಣ, ಕ್ರೈಸ್ತರದ್ದು ಮುಸ್ಲಿಮರಿಗೆ ಹೋಲಿಸಿದರೆ ಬಹಳ ಸಣ್ಣ ಅಲ್ಪಸಂಖ್ಯಾತ ಸಮುದಾಯವಾದ್ದರಿಂದ ರಾಜಕೀಯಕ್ಕೆಇಸ್ಲಾಮ್ ಧರ್ಮಾನು ಯಾಯಿಗಳಿಗಿಂತ ಕಡಿಮೆ 'ಸಮಸ್ಯೆ' ಒಡ್ಡುವವರಾಗಿರುವುದು.

ಜಗತ್ತಿನ ಅತಿ ದೊಡ್ಡ ರಾಜಕೀಯ ಸಂಘಟನೆಯೆನಿಸಿಕೊಂಡ ಚೀನಾ ಕಮ್ಯುನಿಸ್ಟ್ ಪಕ್ಷವನ್ನು ಮೀರಿಸಲು ಆರೆಸ್ಸೆಸ್ ಪೋಷಣೆಯ ಬಿಜೆಪಿಗೆ ಸದಸ್ಯರನ್ನು ಸೇರಿಸಿಕೊಳ್ಳುವ ದೇಶವ್ಯಾಪಿ ಓಟವನ್ನು ಆರಂಭಿಸಿರುವಂತೆ, ಸ್ವತಃ ಆರೆಸ್ಸೆಸ್ ಪ್ರತಿವರ್ಷ ತಲಾ ಒಂದು ಲಕ್ಷ ಮುಸ್ಲಿಮರು ಮತ್ತು ಕ್ರೈಸ್ತರನ್ನು ಹಿಂದೂ ಧರ್ಮಕ್ಕೆ ಮತಾಂತರಿಸುವ ಗುರಿ ಇಟ್ಟುಕೊಂಡಿದೆ.

"ಸಾಮೂಹಿಕ ಮತಾಂತರವಂತೂ ದೂರ, ವೈಯಕ್ತಿಕ ಮತಾಂತರಕ್ಕೆ ಕೂಡ ಬದುಕಿ–ಬದುಕಲು ಬಿಡಿ ಎಂಬ ಹಂದರವುಳ್ಳ ಹಿಂದು ನಂಬಿಕೆಯಲ್ಲಿ ಸ್ಥಾನವಿಲ್ಲ ಎಂಬುದನ್ನು ನಿರಾತಂಕವಾಗಿ ಉಪೇಕ್ಷಿಸಿರುವ ಈ ಕೇಸರಿ ಧರ್ಮಯೋಧರು ಹಿಂದೂ ಧರ್ಮವನ್ನು ಸೆಮಿಟಿಕ್ ಧರ್ಮಗಳಂತೆ ಮಾಡಲು, ಇಸ್ಲಾಮ್ ಮತ್ತು ಕ್ರೈಸ್ತ ಧರ್ಮದಂತೆ 'ಒಂದು ಗ್ರಂಥ, ಒಂದು ಗೋಷ್ಠಿ, ಒಂದು ಜನತೆ'ಯ ಪರಿಕಲ್ಪನೆಯಂತಹ ಮತೀಯ ಸಿದ್ಧಾಂತವಾಗಿ ಪರಿವರ್ತಿಸುವ ಒಟ್ಟು ಪ್ರಯತ್ನವನ್ನು ನಡೆಸಿದ್ದಾರೆ" ಎಂದು ಡಿಸೆಂಬರ್ 13, 2014 ರ ಇಕನಾಮಿಕ್ ಟೈಮ್ಸ್ ಬ್ಲಾಗ್ ಹೇಳಿದೆ.





ಕ್ರಿಸ್‌ಮಸ್ 'ಆಂಟಿ' ತಾತಾ ಉಡುಗೊರೆ–ಪ್ರಬಂಧ ಸ್ಪರ್ಧೆ!
ವ್ಯಂಗ್ಯ ಚಿತ್ರ: ಮಂಜುಲ್, ಡಿಎನ್‌ಎ

ಈ ಮಾಧ್ಯಮ ವರದಿಗಳ ಸತ್ಯಾಸತ್ಯತೆಯನ್ನು ಸ್ಥಾಪಿಸುವುದು ಸರಕಾರದ ಹೊಣೆ. ಧಾರ್ಮಿಕ ಅಲ್ಪಸಂಖ್ಯಾತರಲ್ಲಿ ಹೆಚ್ಚುತ್ತಿರುವ ಭಯಗಳನ್ನು ಶಮನ ಮಾಡಲು ಇದು ಅಗತ್ಯ. ಇದು ನಮ್ಮ ದೇಶದ ಅಸ್ತಿತ್ವ ಮತ್ತು ಸಮೃದ್ಧಿಯ ಪ್ರಾಣಬಿಂದುವಾದ ಸಾಮಾಜಿಕ ಸಾಮರಸ್ಯದ ರಕ್ಷಣೆಗೆ ಅತೀ ಅಗತ್ಯವಾದ ಸಂಗತಿ. ಸಂವಿಧಾನದ ಭರವಸೆಗಳನ್ನು ಮತ್ತು ಭಾರತೀಯ ದಂಡ ಸಂಹಿತೆಯನ್ನು ಉಲ್ಲಂಘಿಸುವವರಿಗೆ ಅವರ ಅಪರಾಧಕ್ಕೆ ಶಿಕ್ಷೆ ಆಗಲೇಬೇಕು. ಇಂತಹ ಆಶ್ವಾಸನೆಯನ್ನು ಸಂಸತ್ತಿನಲ್ಲಿ ಕೊಡಬೇಕು ಎಂದಷ್ಟೇ ಪ್ರಧಾನ ಮಂತ್ರಿಗಳನ್ನು ಕೇಳಲಾಗುತ್ತಿದೆ.

**ಮರಣಾಂತಿಕ ರಸಾಯನ**

ಎಡಪಕ್ಷಗಳು ಪ್ರಧಾನ ಮಂತ್ರಿಗಳು ಮತ್ತು ಸ್ವತಃ ಪ್ರಧಾನ ಮಂತ್ರಿಗಳು ಮಾತ್ರವೇ ಇಂತಹ ಆಶ್ವಾಸನೆಯನ್ನು ಕೊಡಬೇಕು ಎಂದು ಒತ್ತಾಯಿಸುತ್ತಿರುವುದು ಸಂಸದೀಯ ಕಲಾಪಗಳನ್ನು ಅಸ್ತವ್ಯಸ್ತಗೊಳಿಸಲಿಕ್ಕಾಗಿ ಕೊಡುವ ನಗ್ನ ನೆಪಗಳು ಎಂದು ಮೋದಿ ಸರಕಾರದ ಮಂತ್ರಿಗಳು ಆಪಾದಿಸುತ್ತಿದ್ದಾರೆ. ತದ್ವಿರುದ್ಧವಾಗಿ, ಹಿಂದಿನ ಒಂದು ಸಂದರ್ಭದಲ್ಲಿ ಕೇಂದ್ರ ಸಂಪುಟದ ರಾಜ್ಯಮಂತ್ರಿ ಬಿಜೆಪಿಯ ವಿರೋಧಿಗಳ ಬಗ್ಗೆ ಒಪ್ಪಲಾಗದ, ಅಸಹ್ಯ ದೂಷಣೆಗಳನ್ನು ಮಾಡಿದಾಗ ಪ್ರಧಾನ ಮಂತ್ರಿಗಳು ಇಂತಹ ಘಟನೆಗಳು ಪುನರಾವರ್ತನೆ ಯಾಗುವುದಿಲ್ಲ ಎಂದು ಇದೇ ಪ್ರಧಾನ ಮಂತ್ರಿಗಳು ಆಶ್ವಾಸನೆ ಕೊಟ್ಟಿದ್ದರು. ಅದರ ಫಲಿತಾಂಶವೇನು? ಬಿಜೆಪಿ ಮಂತ್ರಿಗಳು ಮತ್ತು ಸಂಸದರು ಇಂತಹ ಸಂವಿಧಾನ ಉಲ್ಲಂಘನೆಗಳಲ್ಲಿ ಮತ್ತು ಶಿಕ್ಷಾರ್ಹವಾದ ಅಪರಾಧಗಳೆನಿಸುವ ಚಟುವಟಿಕೆಗಳಲ್ಲಿ ನಿರಾತಂಕವಾಗಿ ತೆ–ಊಡಗಿಯೇ ಇದ್ದಾರೆ. ಅದ್ದರಿಂದಲೇ ಈಗ ಆಶ್ವಾಸನೆ ನೀಡುವುದಷ್ಟೇ ಅಲ್ಲ, ಈ ಬಾರಿ ಕ್ರಮವನ್ನೂ ಕೈಗೊಳ್ಳಬೇಕು ಎಂದು ಪ್ರಧಾನ ಮಂತ್ರಿಗಳನ್ನು ಕೇಳಲಾಗುತ್ತಿದೆ.

ಈ ಎಲ್ಲ ಬೆಳವಣಿಗೆಗಳ ಮುಖವಾಡಗಳ ಹಿಂದೆ ಅನಾವರಣಗೊಳ್ಳುತ್ತಿರುವುದು ಮೋದಿ ಸರಕಾರದ ಮರಣಾಂತಿಕ ರಸಾಯನ– ಒಂದೆಡೆಯಲ್ಲಿ "ಅಭಿವೃದ್ಧಿ"ಯ ಮೂಲಕ "ಸಮೃದ್ಧಿ'ಯ ವೈಭವೋಪೇತ ಭ್ರಮೆಗಳನ್ನು ಮಾರುವುದು, ಅತ್ತ ಉನ್ಮತ್ತ ಕೋಮುವಾದಿ ಧ್ರುವೀಕರಣವನ್ನು ಹರಿಯ ಬಿಡುವುದು. ಆದರೇನು, ಬಹಳಷ್ಟು ಆಡಂಬರದಿಂದ ಹಾರ ಬಿಡುತ್ತಿರುವ ಬಲೂನುಗಳು ನೆಲದ ವಾಸ್ತವತೆಗಳಿಂದ ಒಡೆದುಹೋಗುತ್ತಿವೆ– ಇಳಿಯುತ್ತಿರುವ ಜಿಡಿಪಿ, ನಕಾರಾತ್ಮಕ ಔದ್ಯಮಿಕ ಮತ್ತು ಉತ್ಪಾದನಾ ಬೆಳವಣಿಗೆ; ಕರ್ಷಕ ಬಿಕ್ಕಟ್ಟು, ಅದರಿಂದಾಗಿ ಸಾಗುವಳಿಗೆ ಒಳಗಾದ ಜಮೀನಿನ ಪ್ರಮಾಣದಲ್ಲಿ ಇಳಿಕೆ ಮತ್ತು ನಮ್ಮದೇ ಜನಗಳ ಖರೀದಿ ಸಾಮರ್ಥ್ಯವನ್ನು ವಿಸ್ತರಿಸದೆ, ಆಂತರಿಕ ಬೇಡಿಕೆಗಳನ್ನು ಹೆಚ್ಚಿಸದೆ ಆರ್ಥಿಕ ಇಳಿಕೆಯನ್ನು ತಡೆದು ಏರಿಕೆ ಸಾಧಿಸುವುದು ಅಸಾಧ್ಯ ಎಂಬ ರಿಝರ್ವ್ ಬ್ಯಾಂಕ್ ಗವರ್ನರರ ಮುನ್ಸೂಚನೆ (ಇದನ್ನು ನಾವು ಈ ಅಂಕಣದಲ್ಲಿ ಈ ಹಿಂದೆಯೇ ಸೂಚಿಸಿದ್ದೆವು).




ಕೃಪೆ: ಮಂಜುಲ್, ಡಿಎನ್‌ಎ

ನಮ್ಮ ಜನತೆಯ ಜೀವನ ಪರಿಸ್ಥಿತಿಗಳು ಎಷ್ಟು ಪ್ರಮಾಣದಲ್ಲಿ ಇಳಿಯುತ್ತಿವೆಯೋ, ಅದೇ ಪ್ರಮಾಣದಲ್ಲಿ ಹುಚ್ಚು ಕೂಮುವಾದಿ ಧ್ರುವೀಕರಣ ಏರುತ್ತಲೇ ಇದೆ– ಜನತೆಯ ಅಸಂತೃಪ್ತಿಯ ದಿಕ್ಕು ತಪ್ಪಿಸಲು ವಿವಿಧ ಸ್ವರೂಪಗಳಲ್ಲಿ ಅಭಿವ್ಯಕ್ತಗೊಳ್ಳುತ್ತಿವೆ. ಮತಾಂತರಗಳು ಮತ್ತು ಕ್ರಿಸ್‌ಮಸ್ ದಿನವನ್ನು 'ಉತ್ತಮ ಆಡಳಿ'ದ ದಿನವಾಗಿ ಆಚರಿಸುವುದು ಇದರ ಇತ್ತೀಚಿನ ಸ್ವರೂಪಗಳು. ಈ ಎರಡನೆಯದು ಝಾರ್ಖಂಡ್ ಚುನಾವಣೆಗಳ ಹಿನ್ನೆಲೆಯಲ್ಲಿ ಕ್ರೈಸ್ತ ಅಲ್ಪಸಂಖ್ಯಾತರ ಮೇಲೆ ಗುರಿಯಿಟ್ಟಂತದ್ದು, ಈ ಹಿಂದೆ ಉತ್ತರ ಪ್ರದೇಶ ಚುನಾವಣೆಗಳ ಸಂದರ್ಭದಲ್ಲಿ 'ಲವ್ ಜಿಹಾದ್' ಬಳಸಿದಂತೆ. ಇದು 'ವೋಟ್ ಬ್ಯಾಂಕ್ ರಾಜಕೀಯ'ದ ಅತ್ಯಂತ ಹೊಲಸು ಸ್ವರೂಪ.

ಒಂದು ಉತ್ತಮ ಬದುಕಿಗಾಗಿ ಜನತೆಯ ಹೋರಾಟಗಳನ್ನು, ಅದರ ಆಧಾರದಲ್ಲಿ ಒಂದು ಉತ್ತಮ ಭಾರತದ ನಿರ್ಮಾಣದ ಹೋರಾಟವನ್ನು ಬಲಪಡಿಸಲು ಈ ದುಷ್ಟ ಅಜೆಂಡಾವನ್ನು ಸೋಲಿಸಬೇಕಾಗಿದೆ. ●

## ಪ್ರಧಾನ ಮಂತ್ರಿಗಳ ಬಣ್ಣದ ಮಾತಿನಿಂದ ಮೂಲಭೂತ ಸಮಸ್ಯೆಗಳಿಗೆ.........

ಪುಟ 5 ರಿಂದ

ದುರ್ಬಲಗೊಳಿಸಿ ರೈತ ಕೂಲಿಕಾರ್ಮಿಕರ ನಿರೀಕ್ಷೆಯನ್ನು ಹುಸಿಗೊಳಿಸಿದ್ದಾರೆ. ಇಂತಹ ಜನವಿರೋಧಿ ನೀತಿಯನ್ನ ಕೈಬಿಟ್ಟು ಜನಪರ ಆಡಳಿತ ನಡೆಸಬೇಕೆಂದು ಒತ್ತಾಯಿಸಿದರು. ಈ ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾ ಡಿ.ಓ.ಸಿ. ಕಾರ್ಯದರ್ಶಿಯಾದ ಪುಟ್ಟಮಾದು ವಹಿಸಿದ್ದರು. ವೇದಿಕೆಯಲ್ಲಿ ಜಿ. ರಾಮಕೃಷ್ಣ, ಟಿ.ಎಲ್. ಕೃಷ್ಣೇಗೌಡ, ಟಿ. ಯಶವಂತ್, ದೇವಿ, ಬಸವರಾಜ್, ಆನಂದ್, ಲಿಂಗರಾಜಮೂರ್ತಿ, ಸುರೇಂದ್ರ, ಕುಮಾರಿ, ಚಂದ್ರಪ್ಪ ಹೊಸ್ಕೇರ ಉಪಸ್ಥಿತರಿದ್ದರು. ಸ್ವಾಗತವನ್ನು ಪ್ರದೀಪ್ ವಂದನೆಯನ್ನು ಶೋಭಾ ನೆರವೇರಿಸಿದರು.

ಪ್ರತಿನಿಧಿ ಅಧಿವೇಶನವನ್ನು ಜಿ.ಎನ್. ನಾಗರಾಜ್ ಉದ್ಘಾಟಿಸಿ ಮಾತನಾಡುತ್ತಾ ಸಿಪಿಐ(ಎಂ) ಪಕ್ಷದಲ್ಲಿ ಮಾತ್ರ ಪ್ರಜಾಸತ್ತಾತ್ಮಕ ವಿಧಾನದಲ್ಲಿ ಸಮ್ಮೇಳನಗಳು ನಡೆಯುತ್ತವೆ. 2015ರ ಏಪ್ರಿಲ್‌ನಲ್ಲಿ ಅಖಿಲ ಭಾರತ ಪಕ್ಷದ ಮಹಾ ಅಧಿವೇಶನ ಆಂಧ್ರದ ವಿಶಾಖಪಟ್ಟಣಂನಲ್ಲಿ ಹಾಗೂ ರಾಜ್ಯ ಸಮ್ಮೇಳನ ಜನವರಿ 2015ರಲ್ಲಿ ಬೆಂಗಳೂರಲ್ಲಿ ಜರುಗಲಿದೆ. ಅವುಗಳಿಗೆ ಪೂರಕವಾಗಿ ಜಿಲ್ಲಾ ಸಮ್ಮೇಳನ ಜರುಗಿ ಕಳೆದ ಮೂರು ವರ್ಷಗಳಲ್ಲಿ ಪಕ್ಷದ ಚಟುವಟಿಕೆಗಳ ವಿಮರ್ಶೆ, ಮುಂದಿನ ಮೂರು ವರ್ಷಗಳ ಯೋಜನೆಗಳನ್ನು ರೂಪಿಸುವುದು, ಜಿಲ್ಲಾ ನಾಯಕತ್ವ ಮತ್ತು ರಾಜ್ಯ ಸಮ್ಮೇಳನಕ್ಕೆ ಪ್ರತಿನಿಧಿಗಳ ಆಯ್ಕೆ ನಡೆಯುತ್ತಿವೆ ಎಂದರು. ಜಿಲ್ಲಾ ಕಾರ್ಯದರ್ಶಿ ಮಂಡಿಸಿದ ವರದಿಯ ಮೇಲೆ ಪ್ರತಿನಿಧಿಗಳು ಜಿಲ್ಲೆಯ ರಾಜಕೀಯ, ಆರ್ಥಿಕ, ಸಾಮಾಜಿಕ, ಸಂಘಟನಾತ್ಮಕ ಪರಿಸ್ಥಿತಿ ಹಾಗೂ ಮೂರು ವರ್ಷಗಳ ಚಳುವಳಿ ಮುಂತಾದ ವಿಚಾರಗಳ ಬಗ್ಗೆ ಚರ್ಚೆ ನಡೆಸಿದರು.

ಬಗರ್‌ಹುಕುಂ ಸಾಗುವಳಿದಾರರನ್ನು ಒಕ್ಕಲೆಬ್ಬಿಸುವುದನ್ನು ನಿಲ್ಲಿಸಿ ಅವರಿಗೆ ಹಕ್ಕುಪತ್ರ ನೀಡಲು, ವಸತಿ–ನಿವೇಶನ ರಹಿತರಿಗೆ, ವಸತಿ–ನಿವೇಶನ ನೀಡಲು, ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಭ್ರಷ್ಟಾಚಾರ ಮುಕ್ತವಾಗಿ, ಸಮರ್ಪಕವಾಗಿ ಜಾರಿಗೊಳಿಸಲು, ಟನ್ ಕಬ್ಬಿಗೆ ಕನಿಷ್ಠ 3,000 ರೂಪಾಯಿ ಬೆಲೆ ನಿಗದಿಗೊಳಿಸಲು, ದಲಿತರ ಮೇಲೆ ನಡೆಯುತ್ತಿರುವ ದೌರ್ಜನ್ಯ ತಡೆಗಟ್ಟಿ, ಜಾತಿ–ಅಸ್ಪೃಶ್ಯತೆ ನಿವಾರಿಸಲು, ಅಸಂಘಟಿತ ಕಾರ್ಮಿಕರಿಗೆ ಮಾಸಿಕ ಕನಿಷ್ಠ ವೇತನ 15,000 ರೂಪಾಯಿ ನಿಗದಿ ಪಡಿಸಲು ಹಾಗೂ ಮಹಿಳೆ ಮತ್ತು ಮಕ್ಕಳ ಮೇಲೆ ನಡೆಯುತ್ತಿರುವ ಲೈಂಗಿಕ ದೌರ್ಜನ್ಯಗಳನ್ನು ತಡೆಗಟ್ಟಲು ಒತ್ತಾಯಿಸಿ ನಿರ್ಣಯಗಳನ್ನು ಕೈಗೊಳ್ಳಲಾಯಿತು.

ಇದೇ ಸಂದರ್ಭದಲ್ಲಿ 17 ಮಂದಿಯ ನೂತನ ಜಿಲ್ಲಾ ಸಮಿತಿ ಆಯ್ಕೆ ಮಾಡಲಾಯಿತು. ಜಿಲ್ಲಾ ಕಾರ್ಯದರ್ಶಿಯಾಗಿ ಜಿ. ರಾಮಕೃಷ್ಣ ಮತ್ತು ಕಾರ್ಯದರ್ಶಿ ಮಂಡಳಿ ಸದಸ್ಯರಾಗಿ ಎಂ. ಪುಟ್ಟಮಾದು, ಟಿ.ಎಲ್. ಕೃಷ್ಣೇಗೌಡ, ಟಿ. ಯಶವಂತ, ಸಿ. ಕುಮಾರಿ, ದೇವಿ ಹಾಗೂ ಜಿಲ್ಲಾ ಸಮಿತಿ ಸದಸ್ಯರಾಗಿ ಎನ್. ಎಲ್. ಭರತ್‌ರಾಜ್, ಎನ್. ಲಿಂಗರಾಜಮೂರ್ತಿ, ಕೆ. ಬಸವರಾಜು, ಟಿ.ಹೆಚ್. ಆನಂದ, ಸುಶೀಲ, ಶೋಭ, ಎನ್. ಸುರೇಂದ್ರ, ಮಹದೇವಮ್ಮ, ತನುಜ, ಸರೋಜಮ್ಮ, ಆರ್. ಕೃಷ್ಣರವರನ್ನ ಆಯ್ಕೆ ಮಾಡಲಾಯಿತು. ●

## ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು?
## ಹೀಗೊಂದು ಶಾಸ್ತ್ರ ಮತ್ತು ಸಂಪ್ರದಾಯ ರಹಿತವಾಗಿ ಸರಳ ವಿವಾಹ

ಇದೇ ಸಂದರ್ಭದಲ್ಲಿ ಪಕ್ಷದ ಸಂಗಾತಿ ಹನುಮೇಶ್ ರವರು ಶಿಲ್ಪ ಎಂಬ ಯುವತಿಯನ್ನು ಶಾಸ್ತ್ರ ಮತ್ತು ಸಂಪ್ರದಾಯ ರಹಿತವಾಗಿ ವಿವಾಹವಾದರು. ವಿವಾಹ ಸಂಹಿತೆ ಬೋಧನೆಯನ್ನು ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ನಿತ್ಯಾನಂದ ಸ್ವಾಮಿಯವರು ನೆರವೇರಿಸಿ ಮಾತನಾಡುತ್ತಾ ಹೆಣ್ಣು ಮತ್ತು ಗಂಡು ಈರ್ವವರ ಪರಸ್ಪರ ಮೆಚ್ಚುಗೆ ಮುಖ್ಯವೇ ಹೊರತು ಶಾಸ್ತ್ರ ಸಂಪ್ರದಾಯವೆಲ್ಲಾ ಬರಿ ಬೂಟಾಟಿಕೆ. ಕುವೆಂಪುರವರು ಹೇಳಿರುವಂತೆ ಯಾವ ಕಾಲದ ಶಾಸ್ತ್ರ ಏನು ಹೇಳಿದರೇನು ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು? ಎಂದು ಕುವೆಂಪುರವರನ್ನ ಸ್ಮರಿಸಿಕೊಂಡರು. ಎಡ ಚಳುವಳಿಯ ಬಹಳಷ್ಟು ಮಂದಿ ಕಾರ್ಯಕರ್ತರು ಇದೇ ರೀತಿಯ ವಿವಾಹವಾಗಿ ಬಹಳ ಚೆನ್ನಾಗಿ ಜೀವನ ನಡೆಸುತ್ತಾ ಕುಟುಂಬಕ್ಕೆ ಸಮಾಜಕ್ಕೆ ಜವಾಬ್ದಾರಿಯುತವಾಗಿ ಬದುಕುತ್ತಿದ್ದಾರೆ ಎಂದರು.



# ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ನೇತೃತ್ವದಲ್ಲಿ ಸಾಮಾಜಿಕ ಅನಿಷ್ಟಗಳನ್ನು ಜಾಲಾಡುವ ಜ್ವಲಂತ ಚಳುವಳಿ

**ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ 21 ನೇ ಕರ್ನಾಟಕ ರಾಜ್ಯ ಸಮ್ಮೇಳನವು ಇದೇ 2015 ರ ಜನವರಿ 8 ರಿಂದ 11 ರ ವರೆಗೆ ಬೆಂಗಳೂರು ನಗರದಲ್ಲಿ ನಡೆಯಲಿದೆ. ಈ ಸಂದರ್ಭದಲ್ಲಿ ಸಿಪಿಐ(ಎಂ)ನ 20 ನೇ ರಾಜ್ಯ ಸಮ್ಮೇಳನವು ಸಾಮಾಜಿಕ ಪ್ರಶ್ನೆಗಳ ವಿಷಯದಲ್ಲಿ ನಿಗದಿಗೊಳಿಸಿಕೊಂಡಿದ್ದ ಗುರಿ-ಕರ್ತವ್ಯಗಳೇನು ಮತ್ತು ಈ ನಿಟ್ಟಿನಲ್ಲಿ ಕಳೆದ ಮೂರು ವರ್ಷಗಳಲ್ಲಿ ನಡೆದ ಚಳುವಳಿ ಹೋರಾಟಗಳೇನೇನು ಎಂಬ ಒಂದು ಅವಲೋಕನ.**



2012 ರ ಜನವರಿಯಲ್ಲಿ ಚಿಕ್ಕಬಳ್ಳಾಪುರದಲ್ಲಿ ಸಿಪಿಐ(ಎಂ)ನ 20ನೇ ರಾಜ್ಯ ಸಮ್ಮೇಳನ ನಡೆದಾಗ ಕರ್ನಾಟಕದಲ್ಲಿ ಬಿಜೆಪಿ ಸರ್ಕಾರದ ಆಡಳಿತವಿತ್ತು. ರಾಜ್ಯದಲ್ಲಿ ಬಿಜೆಪಿ ಸರಕಾರದ ಮಹಾ ಭ್ರಷ್ಟಾಚಾರ ಹಾಗೂ ದುರಾಡಳಿತ, ಬೀದಿ ಕಿತ್ತಾಟಗಳು, ಕೋಮುವಾದಿ ದಾಳಿಗಳು ಮತ್ತು ನೀತಿಗಳಿಗಾಗಿ ರಾಜ್ಯದ ಜನರು ಬಿಜೆಪಿ ಸರಕಾರವನ್ನು ಕಿತ್ತು ಹಾಕಿದ್ದು ಎಲ್ಲರಿಗೂ ಗೊತ್ತಿರುವ ವಿಷಯ. ಈ ಬಿಜೆಪಿ ಸರಕಾರ ನಮ್ಮ ಸಮಾಜದಲ್ಲಿ ಬೇರೂರಿರುವ ಅನಿಷ್ಟ ಸಾಮಾಜಿಕ ಆಚರಣೆಗಳಾದ ಮಡೆಸ್ನಾನ, ಪಂಕ್ತಿಬೇಧ, ಜಾತಿತಾರತಮ್ಯಗಳು, ಅಸ್ಪೃಶ್ಯತೆ, ಮೂಢ ನಂಬಿಕೆಗಳು ಮುಂತಾದ ಪ್ರಶ್ನೆಗಳಲ್ಲಿ ಪ್ರತ್ಯಕ್ಷವಾಗಿಯೂ ಮತ್ತು ಪರೋಕ್ಷವಾಗಿಯೂ ಪ್ರಗತಿ ವಿರೋಧಿಗಳ ಜೊತೆ ಗುರುತಿಸಿಕೊಂಡಿತ್ತು ಮತ್ತು ಜಾತಿವಾದಿಗಳು, ವಂಚಕ ಶೋಷಕರ ಪರ ವಹಿಸಿತ್ತು. 2013 ರ ಮೇಯಲ್ಲಿ ವಿಧಾನ ಸಭಾ ಚುನಾವಣೆಗಳು ನಡೆದು ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂತು. ಆದರೆ ಮೂಢನಂಬಿಕೆ ನಿಷೇಧ ಕಾಯ್ದೆಯ ಪ್ರಶ್ನೆಯೇ ಇರಲಿ, ದಲಿತರ ಮೇಲಿನ ದೌಜನ್ಯಗಳ ವಿರುದ್ದವೇ ಇರಲಿ ಸರಕಾರ ದೃಢವಾಗಿ ವರ್ತಿಸುತ್ತಿಲ್ಲ, ಶೋಷಿತರ ಪರ ದೃಢವಾಗಿ ನಿಲ್ಲುತ್ತಿಲ್ಲ ಎಂಬುದು ಕಂಡು ಬರುತ್ತಿದೆ.

ಚಿಕ್ಕಬಳ್ಳಾಪುರದಲ್ಲಿ ನಡೆದ ಸಿಪಿಐ(ಎಂ)ನ 20 ನೇ ರಾಜ್ಯ ಸಮ್ಮೇಳನವು ರಾಜ್ಯದಲ್ಲಿ ಜಾರಿಯಲ್ಲಿರುವ ಅನಿಷ್ಟ ಸಂಪ್ರದಾಯಗಳಾದ ಮಡೆಸ್ನಾನ, ಪಂಕ್ತಿಬೇಧ, ಜಾತಿತಾರತಮ್ಯ, ಅಸ್ಪೃಶ್ಯತೆಗಳ ವಿರುದ್ಧ ದೃಢವಾದ ಚಳುವಳಿಯನ್ನು ತೀವ್ರಗೊಳಿಸಲು ತೀರ್ಮಾನಿಸಿತ್ತು.

ಸಿಪಿಐ(ಎಂ) ಪಕ್ಷ ಈ ಅವಧಿಯಲ್ಲಿ ನಿರಂತರವಾಗಿ ದಲಿತರ ಮೇಲಿನ ದೌರ್ಜನ್ಯ, ಸಾಮಾಜಿಕ ಅನಿಷ್ಟಗಳ ವಿರುದ್ದ ದನಿ ಎತ್ತುತ್ತ ಮತ್ತು ಪ್ರತಿಭಟನೆಯ ಬಾವುಟ ಹಾರಿಸುತ್ತಾ ಬಂದಿದೆ.

**ಮಡೆಸ್ನಾನ ಮತ್ತು ಪಂಕ್ತಿಬೇಧದ ವಿರುದ್ಧ ರಣಕಹಳೆ**

ಪಕ್ಷದ ಕಳೆದ ರಾಜ್ಯ ಸಮ್ಮೇಳನದ ಬೆನ್ನ ಹಿಂದೆಯೇ ಸಿಪಿಐ(ಎಂ) ದೊಡ್ಡ ರೀತಿಯಲ್ಲಿ ಮಡೆಸ್ನಾನ ಮತ್ತು ಪಂಕ್ತಿಬೇಧದಂತಹ ಜಾತಿ ತಾರತಮ್ಯ ಹಾಗೂ ಸಾಮಾಜಿಕ ಅನಿಷ್ಟಗಳ ವಿರುದ್ದದ ಚಳುವಳಿ ಸಂಘಟಿಸಿತು. ಅನಂತರ ಹಲವು ಪ್ರಗತಿಪರ ಜನಪರ ಸಂಘಟನೆಗಳೂ ಈ ಪ್ರಶ್ನೆಯ ವಿರುದ್ದ ದನಿ ಎತ್ತಿದವು. ಬ್ರಾಹ್ಮಣರು ಉಂಡ ಎಂಜಲೆಲೆ ಮೇಲೆ ಉರುಳುವ ಮಡೆಸ್ನಾನ ಮತ್ತು ಉಡುಪಿಯ ಪೇಜಾವರ ಮಠವೂ ಸೇರಿದಂತೆ ರಾಜ್ಯದ ಅನೇಕ ದೇವಾಲಯಗಳು, ಮಠಗಳು ಮತ್ತು ಧಾರ್ಮಿಕ ಕೇಂದ್ರಗಳಲ್ಲಿ ನಡೆಯುವ ಜಾತಿ ತಾರತಮ್ಯದ ವಿಷಯಗಳು ವ್ಯಾಪಕ ಚರ್ಚೆಗೆ ಬಂದವು.

ಡಿಸೆಂಬರ್ 1, 2012 ರಂದು ಮಂಗಳೂರಿನಲ್ಲಿ ಡಿವೈಎಫ್ಐ-ಡಿ.ಎಸ್.ಎಸ್.(ಅಂಬೇಡ್ಕರ್‌ವಾದ) ಸಂಘಟನೆಗಳು ಇದೇ ವಿಷಯವಾಗಿ ವಿಚಾರ ಸಂಕಿರಣವನ್ನು ಸಂಘಟಿಸಿದ್ದವು.

**ಜನವರಿ 26, 2012 ಉಡುಪಿಯ ಪೇಜಾವರ ಮಠದ ಮುಂದೆ ಬೃಹತ್ ಪ್ರತಿಭಟನೆ**

ಜನವರಿ 26, 2012 ರಂದು ಗಣರಾಜ್ಯೋತ್ಸವದಂದು ಪಂಕ್ತಿ ಬೇಧ-ಜಾತಿಬೇಧಗಳನ್ನು ಖಂಡಿಸಿ ಉಡುಪಿಯ ಪೇಜಾವರ ಮಠದ ಬಳಿ ತೆರಳಿ ಅಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಯಿತು. ಅದಕ್ಕೂ ಮೊದಲು ಉಡುಪಿ-ದಕ್ಷಿಣ ಕನ್ನಡ ಮತ್ತು ರಾಜ್ಯದ ನಾನಾ ಜಿಲ್ಲೆಗಳಿಂದ ಬಂದು ನೆರೆದ ಸಹಸ್ರಾರು ಜನರು ಉಡುಪಿಯ ಅಜ್ಜರ ಕಾಡಿನಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಪಾಲ್ಗೊಂಡಿದ್ದರು. ಉಡುಪಿಯ ಮುಖ್ಯಬೀದಿಗಳಲ್ಲಿ ನಡೆದ ಮೆರವಣಿಗೆ ಜನರ ಗಮನ ಸೆಳೆಯಿತು. ಮಠದ ಆವರಣಕ್ಕೆ ತೆರಳಿ ಪ್ರಜಾಸತ್ತಾತ್ಮಕ ವಿರೋಧವನ್ನು ದಾಖಲಿಸಲು ಅವಕಾಶ ನೀಡದ ಪೊಲೀಸರ ಮತ್ತು ಸರಕಾರದ ಧೋರಣೆಯನ್ನು ಖಂಡಿಸಲಾಯಿತು. ಪೇಜಾವರ ಮಠದ ಮಾರ್ಗದ ಸಂಸ್ಕೃತ ಕಾಲೇಜು ಬಳಿ ಚಳುವಳಿಕಾರರು ಹಾಗೂ ಪೊಲೀಸರಿಗೂ ತೀವ್ರ ವಾಗ್ವಾದ ನಡೆಯಿತು. ಅಲ್ಲಿಯೇ ಬೃಹತ್ ಪ್ರತಿಭಟನಾ ಸಭೆ ಕೂಡ ನಡೆಯಿತು.

ಮಡೆಸ್ನಾನ ವಿರೋಧಿಸಿ ಮಾರ್ಚ್ 26, 2012 ರಂದು ಬೆಂಗಳೂರಿನಲ್ಲಿ ಪ್ರಗತಿಪರ ಮಠಾಧೀಶರು ನಡೆಸಿದ ಸಾಮೂಹಿಕ ಧರಣಕ್ಕೆ ಬೆಂಬಲ ನೀಡಲಾಯಿತು.





**ಡಿಸೆಂಬರ್ 27, 2012 ಪೇಜಾವರ ಮಠದ ಎದುರು ಪೋಲಿಸರ ಲಾಠಿ ಪ್ರಹಾರ**

ಉಡುಪಿ ಮಠದಲ್ಲಿನ ಜಾತಿ ಬೇಧ-ಪಂಕ್ತಿಬೇಧ ಖಂಡಿಸಿ ಸಹಬೋಜನಕ್ಕೆ ಆಗ್ರಹಿಸಿ 2012 ರ ಡಿಸೆಂಬರ್‌ನಲ್ಲಿ ತೀವ್ರ ಚಳುವಳಿಯನ್ನು ಸಂಘಟಿಸಲಾಯಿತು. ಡಿ. 21, 2012 ರಿಂದ ಜನಜಾಗೃತಿ ಜಾಥಾಗಳನ್ನು ನಡೆಸಲಾಯಿತು. ಸುಬ್ರಮಣ್ಯದಿಂದ ವಾಹನ ಜಾಥಾ ನಡೆಲಾಯಿತು. ಡಿಸೆಂಬರ್ 24 ರಿಂದ ಮಂಗಳೂರಿನಿಂದ ಉಡುಪಿಗೆ ಹಾಗೂ ಬೈಂದೂರಿನಿಂದ ಕುಂದಾಪುರ ಮಾರ್ಗವಾಗಿ ಉಡುಪಿಗೆ ಕಾಲ್ನಡಿಗೆ ಜಾಥಾ ನಡೆಸಲಾಯಿತು. ಅಂತಿಮವಾಗಿ ಡಿಸೆಂಬರ್ 27, 2012 ರಂದು ಉಡುಪಿಯ ಅಜ್ಜರ ಕಾಡಿನಲ್ಲಿ ಬೃಹತ್ ಪ್ರತಿಭಟನಾ ಸಭೆ, ಶ್ರೀಕೃಷ್ಣ ಮಠದ ಎದುರು ಪ್ರತಿಭಟನೆ ನಡೆಯಿತು. ಬಿಜೆಪಿ ಸರಕಾರ ಪ್ರಗತಿವಿರೋಧಿಯಾಗಿ ವರ್ತಿಸಿತು. ಉಡುಪಿಯ ಬೀದಿಯಲ್ಲಿ ಬಿಜೆಪಿ ಪೊಲೀಸರು ಸಾಮಾಜಿಕ ನ್ಯಾಯದ ಚಳುವಳಿಕಾರರನ್ನು ಬಡಿದು ರಕ್ತ ಹರಿಸಿದರು. ಪೊಲೀಸ್ ದೌರ್ಜನ್ಯಕ್ಕೆ ತುತ್ತಾದವರ 121 ಜನರ ಮೇಲೆಯೇ ಮೊಕದ್ದಮೆ ಹೂಡಿದರು. ಬಂಧಿಸಿದರು. ಚಳುವಳಿ ಇದಾವುದಕ್ಕೂ ಜಗ್ಗದೇ ನಿರಂತರವಾಗಿ ಸಾಗಿ ಬಂದಿದೆ.

ಮೇ 5 ರಿಂದ 8, 2013 ರವರೆಗೆ ಬೆಂಗಳೂರಿನಲ್ಲಿ ಸಾಮೂಹಿಕ ಧರಣ ಮತ್ತು ರಾಜ್ಯಮಟ್ಟದ ವಿಚಾರ ಸಂಕಿರಣ, ಹಾಗೂ ಇದೇ ಅವಧಿಯಲ್ಲಿ ರಾಜ್ಯವ್ಯಾಪಿ ಪ್ರತಿಭಟನೆಗಳನ್ನು ಸಂಘಟಿಸಲಾಯಿತು.

**ಚಿಕ್ಕಬಳ್ಳಾಪುರದಲ್ಲಿ ಚಳುವಳಿಕಾರರ ಮೇಲೆ ಹಲ್ಲೆ**

ಡಿಸೆಂಬರ್ 8, 2013 ರಂದು ಚಿಕ್ಕಬಳ್ಳಾಪುರದ ಸುಬ್ರಹ್ಮಣ್ಯ ದೇವಾಲಯದ ಬಳಿ ಮಡೆಸ್ನಾನ ವಿರೋಧಿಸಿ ಸಿಪಿಐ(ಎಂ)ನಿಂದ ಬೃಹತ್ ಪ್ರತಿಭಟನೆ ನಡೆಸಲಾಯಿತು. ಚಳುವಳಿಕಾರರಿಗೆ ಮಡೆಸ್ನಾನ ನಡೆಯುವುದಿಲ್ಲವೆಂಬ ಭರವಸೆ ನೀಡಿ ಕೊನೆಗಳಿಗೆಯಲ್ಲಿ ಮಡೆಸ್ನಾನ ನಡೆಸಿ ವಂಚಿಸಲಾಯಿತು. ಮಡೆಸ್ನಾನವನ್ನು ತಡೆಯಲು ಹೋದ ಸಿಪಿಐ(ಎಂ) ಕಾರ್ಯಕರ್ತರನ್ನು ತೀವ್ರವಾಗಿ ಥಳಿಸಿ ಹಲ್ಲೆ ನಡೆಸಲಾಯಿತು.

**ಡಿ-8, 2014 ಚಿಕ್ಕಬಳ್ಳಾಪುರದಲ್ಲಿ ಮಡೆಸ್ನಾನಕ್ಕೆ ತಡೆ**

ಡಿಸೆಂಬರ್, 8 2014 ರಂದು, ಇದೇ ಚಿಕ್ಕಬಳ್ಳಾಪುರದಲ್ಲಿ ಸಿಪಿಐ(ಎಂ) ನೇತೃತ್ವದಲ್ಲಿ ನಡೆದ ಸಹಸ್ರಾರು ಜನರು ಪಾಲ್ಗೊಂಡ ಪ್ರತಿಭಟನೆ ಮತ್ತು ಜನಜಾಗೃತಿ ಫಲವಾಗಿ ಅಲ್ಲಿ ಮಡೆಸ್ನಾನ ನಡೆಸುವುದು ಸಾಧ್ಯವಾಗಲಿಲ್ಲ. ಅನಿಷ್ಟ ಆಚರಣೆಗೆ ಯಶಸ್ವಿಯಾಗಿ ತಡೆಹಾಕುವುದು ಸಾಧ್ಯವಾಗಿದೆ. ಈ ಹಂತದಲ್ಲಿ ಮಂಗಳೂರಿನಲ್ಲಿಯೂ ಪ್ರತಿಭಟನೆ ನಡೆದಿದೆ. ನ್ಯಾಯಾಲಯದ ಮಧ್ಯಂತರ ತೀರ್ಪಿನ ಫಲವಾಗಿ ಕುಕ್ಕೆಯಲ್ಲಿ ಮಡೆಸ್ನಾನ ನಡೆದು ಹೋಗಿದೆ. ಆದರೆ ಜನರ ಪಾಲ್ಗೊಳ್ಳುವಿಕೆ ಕಡಿಮೆಯಾಗಿದೆ. 2013 ರಲ್ಲಿ ಅರಕಲ ಗೂಡಿನಲ್ಲಿ ನಡೆಯಲಿದ್ದ



ಚಿಕ್ಕಬಳ್ಳಾಪುರದಲ್ಲಿ ಮಡೆಸ್ನಾನ ತಡೆಗಟ್ಟಲು ಯಶಸ್ವಿಯಾದ ಸಿಪಿಐ(ಎಂ) ಚಳುವಳಿ

ಜನಶಕ್ತಿ
ಕನ್ನಡ ವಾರಪತ್ರಿಕೆ

ಮಡೆಸ್ನಾನ ಚಳುವಳಿ ಜನಜಾಗೃತಿಯ ಫಲವಾಗಿ ನಿಂತಿದೆ. ಮಡೆಸ್ನಾನ–ಪಂಕ್ತಿಭೇಧ ವಿರೋಧಿಸಿ ಗಣ್ಯರ ಸಾಹಿತಿ ಚಿಂತಕರ ಸಹಿ ಸಂಗ್ರಹ ಚಳುವಳಿ ನಡೆಸಲಾಗಿದೆ. ಹಾಗೂ ಸಿಪಿಐ(ಎಂ) ರಾಜ್ಯ ಮುಖಂಡತ್ವವು ರಾಜ್ಯಪಾಲರನ್ನು ಕಂಡು ಬೇಡಿಕೆ ಪಟ್ಟಿ ಹಾಗೂ ಸಂಗ್ರಹಿಸಲಾದ ಸಹಿಗಳನ್ನು ಸಲ್ಲಿಸಿ ಚರ್ಚಿಸಿದೆ.

ಡಿಸೆಂಬರ್ 8, 2014 ರಂದು ಮಡೆಸ್ನಾನ ವಿರೋಧಿಸಿ ಮಂಗಳೂರಿನಲ್ಲಿ ಹಾಗೂ ಇತರೆ ಕಡೆಗಳಲ್ಲಿ ಪ್ರತಿಭಟನೆಗಳು ನಡೆದಿವೆ. ಬೀದರ್‌ನ ಬಸವಕಲ್ಯಾಣದಲ್ಲಿ ಜೂನ್, 2014ರಲ್ಲಿ ಪ್ರಗತಿಪರ ಮಠಾಧೀಶರು ನಡೆಸಿದ ಉಪವಾಸ ಸತ್ಯಾಗ್ರಹ ಮತ್ತು ದಲಿತರ ಕಾಲೋನಿಯಲ್ಲಿ ದಲಿತರೊಂದಿಗಿನ ಸಾಮೂಹಿಕ ಭೋಜನ ಕಾರ್ಯಕ್ರಮವನ್ನು ಬೆಂಬಲಿಸಿ ಭಾಗವಹಿಸಲಾಗಿದೆ.





**ಮರಕುಂಬಿ: ದಲಿತರ ಬಹಿಷ್ಕಾರ ವಿರುದ್ದ ಚಳುವಳಿ**

2014 ರ ಜುಲೈ–ಆಗಸ್ಟ್ ಸುಮಾರಿನಲ್ಲಿ ಕೊಪ್ಪಳ ಜಿಲ್ಲೆ ಗಂಗಾವತಿ ತಾಲ್ಲೂಕಿನ ಮರುಕುಂಬಿಯಲ್ಲಿ ದಲಿತರಿಗೆ ಕ್ಷೌರ ನಿರಾಕರಣೆಯ ಪ್ರಕರಣವನ್ನು ಕೈಗೆತ್ತಿ–ಕೊಂಡು ನಿರಂತರವಾಗಿ ಚಳುವಳಿ ನಡೆಸಲಾಗಿದೆ. ಈ ಪ್ರಶ್ನೆಯಲ್ಲಿ ಜಾತಿವಾದಿಗಳು ನಮ್ಮ ಸಂಗಾತಿಗಳ ಮನೆ, ಅಂಗಡಿಗಳ ಮೇಲೆ ದಾಳಿ ಮಾಡಿ ದಲಿತರ 4 ಮನೆಗಳಿಗೆ ಬೆಂಕಿಹಾಕಿ ಸುಟ್ಟು ಹಾಕಿದ್ದಾರೆ. ಕೇರಿಗೆ ನುಗ್ಗಿ ಹಲ್ಲೆ, ಧಾಳಿಗಳನ್ನು ನಡೆಸಿದ್ದಾರೆ. ಬಹಿಷ್ಕಾರ ಹಾಕಿದ್ದಾರೆ. ಸಿಪಿಐ(ಎಂ) ಪಕ್ಷದ ನೇತೃತ್ವದಲ್ಲಿ ಮರಕುಂಬಿ ದಲಿತರು ಈ ಧಾಳಿಯನ್ನು ದಿಟ್ಟವಾಗಿ ಎದುರಿಸಿದ್ದಾರೆ. ಸ್ಥಳೀಯವಾಗಿ ಪ್ರತಿಭಟನೆ ಅಲ್ಲದೇ ರಾಜ್ಯವ್ಯಾಪಿ ಪ್ರತಿಭಟನೆ ನಡೆದಿದೆ. ಅಲ್ಲದೇ ಗಂಗಾವತಿ ಬಂದ್‌ನಂತಹ ಹೋರಾಟಗಳನ್ನು ಸಂಘಟಿಸಲಾಗಿದೆ.

**ದಲಿತರ ಮೇಲಿನ ಹಲ್ಲೆಗಳು ದೌರ್ಜನ್ಯಗಳ ವಿರುದ್ದ ಚಳುವಳಿ**

ಮಳವಳ್ಳಿ ತಾಲ್ಲೂಕಿನ ಹುಸ್ಕೂರಿನಲ್ಲಿ ದಾರಿಹೋಕರಿಗೆ ಸಹಾಯ ಮಾಡಹೋದ ದಲಿತರ ಮೇಲೆ ಸವರ್ಣೀಯರಿಂದ ಹಲ್ಲೆ ನಡೆದ ಸಂದರ್ಭದಲ್ಲಿ ಸಿಪಿಐ(ಎಂ) ಪ್ರತಿಭಟನೆ ನಡೆಸಿದೆ. ಚಾಮರಾಜನಗರದ ಶಂಭು ಲಿಂಗೇಶ್ವರ ಉತ್ಸವದ ಸಂದರ್ಭದಲ್ಲಿ ದಲಿತರ ಮೇಲೆ ದೌರ್ಜನ್ಯ ಖಂಡಿಸಿ ಪಾದಯಾತ್ರೆ ನಡೆಸಲಾಗಿದೆ. ಬೆಳಗಾವಿಯ ಶೇಗುಣಿಸಿಯಲ್ಲಿ ದಲಿತರ ಮೇಲೆ ನಡೆದ ದೌರ್ಜನ್ಯದ ವಿರುದ್ದ ಸಿಪಿಐ(ಎಂ) ಮಧ್ಯಪ್ರವೇಶಿಸಿ ಪ್ರತಿಭಟಿಸಿದೆ. ಬೆಂಗಳೂರು ಗ್ರಾಮಾಂತರದ ಹೊಸಕೋಟೆಯಲ್ಲಿ, ದಕ್ಷಿಣ ಕನ್ನಡದ ಪಡುಬಿದ್ರೆಯಲ್ಲಿ ದಲಿತರ ದೇವಸ್ಥಾನ ಪ್ರವೇಶ, ಹಾಸನದ ಗಂಗೂರಿನ ದಲಿತ ಮಹಿಳೆಯ ದೇವಸ್ಥಾನ ಪ್ರವೇಶದ ಹಿನ್ನೆಲೆಯಲ್ಲಿ ಜಾತಿವಾದದ ವಿರುದ್ದ ಸಿಪಿಐ(ಎಂ) ದೃಢ ನಿಲುವು ತಳೆದು ಮಧ್ಯ ಪ್ರವೇಶಿಸಿದೆ. ಬೆಂಗಳೂರು ಕೃಷಿ ವಿ.ವಿ.ಯಲ್ಲಿ ಜಾತಿ ತಾರತಮ್ಯದ ವಿರುದ್ದ ಮಧ್ಯಪ್ರವೇಶಿಸಿ ಪ್ರತಿಭಟಿಸಲಾಗಿದೆ. ಮಂಡ್ಯದಲ್ಲಿ ಅಂತರ್ ಜಾತೀಯ ವಿವಾಹಿತ ಯುವತಿಯ ಅಪಹರಣದಲ್ಲಿ ಯಶಸ್ವಿಯಾಗಿ ಮಧ್ಯಪ್ರವೇಶಿಸಲಾಗಿದೆ. ಯುವತಿ ರಕ್ಷಣೆ ಸಾಧ್ಯವಾಗಿದೆ. ಮಂಡ್ಯದ ಅಂತರ್‌ಜಾತಿ ವಿವಾಹಿತೆ ಶಿಲ್ಪಾಳ ಸಜೀವ ದಹನದ ವಿರುದ್ಧ ಪ್ರತಿಭಟಿಸಲಾಗಿದೆ. ಜೇವರ್ಗಿಯಲ್ಲಿ ಬೇಡರು ಕುಡಿಯುವ ನೀರು ತೆಗೆದುಕೊಂಡದ್ದಕ್ಕಾಗಿ ಕೊಲೆಗೀಡಾದ ಪ್ರಕರಣದಲ್ಲಿ ಪ್ರತಿಭಟಿಸಲಾಗಿದೆ. ಮಂಗಳೂರು, ಬೆಂಗಳೂರು, ಹೊಸಪೇಟೆಯಲ್ಲಿ ಅಂತರ್ ಜಾತಿ ವಿವಾಹಿತರ ವಿವಾಹವನ್ನು ಬೆಂಬಲಿಸಲಾಗಿದೆ. ಮುಳಬಾಗಿಲಿನ ಕಗ್ಗನ ಹಳ್ಳಿ ದಲಿತರ ಬಹಿಷ್ಕಾರದ ವಿರುದ್ದ ಹಾಗೂ 48 ದಲಿತ ಕುಟುಂಬಗಳನ್ನು ಒಕ್ಕಲೆಬ್ಬಿಸಿ ಬೀದಿಗೆ ಹಾಕಿದ ಪ್ರಕರಣದ ವಿರುದ್ದ ಯಶಸ್ವಿಯಾಗಿ ಪ್ರತಿಭಟಿಸಿ ಒಕ್ಕಲೆಬ್ಬಿಸುವಿಕೆಗೆ ತಡೆಹಾಕಲಾಗಿದೆ. ಹಕ್ಕುಪತ್ರಗಳನ್ನು ಕೊಡಿಸುವುದು ಸಹ ಸಾಧ್ಯವಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೊರಗರ ಸಬಲೀಕರಣಕ್ಕಾಗಿ ಹಾಗೂ ಕೊರಗ ಕುಟುಂಬಗಳ ಒಕ್ಕಲೆಬ್ಬಿಸುವುದರ ವಿರುದ್ದ ಪ್ರತಿಭಟಿಸಲಾಗಿದೆ. ಸಿರುಗುಪ್ಪ ತಾಲ್ಲೂಕಿನಲ್ಲಿ ಕರೂರು ಮತ್ತು ಕಾರಿಗನೂರಿನಲ್ಲಿ ಜಾತ್ರೆಯಲ್ಲಿ ಹಲಗೆ ಬಾರಿಸಿದ ಸಂಬಂಧದಲ್ಲಿ ದಲಿತರ ಮೇಲಿನ ಹಲ್ಲೆಯನ್ನು ಪ್ರತಿಭಟಿಸಲಾಗಿದೆ. ಶಿವಮೊಗ್ಗದಲ್ಲಿ ದಲಿತರ ಜಾತಿಪತ್ರ ನಿರಾಕರಣೆ ವಿರುದ್ದ ಮಧ್ಯಪ್ರವೇಶಿಸಲಾಗಿದೆ. ದೊಡ್ಡಬಳ್ಳಾಪುರದಲ್ಲಿ ದಲಿತ ದಲಿತ ಬಾಲಕಿ ಮೇಲಿನ ಅತ್ಯಾಚಾರವನ್ನು ಖಂಡಿಸಿ ಪ್ರತಿಭಟಿಸಲಾಗಿದೆ. ಸೂಕ್ತ ಪುನರ್‌ವಸತಿಗಾಗಿ ಶ್ರಮಿಸಲಾಗಿದೆ. ಯಾದಗಿರಿ ಜಿಲ್ಲೆಯ ಶಹಾಪುರ ತಾಲ್ಲೂಕು ಕನ್ನಕೊಳ್ಳೂರು ಗ್ರಾಮದಲ್ಲಿ ಸಂಕ್ರಾಂತಿ ಹಬ್ಬದಂದು ಶುಭಾಶಯ ಬ್ಯಾನರ್ ಹಾಕಿದ್ದಕ್ಕಾಗಿ ಭೀಮಪ್ಪ ದಳಪತಿ ಎಂಬುವವರನ್ನು ಕೊಂದದ್ದನು ಪ್ರತಿಭಟಿಸಲಾಗಿದೆ. ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲ್ಲೂಕಿನ ಗದ್ಯಾಳದಲ್ಲಿ ಎಸ್.ಟಿ. ಜನರಿಗೆ ಬಹಿಷ್ಕಾರ ಹಾಕಿದಾಗ ಮಧ್ಯಪ್ರವೇಶಿಸಿ ಪ್ರತಿಭಟಿಸಲಾಗಿದೆ. ಈ ಹತ್ತು ಹಲವು ಚಳುವಳಿಗಳಲ್ಲಿ ಸಿಪಿಐ(ಎಂ) ನೇತೃತ್ವದ ದಲಿತ ಹಕ್ಕು ಸಮಿತಿಯು ಸಕ್ರಿಯ ಪಾತ್ರ ವಹಿಸಿದೆ. ಮೈಸೂರು ಜಿಲ್ಲೆಯ ಕುಪ್ಪೆಗಾಲದಲ್ಲಿ ದಲಿತ ಬಿಸಿಯೂಟದ ಮಹಿಳೆಗೆ ಬಹಿಷ್ಕಾರ ಹಾಕಿದ ಸಂದರ್ಭದಲ್ಲಿ ಪ್ರತಿಭಟಿಸಲಾಗಿದೆ.



ಚಾಮರಾಜನಗರದ ಟಿ. ನರಸೀಪುರದಲ್ಲಿ ದಲಿತ ಜೀತದಾಳು ಶಿವಕುಮಾರ್ ಆತ್ಮಹತ್ಯೆ ಪ್ರಕರಣದಲ್ಲಿ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲಾಗಿದೆ.

**ಆದಿವಾಸಿ ಹಕ್ಕು ಚಳುವಳಿ**

ರಾಜ್ಯದಲ್ಲಿ ಆದಿವಾಸಿ–ಬುಡಕಟ್ಟು ಜನರನ್ನು ಸಂಘಟಿಸಲು ಮುತುವರ್ಜಿ ವಹಿಸಲಾಗಿದೆ. ಆದಿವಾಸಿಗಳಿಗೆ ಹಕ್ಕು ಪತ್ರಕ್ಕಾಗಿ ಹುಣಸೂರಿನಲ್ಲಿ ಪ್ರತಿಭಟನೆ ನಡೆದಿದೆ. ನಿವೇಶನ, ಭೂಮಿ–ಅರಣ್ಯ ಉತ್ಪನ್ನಗಳ ಹಕ್ಕು, ಕೂಲಿ, ದೌರ್ಜನ್ಯ ವಿರೋಧಿಸಿ ಕೊಡಗು ಜಿಲ್ಲೆಯಲ್ಲಿ ಚಳುವಳಿ ನಡೆದಿದೆ. ಕೊಡಗು ಜಿಲ್ಲೆಯ ಸಿದ್ದಾಪುರದಲ್ಲಿ ಆದಿವಾಸಿಗಳ ಎರಡನೇ ರಾಜ್ಯ ಸಮಾವೇಶವು ಇದೇ ಅವಧಿಯಲ್ಲಿ ನಡೆದಿದೆ. ಬೃಹತ್ ರ್‍ಯಾಲಿ ನಡೆದಿದೆ. ರಾಜ್ಯದ ನಾನಾ ಜಿಲ್ಲೆಗಳಲ್ಲಿ ಸಾಗಿಬಂದ ಆದಿವಾಸಿ ಜಾಥಾವನ್ನು ಸ್ವಾಗತಿಸಲಾಗಿದೆ. ಉತ್ತರ ಕನ್ನಡದ ಜೋಯಿಡಾದಲ್ಲಿ ಆದಿವಾಸಿಗಳ ಜಿಲ್ಲಾ ಮಟ್ಟದ ಸಮಾವೇಶ ನಡೆದಿದೆ. ಶಿವಮೊಗ್ಗದಲ್ಲಿ ಸಮಾವೇಶ ಆಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೋರಾಟಗಳು ನಡೆದಿವೆ. ಕಸ್ತೂರಿ ರಂಗನ್ ವರದಿಯ ಜಾರಿ ವಿರೋಧಿಸಿ ಪ್ರತಿಭಟನೆಗಳು ನಡೆದಿವೆ. ನಾಗರಹೊಳೆ ಪ್ರದೇಶದಲ್ಲಿ ಆದಿವಾಸಿಗಳ ಎತ್ತಂಗಡಿ ವಿರುದ್ಧ ಪ್ರತಿಭಟಿಸಲಾಗಿದೆ. ಇಂತಹ ಪ್ರಯತ್ನಗಳು ಬೇರೆಡೆಯೂ ನಡೆದಿವೆ. ಆದಿವಾಸಿ–ಬುಡಕಟ್ಟು ಜನರ ಸಮಸ್ಯೆಗಳ ಇತ್ಯರ್ಥಕ್ಕೆ ರಾಜ್ಯ ಮಟ್ಟದ 'ವಿಧಾನಸೌಧ ಚಲೋ' ರ್‍ಯಾಲಿ ನಡೆದು ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಗಿದೆ.

**ಆದಿವಾಸಿ ವಿದ್ಯಾರ್ಥಿ, ಪತ್ರಕರ್ತರ ಮೇಲಿನ ದಬ್ಬಾಳಿಕೆಗೆ ವಿರೋಧ**

ದ.ಕ.ಜಿಲ್ಲೆಯ ಆದಿವಾಸಿ ಯುವಕ, ಪತ್ರಿಕೋದ್ಯಮದ ವಿದ್ಯಾರ್ಥಿ ವಿಠ್ಠಲ ಮಲೆಕುಡಿಯ ಮತ್ತು ಆತನ ತಂದೆಯನ್ನು ನಕ್ಸಲ್ ಪೋಲೀಸರು ನಕ್ಸಲ್ ಎಂದು ಆರೋಪಿಸಿ ಸುಳ್ಳು ಮೊಕದ್ದಮೆ ದಾಖಲಿಸಿ ಜೈಲಿಗೆ ಹಾಕಿದ್ದನ್ನು ಸಿಪಿಐ(ಎಂ) ಮತ್ತು ಸಾಮೂಹಿಕ ಸಂಘಟನೆಗಳು ಪ್ರತಿಭಟಿಸಿದವು. ಇದಕ್ಕಾಗಿ ಸಾಹಿತಿಗಳು, ಹೋರಾಟಗಾರರು ಇರುವ ರಾಜ್ಯ ಮಟ್ಟದ ಸೌಹಾರ್ದ ಸಮಿತಿಯನ್ನು ರೂಪಿಸಿ ನಿರಂತರ ಹೋರಾಟ ನಡೆಸಲಾಯಿತು. ಸಂಸದರೂ, ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಗಳೂ ಭೇಟಿ ನೀಡಿ ಸಂಸತ್ತಿನಲ್ಲೂ ಪ್ರಸ್ತಾಪಿಸಿದರು.

**ದಲಿತ ಹಕ್ಕು ಸಮಿತಿ ಹೋರಾಟಗಳು**

ಬಜೆಟ್‌ನಲ್ಲಿ ದಲಿತರಿಗೆ ಅವರ ಜನಸಂಖ್ಯೆಗೆ ಅನುಗುಣವಾಗಿ ಹಣ ಮೀಸಲಿಡಬೇಕು ಹಾಗೂ ವಿಶೇಷ ಘಟಕ ಯೋಜನೆಯನ್ನು ಸಮರ್ಪಕವಾಗಿ ಜಾರಿಗೆ ತರಬೇಕೆಂದು ಈ ಅವಧಿಯಲ್ಲಿ ದಲಿತ ಹಕ್ಕು ಸಮಿತಿಯ ನೇತೃತ್ವದಲ್ಲಿ ನಿರಂತರ ಹೋರಾಟಗಳನ್ನು ಹಮ್ಮಿಕೊಳ್ಳಲಾಗಿದೆ. ಫೆಬ್ರವರಿ 12, 2013 ರಂದು ದಲಿತರ ಮೇಲಿನ ದೌರ್ಜನ್ಯಗಳ ವಿರುದ್ದ, ದಲಿತ ಹಕ್ಕುಗಳಿಗಾಗಿ ಸಹಸ್ರಾರು ಜನರು ಪಾಲ್ಗೊಂಡ 'ವಿಧಾನ ಸೌಧ' ಚಲೋ ಹೋರಾಟ ನಡೆದಿದೆ. ರಾಜ್ಯಮಟ್ಟದ ಬೃಹತ್ ರ್‍ಯಾಲಿ ನಡೆಸಲಾಗಿದೆ.

ದಲಿತರ ಜನಸಂಖ್ಯೆಗೆ ಅನುಗುಣವಾಗಿ ಬಜೆಟ್‌ನಲ್ಲಿ ಹಣ ಮೀಸಲು ಇಡಬೇಕು ಎಂದು ಒತ್ತಾಯಿಸಿ ಮಾರ್ಚ್ 1 ರಿಂದ 7 ರ ವರೆಗೆ ದೇಶವ್ಯಾಪಿಯಾಗಿ ನಡೆದ ಚಳುವಳಿ ಭಾಗವಾಗಿ ರಾಜ್ಯದಲ್ಲಿ ಪ್ರತಿಭಟನಾ ಪ್ರದರ್ಶನಗಳು ನಡೆದಿವೆ. ಸೂಕ್ತ ಬಜೆಟ್ ಅನುದಾನ ಮತ್ತು ಜಾತಿತಾರತಮ್ಯಗಳನ್ನು ವಿರೋಧಿಸಿ ಜುಲೈ 9, 2013 ರಂದು ರಾಜ್ಯವ್ಯಾಪಿಯಾಗಿ ಏಳು ಜಿಲ್ಲಾ ಕೇಂದ್ರಗಳು ಮತ್ತು 21 ತಾಲ್ಲೂಕು ಕೇಂದ್ರಗಳಲ್ಲಿ ಪ್ರತಿಭಟನೆಗಳು ನಡೆದಿವೆ. ನವೆಂಬರ್ 17, 2013 ಮಂಗಳೂರಿನಲ್ಲಿ ದಲಿತ ಹಕ್ಕುಗಳ ಜಾಗೃತಿ ಸಮಾವೇಶ ನಡೆದಿದೆ. ಬೆಂಗಳೂರಿನಲ್ಲಿ ಖಾಸಗೀ ರಂಗದಲ್ಲಿ ಮೀಸಲಾತಿಗಾಗಿ ಫೆಬ್ರವರಿ 15, 2013 ರಂದು 'ಖಾಸಗೀಕರಣ–ಸಾಮಾಜಿಕ ನ್ಯಾಯ'ದ ವಿಷಯದಲ್ಲಿ ರಾಷ್ಟ್ರಮಟ್ಟದ ವಿಚಾರ ಸಂಕಿರಣ ನಡೆಸಲಾಗಿದೆ. ಸಿಪಿಐ(ಎಂ) ಪಧಾನ ಕಾರ್ಯದರ್ಶಿ ಪ್ರಕಾಶ್ ಕಾರಟ್ ಸಮಾವೇಶದಲ್ಲಿ ಪಾಲ್ಗೊಂಡಿದ್ದರು.

ಹಾಸನದಲ್ಲಿ ಪ್ರಜಾಪ್ರಭುತ್ವ ವಿರೋಧಿ ಅಶ್ವಮೇಧ ಯಾಗದ ವಿರುದ್ದ ಪ್ರತಿಭಟಿಸಲಾಗಿದೆ. ಮೂಢನಂಬಿಕೆ ನಿಯಂತ್ರಣ ಕಾಯ್ದೆ ಸಂಬಂಧವಾಗಿ ಸಹ ಸಾಕಷ್ಟು ಪ್ರಚಾರಗಳನ್ನು ಹಾಗೂ ಪ್ರತಿಭಟನೆಗಳನ್ನು ನಡೆಸಲಾಗಿದೆ. ದಾಬೋಲ್ಕರ್ ಹತ್ಯೆಯ ವಿರುದ್ದ ಪ್ರತಿಭಟಿಸಲಾಗಿದೆ.

ಮೀಸಲಾತಿ ಹಾಗೂ ಉಪಯೋಜನೆಗಾಗಿ ಹಕ್ಕೊತ್ತಾಯ ಸಮಾವೇಶವು ಅಕ್ಟೋಬರ್ 27 ಮಂಗಳೂರಿನಲ್ಲಿ ಸಿಪಿಐ(ಎಂ)ನಿಂದ ನಡೆಸಲಾಗಿದೆ.

ರಾಜ್ಯದಲ್ಲಿ ಕಂಡುಬಂದ ಮರ್ಯಾದಾ ಹತ್ಯೆಯಂತಹ ಪ್ರವೃತ್ತಿಗಳ ವಿರುದ್ದ ಪ್ರತಿಭಟಿಸಲಾಗಿದೆ. ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ, ಅತ್ಯಾಚಾರ, ಕೊಲೆ, ನಿರ್ದಿಷ್ಟವಾಗಿ ಧರ್ಮಸ್ಥಳದ ಸೌಜನ್ಯ, ಪ್ರೇಮಲತಾ, ನಂದಿತಾ, ಇತ್ಯಾದಿ ಪ್ರಕರಣಗಳಲ್ಲಿ ಪ್ರಗತಿಪರ ಚಳುವಳಿಯ ದಿಟ್ಟ ನಿಲುವನ್ನು ಪ್ರತಿಬಿಂಬಿಸಲಾಗಿದೆ.

**ದೇವದಾಸಿ ಮಹಿಳೆಯರ ವಿಮೋಚನಾ ಚಳುವಳಿ**

ಬಹುತೇಕ ದಲಿತ ಸಮುದಾಯದವರಾದ ದೇವದಾಸಿ ಮಹಿಳೆಯರ ಮಕ್ಕಳಿಗೆ ನೇಮಕಾತಿಯಲ್ಲಿ ಒಳಮೀಸಲಾತಿಗಾಗಿ ಒತ್ತಾಯಿಸಿ ಸಮಾವೇಶ ನಡೆಸಲಾಗಿದೆ. ದೇವದಾಸಿ ಮಹಿಳೆಯರ 2 ನೇ ರಾಜ್ಯ ಸಮಾವೇಶ ಮತ್ತು ದೇವದಾಸಿ ಪದ್ದತಿಯ ಕುರಿತು ರಾಜ್ಯಮಟ್ಟದ ವಿಚಾರ ಸಂಕಿರಣ ನಡೆದಿದೆ. ಹಿರೇಸಿಂಧೋಗಿ ಪ್ರಕರಣದಲ್ಲಿ ಪ್ರಗತಿಪರ ಮಠಾಧೀಶರ ಪ್ರಯತ್ನ ಬೆಂಬಲಿಸಿ ಭಾಗವಹಿಸಲಾಗಿದೆ. ದೇವದಾಸಿ ಪದ್ದತಿ ವಿರುದ್ದದ ಹಲವು ನಿರ್ದಿಷ್ಟ ಪ್ರಕರಣಗಳಲ್ಲಿ ಹಗರಿ ಬೊಮ್ಮನಹಳ್ಳಿ ಮುಂತಾದ ಕಡೆಗಳಲ್ಲಿ ಮಧ್ಯ ಪ್ರವೇಶಿಸಿ ಯುವತಿಯರನ್ನು ದೇವದಾಸಿಯರನ್ನಾಗಿ ಮಾಡುವುದನ್ನು ಯಶಸ್ವಿಯಾಗಿ ತಡೆಯಲಾಗಿದೆ. ದೇವದಾಸಿ ಮಹಿಳೆಯ ಮದುವೆಗೆ ಹಾಗೂ ದೇವದಾಸಿಯಾಗಲಿದ್ದ ಯುವತಿಯ ಮದುವೆಗೆ ಬೆಂಬಲ ನೀಡಲಾಗಿದೆ. ದೇವದಾಸಿಯರ ವಿಮೋಚನೆಯ ನಿಟ್ಟಿನಲ್ಲಿ ಪಿಂಚಣಿ ಹೆಚ್ಚಳ, ಕೃಷಿ ಭೂಮಿ ಮಂಜೂರು, ಮನೆ ನಿವೇಶನ ಇತ್ಯಾದಿಗಳಿಗಾಗಿ ಹಲವು ಹಂತದ ಚಳುವಳಿ ನಡೆಸಲಾಗಿದೆ. ದಲಿತರು ಮತ್ತು ತಳ ಸಮುದಾಯಗಳಲ್ಲಿ ಶೋಷಣೆಯ ಕುರಿತು ಅರಿವು ಮೂಡುತ್ತಿರುವಂತೆ, ಜಾಗೃತಿ ಬೆಳೆದಂತೆ ಜಾತಿವಾದಿ

ಪುಟ 15 ಕ್ಕೆ




# ಸಮಗ್ರ ಅಭಿವೃದ್ಧಿಗಾಗಿ

# ಹಾಸನ ಜಿಲ್ಲಾ ಸಮ್ಮೇಳನ

**ಆರ್ಥಿಕ ಪರಿಸ್ಥಿತಿ :**

ರಾಜ್ಯದ ಆರ್ಥಿಕತೆಗೆ ರೂ. 6,240 ಕೋಟಿ(2008–09) ಕೊಡುಗೆ ನೀಡಿರುವ ಹಾಸನ ಜಿಲ್ಲೆಯ ಆರ್ಥಿಕತೆ ಹೆಚ್ಚಾಗಿ ಕೃಷಿಯನ್ನೇ ಅವಲಂಭಿಸಿದೆ. 4,63,500 ಎಕರೆ ಕೃಷಿ ಭೂಮಿ, ಶೇ.20ರಷ್ಟಕ್ಕೆ ಮಾತ್ರ ನೀರಾವರಿ ಇದೆ. ಕಾಫಿ, ಮಸಾಲೆ ಬೆಳೆಗಳು, ತೆಂಗು, ಆಲೂಗೆಡ್ಡೆ, ಭತ್ತ, ಕಬ್ಬು, ತಂಬಾಕು ಮತ್ತಿತರೆ ವಾಣಿಜ್ಯ ಬೆಳೆಗಳನ್ನು ಕೃಷಿ ಮಾಡುತ್ತಿದ್ದ ರೈತರು ಜೊತೆಗೆ ಈಗ ಶುಂಠಿ ಬೆಳೆಯಲಾರಂಭಿಸಿದ್ದಾರೆ. ರಾಗಿ, ಜೋಳ ಕೆಲವು ಪ್ರದೇಶಗಳಲ್ಲಿನ ತರಕಾರಿ ಬೆಳೆಯೂ ಆರ್ಥಿಕತೆಗೆ ಕೊಡುಗೆ ನೀಡುತ್ತಿದೆ. ತೆಂಗು ಮತ್ತು ಆಲೂಗೆಡ್ಡೆ ಬೆಳೆಗಳಿಗೆ ಹಲವು ವರ್ಷಗಳಿಂದ ಬಾಧಿಸುತ್ತಿರುವ ರೋಗಗಳನ್ನು ನಿಯಂತ್ರಣಕ್ಕೆ ತರಲಾಗಿಲ್ಲ. ಬೀಜ–ಗೊಬ್ಬರ ಮಾರುಕಟ್ಟೆ ಸಮಸ್ಯೆ ಬೇರೆ. ಇಳುವರಿ ಇಳಿದಿದೆ. ಮಧ್ಯವರ್ತಿಗಳ ಹಾವಳಿ. ರೈತರು ತೀವ್ರ ನಷ್ಟವನ್ನನುಭವಿಸುತ್ತಿದ್ದಾರೆ. ಇದು ಜಿಲ್ಲೆಯ ಆರ್ಥಿಕ ಪರಿಸ್ಥಿತಿಯ ಮೇಲೆ ತೀವ್ರ ಪರಿಣಾಮ ಬೀರುತ್ತಿದೆ. ಹೈನುಗಾರಿಕೆಯೂ ಕೂಡ ಪ್ರಮುಖ ಆರ್ಥಿಕ ಮೂಲವಾಗಿದೆ. ಇನ್ನುಳಿದಂತೆ ಜಲಾಶಯ ಮತ್ತು ದೊಡ್ಡ ಕೆರೆಗಳಿರುವ ಪ್ರದೇಶಗಳಲ್ಲಿ ಮೀನುಗಾರಿಕೆಯೂ ಸಹ ಪ್ರಮುಖ ವಾಣಿಜ್ಯ ವ್ಯವಹಾರವಾಗಿದೆ. ಮಲೆನಾಡು ಪ್ರದೇಶದಲ್ಲಿ ಕಾಫಿ, ಮಸಾಲೆ ಬೆಳೆಗಳು ಆರ್ಥಿಕತೆಯ ಬೆನ್ನೆಲುಬಾಗಿವೆ. ಹವಾಮಾನ ವೈಪರಿತ್ಯ ಮತ್ತು ಮುಕ್ತ ಮಾರುಕಟ್ಟೆಯ ಏರಿಳಿತಗಳು ಜಿಲ್ಲೆಯ ಆರ್ಥಿಕ ಪರಿಸ್ಥಿತಿಗೆ ಪ್ರತೀಕೂಲ ಪರಿಣಾಮವನ್ನುಂಟು ಮಾಡುತ್ತಿವೆ. ಮಲೆನಾಡು ಮತ್ತು ಅರೆ ಮಲೆನಾಡು ಪ್ರದೇಶಗಳಲ್ಲಿ ಕಾಡು ಪ್ರಾಣಿ ಮತ್ತು ಮನುಷ್ಯರ ನಡುವೆ ಸಂಘರ್ಷ ಏರ್ಪಟ್ಟು ಅಪಾರ ಬೆಳೆಹಾನಿ ಮತ್ತು ಪ್ರಾಣ ಹಾನಿಗೆ ಕಾರಣವಾಗಿದೆ. ಬಯಲು ಪ್ರದೇಶದ ರೈತರು ನೀರಾವರಿ ಸೌಲಭ್ಯವಿಲ್ಲದೆ ತೀವ್ರ ಸಂಘರ್ಷಕ್ಕಿಳಿದಿದ್ದಾರೆ. ರಿಯಲ್ ಎಸ್ಟೇಟ್, ಕಲ್ಲು ಮತ್ತು ಮರಳು ಗಣಿಗಾರಿಕೆ, ಅರಣ್ಯ ಸಂಪನ್ಮೂಲಗಳ ವ್ಯಾಪಾರಗಳು ನಡೆಯುತ್ತಿದ್ದು, ಇವುಗಳಿಗೆ ಮಾಫಿಯಾ ಸಂಪರ್ಕವೂ ಇದೆ.

ಅಸಂಘಟಿತ ವಲಯದಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ತಮ್ಮ ಬದುಕಿಗೆ ದಾರಿ ಕಂಡುಕೊಳ್ಳಬೇಕಾದ ಅನಿವಾರ್ಯತೆಯಲ್ಲಿ ಬಹಳಷ್ಟು ಜನರಿದ್ದಾರೆ. 2008–09ರಲ್ಲಿ ಜಿಲ್ಲೆಯ ಒಟ್ಟು ಜಿಲ್ಲಾದಾಯ(ಲಕ್ಷಗಳಲ್ಲಿ) 6,34,668 ಆಗಿದ್ದರೆ, ತಲಾದಾಯ 33,632 ಆಗಿದೆ.



ಜಿಲ್ಲೆಯಲ್ಲಿ ಅಕ್ರಮ ಲೇವಾದೇವಿ ವ್ಯಾಪಕವಾಗಿದ್ದು, ರೈತರು, ಕೂಲಿಕಾರರು ಮತ್ತು ಕಾರ್ಮಿಕರು ಇದರ ಬಲಿಪಶುಗಳಾಗಿದ್ದಾರೆ.

**ಭೂಮಿಯ ಪ್ರಶ್ನೆ :**

ಹಾಸನ ಜಿಲ್ಲೆಯ ಕೃಷಿ ಭೂಮಿಯ ಒಡೆತನ ಹೆಚ್ಚಿನ ಸಂಖ್ಯೆಯಲ್ಲಿ ಮೇಲ್ಜಾತಿಗಳ ಹಿಡಿತದಲ್ಲಿದ್ದು, ಭೂ ರಹಿತರು ಹೆಚ್ಚಿದ್ದಾರೆ. ಅದರಲ್ಲೂ ದಲಿತರ ಕೈಯಲ್ಲಿ ಕಡಿಮೆ ಪ್ರಮಾಣದ ಭೂಮಿ ಇದೆ. ಶೇ.66ರಷ್ಟು ಅತಿ ಸಣ್ಣ ಹಿಡುವಳಿದಾರರ ಕೈಯಲ್ಲಿ 1,46,209 ಎಕರೆ ಭೂಮಿ ಇದ್ದು, ಇದರಲ್ಲಿ 20,393 ಎಕರೆ ಹಾಗೂ ಶೇ.23ರಷ್ಟು ಸಣ್ಣ ಹಿಡುವಳಿದಾರರ ಕೈಯಲ್ಲಿ 1,40,715 ಎಕರೆ ಭೂಮಿ ಇದ್ದು, ಇದರಲ್ಲಿ 20,056 ಎಕರೆ ಮಾತ್ರ ದಲಿತರ ಕೈಯಲ್ಲಿದೆ. ಶೇ.9ರಷ್ಟು ಅರೆ ಮಧ್ಯಮ ಹಿಡುವಳಿದಾರರ ಕೈಯಲ್ಲಿ 96,712 ಎಕರೆ ಭೂಮಿ ಇದ್ದು, ಇದರಲ್ಲಿ 7,719 ಎಕರೆ ಮಾತ್ರ ದಲಿತರ ಕೈಯಲ್ಲಿದೆ. ಶೇ.2ರಷ್ಟು ಮಧ್ಯಮ ಹಿಡುವಳಿದಾರರ ಕೈಯಲ್ಲಿ 53,812 ಎಕರೆ ಭೂಮಿ ಇದ್ದು, ಇದರಲ್ಲಿ 2,375 ಎಕರೆ, ಇನ್ನುಳಿದಂತೆ ಶೇ.0.28ರಷ್ಟು ಜನ ದೊಡ್ಡ ಹಿಡುವಳಿದಾರರ ಕೈಯಲ್ಲಿ 26,052 ಎಕರೆ ಭೂಮಿ ಇದ್ದು, ಇದರಲ್ಲಿ 404 ಎಕರೆ ಮಾತ್ರ ದಲಿತರ ಕೈಲ್ಲಿದೆ. ಇದರ ಜೊತೆಗೆ ನೂರಾರು ಮತ್ತು ಸಾವಿರಾರು ಎಕರೆ ಕಾಫಿ ಮತ್ತು ಟೀ ತೋಟಗಳ ಮಾಲೀಕರಿದ್ದಾರೆ ಮತ್ತು ಕಂಪನಿಗಳಿವೆ.

**ಕೃಷಿ ಕೂಲಿಕಾರರು ಮತ್ತು ರೈತರ ಪರಿಸ್ಥಿತಿ :**

ಬಗರ್‌ಹುಕುಂ ಸಾಗುವಳಿದಾರರು ಜಿಲ್ಲೆಯಲ್ಲಿ ವ್ಯಾಪಕವಾಗಿದ್ದು, ಇದೊಂದು ಪ್ರಮುಖ ಪ್ರಶ್ನೆಯಾಗಿದೆ. ಇತ್ತೀಚಿನ ವರ್ಷಗಳಲ್ಲಿ ರಿಯಲ್ ಎಸ್ಟೇಟ್ ವ್ಯವಹಾರ ತಲೆಯೆತ್ತಿದ್ದು, ಕೃಷಿ ಭೂಮಿ ಭೂಮಾಫಿಯಾ ಹಿಡಿತಕ್ಕೆ ಸಿಲುಕುತ್ತಿದೆ. ಭೂ ರಹಿತರು, ಸಣ್ಣ ಮತ್ತು ಅತಿ ಸಣ್ಣ ರೈತರ ಸಂಖ್ಯೆ ಅಧಿಕವಾಗಿದೆ. ಸ್ವಂತ ಒಡೆತನದ ಭೂಮಿಯಲ್ಲಿನ ಕೃಷಿ ಜೊತೆಗೆ ಮಧ್ಯಮ ಹಾಗೂ ದೊಡ್ಡ ರೈತರ ಭೂಮಿಗಳಲ್ಲಿ ಕೂಲಿಗೆ ಹೋಗಬೇಕಾದ ಪರಿಸ್ಥಿತಿಯಿದೆ. ಹವಾಮಾನ ವೈಪರೀತ್ಯ ಕಡಿಮೆ ಕೂಲಿ, ಇದೆಲ್ಲದರ ಪರಿಣಾಮ ಕೃಷಿ ಕೂಲಿಕಾರರ ಮೇಲೆ ಅತ್ಯಂತ ಕೆಟ್ಟ ಪರಿಣಾಮ ಬೀರಿದ್ದು, ನಗರ ಪ್ರದೇಶ, ಕಾಫಿ ತೋಟ ಮತ್ತು ಬೃಹತ್ ನಗರಗಳಿಗೆ ಕೆಲಸ ಹುಡುಕಿಕೊಂಡು ವಲಸೆ ಹೋಗುವವರ ಸಂಖ್ಯೆ ಹೆಚ್ಚುತ್ತಿದೆ. ನೀರಾವರಿ ಸೌಲಭ್ಯದ ಕೊರತೆ, ಮಳೆಯ ಕೊರತೆ ಇತ್ಯಾದಿ ಕಾರಣಗಳಿಂದ ಜಿಲ್ಲೆಯ ಬಹುದೊಡ್ಡ ರೈತ ಸಮುದಾಯ ಸಂಕಷ್ಟಕ್ಕೆ ಸಿಲುಕಿದೆ. 2012–13ರಲ್ಲಿ ಒಟ್ಟು 10 ರೈತರು ಆತ್ಮಹತ್ಯಾ ಪ್ರಕರಣಗಳು ವರದಿಯಾಗಿವೆ. 5 ಪ್ರಕರಣಗಳು ಅರಕಲಗೂಡು ತಾಲ್ಲೂಕಿನಲ್ಲಿ ನಡೆದಿವೆ. ಭೂಮಿಯ ಜೊತೆಗೆ ಸಮರ್ಪಕ ಮತ್ತು ಶಾಶ್ವತ ನೀರಾವರಿ, ವಿದ್ಯುತ್ ಕೊರತೆ ಕಾಡುತ್ತಿದೆ.

**ಕೈಗಾರಿಕೆ :**

ಸುಮಾರು 1400 ಎಕರೆ ವಿಸ್ತೀರ್ಣದ 4 ವಿಶೇಷ ಆರ್ಥಿಕ ವಲಯಗಳು, 9 ಕೈಗಾರಿಕಾ ಪ್ರದೇಶಗಳು ಹಾಗೂ 7 ಕೈಗಾರಿಕಾ ವಸಾಹತು ಪ್ರದೇಶಗಳಿವೆ. ಕೆಲವು ಗಾರ್ಮೆಂಟ್ಸ್‌ಗಳು ಹಾಗೂ ಗ್ರ್ಯಾನೈಟ್ ಕಾರ್ಖಾನೆಗಳನ್ನು ಬಿಟ್ಟು ಯಾವುದೇ ಪ್ರಮುಖ ಕೈಗಾರಿಕೆಗಳ ಸ್ಥಾಪನೆಯಾಗಿಲ್ಲ. ಕೃಷಿ ಮತ್ತು ಆಹಾರ ಸಂಸ್ಕರಣೆ, ಔಷಧ ತಯಾರಿಕೆ ಮತ್ತು ಐಟಿ ಉದ್ಯಮಕ್ಕೆ ವಿಫುಲ ಅವಕಾಶಗಳಿದ್ದರೂ ಆ ಕ್ಷೇತ್ರಗಳಲ್ಲಿ ಹೂಡಿಕೆ ಆಗಿಲ್ಲ. ಸಣ್ಣ–ಪುಟ್ಟ ಕಾರ್ಖಾನೆಗಳು, ವಾಣಿಜ್ಯ–ವಹಿವಾಟು ಕೇಂದ್ರಗಳು, ಹೋಟೆಲ್, ಆಟೋಮೊಬೈಲ್ ಇತ್ಯಾದಿ ಕಡೆಗಳಲ್ಲಿ ಕೆಲಸ ಹುಡುಕಿಕೊಳ್ಳುವ ಪರಿಸ್ಥಿತಿಯಿದೆ.

ಜಿಲ್ಲೆಯಾದ್ಯಂತ ಕೇವಲ 93 ಕೈಗಾರಿಕೆಗಳಿದ್ದು, ಒಟ್ಟು 12,660(ಪು–6254, ಮ–6406) ಜನರಿಗೆ ಮಾತ್ರ ಉದ್ಯೋಗ ಲಭ್ಯವಾಗಿದೆ. ಆಟೋಮೊಬೈಲ್, ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್, ಕೆಮಿಕಲ್ಸ್, ಆಹಾರ ಸಂಸ್ಕರಣೆ, ಗ್ಲಾಸ್ ಮತ್ತು ಸಿರಾಮಿಕ್ಸ್, ಜಾಬ್ ವರ್ಕ್ ಮತ್ತು ರಿಪೇರಿ, ಚರ್ಮ, ಮೆಕಾನಿಕಲ್ ಇಂಜಿನಿಯರಿಂಗ್, ಕಾಗದ ಮತ್ತು ಮುದ್ರಣ, ರಬ್ಬರ್ ಮತ್ತು ಪ್ಲಾಸ್ಟಿಕ್ ಟೆಕ್ಸ್‌ಟೈಲ್ಸ್, ಮರ ಮತ್ತಿತರೆ ರೀತಿಯ ನೋಂದಾಯಿಸಲ್ಪಟ್ಟ ಸಣ್ಣ ಪ್ರಮಾಣದ ಕೈಗಾರಿಕೆಗಳು ಜಿಲ್ಲೆಯಲ್ಲಿ ಒಟ್ಟು 737 ಸಣ್ಣ ಪ್ರಮಾಣದ ಕೈಗಾರಿಕೆಗಳಿದ್ದು, ಅದರಲ್ಲಿ ಒಟ್ಟು 2383(ಪು–1552, ಮ–831) ಕಾರ್ಮಿಕರು ದುಡಿಯುತ್ತಿದ್ದಾರೆ.

**ಕಾರ್ಮಿಕರ ಪರಿಸ್ಥಿತಿ :**

ಜಿಲ್ಲೆಯಲ್ಲಿ ದೊಡ್ಡ, ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳಲ್ಲಿ ದುಡಿಯುವ ಕಾರ್ಮಿಕರ ಸಂ–ಖ್ಯೆ ಒಟ್ಟು 15043 ಇದ್ದು ಇದರಲ್ಲಿ 7806 ಪುರುಷರು ಮತ್ತು 7237ಮಹಿಳೆಯರು ಉದ್ಯೋಗಿಗಳಾಗಿದ್ದಾರೆ. ಇವರಲ್ಲಿ ಬಹುತೇಕರಿಗೆ ಅಭದ್ರತೆ ಕಾಡುತ್ತಿದೆ. ಅತಿಯಾದ ಕೆಲಸದೊತ್ತಡ, ನಿಗದಿತ ನ್ಯಾಯಯುತ ವೇತನ, ಶಾಸನಬದ್ಧ ಸೌಲಭ್ಯಗಳಿಲ್ಲದೆ ದುಡಿಸಿಕೊಳ್ಳಲಾಗುತ್ತಿದೆ. ಜೊತೆಗೆ ಸಾಂದರ್ಭಿಕ, ಗುತ್ತಿಗೆ, ಹೊರಗುತ್ತಿಗೆ ಕೆಲಸಗಳಲ್ಲಿ ದುಡಿಸಿಕೊಳ್ಳಲಾಗುತ್ತಿದೆ. ಇದರ ಜೊತೆಗೆ ಅಂಗಡಿ, ಹೋಟೆಲ್, ವಾಣಿಜ್ಯ ಮಳಿಗೆಗಳಲ್ಲಿ ಹಾಗೂ ಸಾರಿಗೆ ಕ್ಷೇತ್ರದಲ್ಲಿ ಹೆಚ್ಚಿನ ಕಾರ್ಮಿಕರು ದುಡಿಯುತ್ತಿದ್ದಾರೆ. ಇನ್ನುಳಿದಂತೆ ಕಾಫಿ ಮತ್ತು ಟೀ ತೋಟಗಳಲ್ಲಿ ಅತಿ ಹೆಚ್ಚಿನ ಕಾರ್ಮಿಕರು ದುಡಿಯುತ್ತಿದ್ದಾರೆ. ಸರ್ಕಾರದ ಇಲಾಖೆ ಹಾಗೂ ಯೋಜನೆಗಳಲ್ಲಿ ಅರೆ, ಸಾಂದರ್ಭಿಕ, ಗುತ್ತಿಗೆ, ಗೌರವಧನ ಇತ್ಯಾದಿಗಳ ಆಧಾರದಲ್ಲಿ ದುಡಿಯುತ್ತಿದ್ದಾರೆ. 2011ರ ಜನಗಣತಿ ಆಧಾರದಲ್ಲಿ ಜಿಲ್ಲೆಯ ಒಟ್ಟು ಕಾರ್ಮಿಕರ ಸಂ–ಖ್ಯೆ 9,03,580 ಇದ್ದು ಇದರಲ್ಲಿ ಶೇ.33.27ರಷ್ಟು ಕಾರ್ಮಿಕರು ಕೃಷಿಯೇತರ ಕೆಲಸಗಳಲ್ಲಿ ಹಾಗೂ ಶೇ.22.05ರಷ್ಟು ಜನರು ಕೃಷಿ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಅಂಗನವಾಡಿ, ಗ್ರಾಮ ಪಂಚಾಯತ್ ಅಕ್ಷರದಾಸೋಹ, ಆಶಾ ಮತ್ತಿತರೆ ಕಡೆಗಳಲ್ಲಿ ಹಾಗೂ ಮುನಿಸಿಪಾಲಿಟಿ, ಆಸ್ಪತ್ರೆ, ಹೀಗೆ ಎಲ್ಲೆಡೆಯೂ ಕಾರ್ಮಿಕರು ದುಡಿಯುತ್ತಿದ್ದಾರೆ. ಹಾಗೂ ಅಸಂಘಟಿತ ವಲಯಗಳಲ್ಲಿ ಅತ್ಯಂತ ತೀವ್ರ ಶೋಷಣೆಗೆ ಒಳಗಾಗುತ್ತಿದ್ದಾರೆ.

**ಸಾಮಾಜಿಕ ಪರಿಸ್ಥಿತಿ :**

ಜಿಲ್ಲೆಯಲ್ಲಿ ಜಾತಿವಾದಿ ರಾಜಕಾರಣ ಪ್ರಬಲವಾಗಿದೆ. ಅಸ್ಪೃಶ್ಯತೆ ಜಾತಿ–ತಾರತಮ್ಯದ ಆಚರಣೆಗಳು ವ್ಯಾಪಕವಾಗಿವೆ. ಜಿಲ್ಲೆಯು ಒಂದು ಕಾಲಕ್ಕೆ ರಾಜ್ಯ ರೈತ ಸಂಘದ ನೇತೃತ್ವ ರೈತ ಚಳುವಳಿ ಹಾಗೂ ದಲಿತ ಚಳುವಳಿಗಳಿಗೆ ಸಾಕಷ್ಟು ಹೆಸರಾಗಿತ್ತು. ಆದರೆ ಈಗ ಆ ಸ್ಥಿತಿ ಇಲ್ಲ. ಇತ್ತೀಚಿನ ವರ್ಷಗಳಲ್ಲಿ ಪ್ರಾಂತ ರೈತ ಸಂಘದ ಚಟುವಟಿಕೆಗಳು ಜಿಲ್ಲೆಯಾದ್ಯಂತ ನಡೆಯುತ್ತಿವೆ. ಜಿ ಲ್ಲಿ ೦ು'ು ಲ್ಲಿ ಕಾರ್ಮಿಕರ ಚಳುವಳಿ ಹಲವು ವರ್ಷಗಳಿಂದ ನಡೆದಿದ್ದು, ಇತ್ತೀಚಿನ ವರ್ಷಗಳಲ್ಲಿ ವ್ಯಾಪಕತೆ ಪಡೆದುಕೊಳ್ಳುತ್ತಿದೆ. ಪರಿಸರ ಚಳುವಳಿಗಳೂ ಕ್ರಿಯಾಶೀಲವಾಗಿದ್ದು, ಪಶ್ಚಿಮಘಟ್ಟದ ವಿಷಯದಲ್ಲಿ ಚಳುವಳಿ–ಚರ್ಚೆಗಳು ನಿರಂತರವಾಗಿ ನಡೆಯುತ್ತಿವೆ. ಡಾ॥ ಕಸ್ತೂರಿ ರಂಗನ್ ವರದಿ ಜಾರಿಗೆ ವ್ಯಾಪಕ ವಿರೋಧವಿದೆ. ಮಲೆನಾಡಿನಿಂದ ಬಯಲುಸೀಮೆಗೆ ಶಾಶ್ವತ ನೀರಾವರಿ ಕಲ್ಪಿಸುವ ನಿಟ್ಟಿನಲ್ಲಿ ಡಾ॥ ಪರಮಶಿವಯ್ಯ ವರದಿ ಜಾರಿ ಕುರಿತು ಈ ಪ್ರದೇಶದ ಪರಿಸರವಾದಿಗಳಲ್ಲಿ ಸಾಕಷ್ಟು ವಿರೋಧವಿದೆ. ವಿಜ್ಞಾನ ಚಳುವಳಿಗೆ ಜಿಲ್ಲೆಯಲ್ಲಿ ತನ್ನದೇ ಆದ ಸ್ಥಾನವಿದೆ.

ಈಚಿನ ದಿನಗಳಲ್ಲಿ ಹಿಂದುತ್ವವಾದಿ ಸಂಘಟನೆಗಳು ಜಿಲ್ಲೆ ಮೇಲೆ ಗಮನ ಕೇಂದ್ರೀಕರಿಸಿವೆ. ಮುಸ್ಲಿಂ ಮೂಲಭೂತವಾದಿ ಸಂಘಟನೆಗಳು ಸಹ ಕೆಲ ಪ್ರದೇಶಗಳಲ್ಲಿ ಕ್ರಿಯಾಶೀಲವಾಗಿದ್ದು ತನ್ನ ಪ್ರಭಾವವನ್ನು ವಿಸ್ತರಿಸಲು ಪ್ರಯತ್ನಿಸುತ್ತಿವೆ. ಇತ್ತೀಚೆಗೆ ಸಾಹಿತ್ಯ–ಸಾಂಸ್ಕೃತಿಕ ವಲಯದಲ್ಲಿ ಕೆಲವು ಆಶಾದಾಯಕ ಬೆಳವಣಿಗೆಗಳನ್ನು ಕಾಣಬಹುದು. ಜೊತೆಯಲ್ಲಿ ನಾಡು–ನುಡಿ ಹೆಸರಿನ ಹುಸಿ ಕನ್ನಡ ಸಂಘಟನೆಗಳು ಹಲವು ಹುಟ್ಟಿಕೊಂಡಿವೆ.

ಅಲ್ಪಸಂಖ್ಯಾತ ಸಮುದಾಯ ಶಿಕ್ಷಣ, ಉದ್ಯೋಗ, ಮೂಲಭೂತ ನಾಗರೀಕ ಸೌಕರ್ಯಗಳ ಕೊರತೆಯಿಂದ ಬಳಲುತ್ತಿದೆ.

ಜನಾರೋಗ್ಯದ ಪರಿಸ್ಥಿತಿ ಭೀಕರವಾಗಿದ್ದು, ಜಿಲ್ಲೆಯಲ್ಲಿ ಖಾಸಗಿ ಆಸ್ಪತ್ರೆ ಹಾಗೂ ನರ್ಸಿಂಗ್ ಹೋಂಗಳ ಹಾವಳಿ ಜಾಸ್ತಿಯಾಗಿದೆ. ದಿನದಿಂದ ದಿನಕ್ಕೆ ಸರ್ಕಾರಿ ಆಸ್ಪತ್ರೆಗಳ ಸೌಲಭ್ಯಗಳು ಕಡಿಮೆಯಾಗುತ್ತಿವೆ. ಜಿಲ್ಲೆಯ ಖಾಸಗಿ ಆಸ್ಪತ್ರೆ ನರ್ಸಿಂಗ್ ಹೋಂಗಳ ಲಾಭಿ ಸುತ್ತಮುತ್ತಲ ಕೆಲ ಜಿಲ್ಲೆಗಳಲ್ಲೂ ಹಬ್ಬಿದೆ. ಖಾಸಗಿ ಶಿಕ್ಷಣ ಸಂಸ್ಥೆಗಳ ಹಾವಳಿಯೂ ಹೆಚ್ಚಿದೆ. ಶಿಕ್ಷಣ ಹಕ್ಕು ಕಾಯ್ದೆಯ ಸಮರ್ಪಕ ಜಾರಿಗೆ ತಡೆಯುಂಟಾಗಿದೆ. ಅತ್ಯಂತ ದುಬಾರಿ ಶುಲ್ಕವಿರುವ ಶಿಕ್ಷಣ ಸಂಸ್ಥೆಗಳು ಜಿಲ್ಲೆಯಲ್ಲಿ ತಲೆಯೆತ್ತಿವೆ. 1ರಿಂದ 10ನೇ ತರಗತಿ ಒಳಗೆ 250761 ಮಕ್ಕಳಿದ್ದು 13669 ಶಿಕ್ಷಕರಿದ್ದಾರೆ. ಇದರಂತೆ 18 ಮಕ್ಕಳಿಗೆ ಒಬ್ಬರಂತೆ ಶಿಕ್ಷಕರಿದ್ದಾರೆ. ಅನುದಾನಿತ ಹಾಗೂ ಪದವಿ ಕಾಲೇಜುಗಳಲ್ಲಿ ದಾಖಲಾದ ವಿದ್ಯಾರ್ಥಿಗಳು 17145, ಒಟ್ಟು ಜನಸಂಖ್ಯೆ 1776421. ಅಂದರೆ ಒಂದು ಲಕ್ಷ ಜನ ಸಂಖ್ಯೆಗೆ ಕೇವಲ 965 ಜನ ಪದವಿಗೆ ದಾಖಲಾಗುತ್ತಿದ್ದಾರೆ.

ಜಿಲ್ಲೆಯಲ್ಲಿ 3,60,089 ಕುಟುಂಬಗಳಲ್ಲಿ ಶೇ. 32.83ರಷ್ಟು ಕುಟುಂಬಗಳಿಗೆ ಮಾತ್ರ ಸ್ವಂತ ಮನೆ ಇದೆ.

ವಸತಿ ಹಾಗೂ ನಿವೇಶನ ರಹಿತರ ಸಂಖ್ಯೆ ಅತಿ ಹೆಚ್ಚಿದ್ದು, ನಗರದ ಹಲವು ಬಡಾವಣೆಗಳಲ್ಲಿ

➡

➡ ವಾಸಿಸುವ ಜನರ ಮನೆಗಳಿಗೆ ಹಲವು ವರ್ಷಗಳಿಂದ ಹಕ್ಕು ಪತ್ರಗಳನ್ನೇ ಸ್ಥಳೀಯ ಆಡಳಿತ ಸಂಸ್ಥೆಗಳು ಒದಗಿಸಿಲ್ಲ. ಭೂ ಮಾಫಿಯಾ, ಮರಳು ಮಾಫಿಯಾ ಬಲವಾಗಿವೆ.

**ದಲಿತರ ಪರಿಸ್ಥಿತಿ :**

ದಲಿತರ ಮೇಲಿನ ದೌರ್ಜನ್ಯ–ದಬ್ಬಾಳಿಕೆ, ಅಸ್ಪೃಶ್ಯತೆ ಆಚರಣೆ, ಸಾಮಾಜಿಕ ಬಹಿಷ್ಕಾರದಂತಹ ಪ್ರಕರಣಗಳು ಜಿಲ್ಲೆಯಲ್ಲಿ ಹೆಚ್ಚಾಗುತ್ತಿವೆ. ಬಹುತೇಕ ಪ್ರಕರಣಗಳನ್ನು ಸ್ಥಳೀಯ ಪಟ್ಟಭದ್ರ ಹಿತಾಸಕ್ತಿಗಳ ಹಿಡಿತದ ರಾಜೀ ಪಂಚಾಯತಿ ಮೂಲಕ ಮುಚ್ಚಿಹಾಕಲಾಗುತ್ತಿದೆ.

ಜಿಲ್ಲೆಯ 2011ರ ಜನಗಣತಿಯ ಪ್ರಕಾರ ಜಿಲ್ಲೆಯಲ್ಲಿ ಶೇ.21.24ರಷ್ಟು ದಲಿತರಿದ್ದು, ಅವರಲ್ಲಿ ಪ.ಜಾ–ಶೇ.19.42 ಮತ್ತು ಪ.ಪಂ–ಶೇ.1.82. ವಿಶೇಷ ಘಟಕ ಯೋಜನೆಯಡಿ ದಲಿತರಿಗೆ ನಿಗದಿಯಾದ ಹಣ ಸಮರ್ಪಕವಾಗಿ ಬಳಕೆಯಾಗುತ್ತಿಲ್ಲ. ಭೂಮಿ ಹಾಗೂ ವಸತಿ ರಹಿತ ದಲಿತರ ಸಂಖ್ಯೆ ದೊಡ್ಡದಿದ್ದು, ಅವರು ವಾಸಿಸುವ ಪ್ರದೇಶಗಳು ಕನಿಷ್ಟ ನಾಗರಿಕ ಸೌಕರ್ಯಗಳಾದ ಕುಡಿಯುವ ನೀರು, ವಿದ್ಯುತ್, ಶೌಚಾಲಯ, ಸಾರ್ವಜನಿಕ ಸಾರಿಗೆ–ಸಂಪರ್ಕ, ಶಿಕ್ಷಣ–ಆರೋಗ್ಯದ ಸೌಲಭ್ಯಗಳಿಂದ ವಂಚಿತವಾಗಿವೆ. ಶೇ.22.25ರಷ್ಟು ದಲಿತರು ಇಂದಿಗೂ ಬೆಳಕಿಗಾಗಿ ಸೀಮೆಎಣ್ಣೆ ದೀಪಗಳನ್ನು ಅವಲಂಭಿಸಿದ್ದಾರೆ. ಬಹುತೇಕ ದಲಿತರು ಕೃಷಿ ಕೂಲಿಕಾರರಾಗಿದ್ದು, ಜೀವನ ಮಟ್ಟ ಅತೀ ಕೆಳಹಂತದಲ್ಲಿದೆ. ನಗರ ಪ್ರದೇಶಗಳಲ್ಲಿ ದಲಿತರು ಹೆಚ್ಚಾಗಿ ಸ್ಲಂಗಳಲ್ಲಿ ವಾಸ ಮಾಡುವ ಪರಿಸ್ಥಿತಿಯಿದೆ. ದಲಿತರಿಗೆ ಬಾಡಿಗೆ ಮನೆಗಳು ದೊರೆಯದ ಪರಿಸ್ಥಿತಿಯಿದೆ.

**ಅಲ್ಪಸಂಖ್ಯಾತರ ಪರಿಸ್ಥಿತಿ :**

ಮುಸಲ್ಮಾನರು–ಶೇ.6.08, ಕ್ರೈಸ್ತರು–ಶೇ.0.91, ಜೈನರು–ಶೇ.0.33, ಸಿಖ್ಖರು–ಶೇ.0.02, ಬೌದ್ಧರು–ಶೇ.12 ಮತ್ತು ಇತರೆ ಅಲ್ಪಸಂಖ್ಯಾತರು–ಶೇ.0.33 ಜಿಲ್ಲೆಯ ಅಲ್ಪಸಂಖ್ಯಾತ ಸಮುದಾಯ ಶಿಕ್ಷಣ, ಉದ್ಯೋಗ, ನಾಗರೀಕ ಸೌಕರ್ಯಗಳ ಕೊರತೆಯಿಂದ ಬಳಲುತ್ತಿದೆ. ಪ್ರಮುಖವಾಗಿ ಮುಸಲ್ಮಾನರು ನಗರ ಪ್ರದೇಶದ ಸ್ಲಂಗಳಲ್ಲಿ ಬದುಕುತ್ತಿದ್ದಾರೆ.

**ನಾಗರೀಕ ಸೌಕರ್ಯಗಳು :**

ಅಗತ್ಯ ನಾಗರೀಕ ಸೌಕರ್ಯಗಳ ವಿಷಯದಲ್ಲಿ ಜಿಲ್ಲೆ ಹಿಂದೆ ಬಿದ್ದಿದೆ. ಅಗತ್ಯ ರೈಲು, ಸಾರ್ವಜನಿಕ ಸಾರಿಗೆ, ವಿದ್ಯುತ್‍ಚ್ಛಕ್ತಿ, ಕುಡಿಯುವ ನೀರು, ಶೌಚಾಲಯ, ಬ್ಯಾಂಕಿಂಗ್, ವಿಮಾನ ನಿಲ್ದಾಣ ಇನ್ನಿತರೆ ಸೌಕರ್ಯಗಳ ಲಭ್ಯತೆಯಲ್ಲಿ ಸಾಕಷ್ಟು ಕೊರತೆಗಳಿವೆ. ಜಿಲ್ಲೆಯಲ್ಲಿ ಒಟ್ಟು 849 ಸಾರ್ವಜನಿಕ ಪಡಿತರ ಅಂಗಡಿಗಳಿದ್ದು, ಒಟ್ಟು 3,87,371 ಕುಟುಂಬಗಳಿಗೆ ಮಾತ್ರ ಬಿಪಿಎಲ್ ಕಾರ್ಡ್ ದೊರೆತಿದೆ. 4,41,635 ಕುಟುಂಬಗಳು ಎಪಿಎಲ್ ಕಾರ್ಡ್ ಹೊಂದಿವೆ.

**ಸಾರಿಗೆ ಮತ್ತು ಸಂಪರ್ಕ**

ಜಿಲ್ಲೆಯ ಜನರು ಸಾರಿಗೆಗಾಗಿ ಉತ್ತಮ ಹಾಗೂ ರಸ್ತೆಗಳಿಲ್ಲದೆ ಎಲ್ಲೆಡೆಯೂ ಸಾರ್ವಜನಿಕ ಸಾರಿಗೆಗಳಿಲ್ಲದೆ ಖಾಸಗಿ ಸಾರಿಗೆಯನ್ನೇ ಅವಲಂಭಿಸಿ ದುರ್ಗಮ ರಸ್ತೆಗಳಲ್ಲಿ ಸಂಚಾರ ಮಾಡಬೇಕಾದ ಅನಿವಾರ್ಯತೆಯಿದೆ. 242.970 ಕಿ.ಮೀ ಉದ್ದದ ರೈಲು ಮಾರ್ಗವನ್ನು ಜಿಲ್ಲೆಯು ಹೊಂದಿದ್ದು, ಜಿಲ್ಲೆಯ ಜನರ ಬಹುದಿನಗಳ ಬೇಡಿಕೆಯಾದ ಹಾಸನ–ಬೆಂಗಳೂರು ರೈಲುಮಾರ್ಗದ ಕಾಮಗಾರಿ ಇನ್ನೂ ಆರಂಭವಾಗಲೇ ಇಲ್ಲ. ಒಟ್ಟು 4116 ಕಿ.ಮೀ. ಉದ್ದದ ಸಾರ್ವಜನಿಕ ರಸ್ತೆಗಳಿದ್ದು, ಅವುಗಳಲ್ಲಿ ಬಹುತೇಕ ರಸ್ತೆಗಳು ತೀರಾ ಹದಗೆಟ್ಟಿದ್ದು ಕೆಲವೆಡೆ ರಸ್ತೆಗಳೇ ಇಲ್ಲವೆನ್ನುವಷ್ಟರ ಮಟ್ಟಿಗೆ ಹಾಳಾಗಿವೆ. ಗ್ರಾಮೀಣ ರಸ್ತೆಗಳು ಮತ್ತು ಇತರೆ ರಸ್ತೆಗಳು ಒಟ್ಟು 7650 ಕಿ.ಮೀ. ಇದ್ದು ತೀರಾ ಕೆಳಹಂತದಲ್ಲಿವೆ. ಕೇವಲ 106 ದೂರವಾಣಿ ವಿನಿಮಯ ಕೇಂದ್ರಗಳಿದ್ದು ಸಂಪರ್ಕಕ್ಕಾಗಿ ಜನರು ಖಾಸಗಿ ಕಂಪನಿಗಳ ಸಂಪರ್ಕ ಸಾಧನಗಳನ್ನು ಬಳಸಬೇಕಾಗಿದೆ.

**ಕುಡಿಯುವ ನೀರು**

ಶುದ್ಧ ಕುಡಿಯುವ ನೀರಿನ ಕೊರತೆ ಜಿಲ್ಲೆಯ ಸಾಮಾನ್ಯ ಸಮಸ್ಯೆಯಾಗಿದ್ದು, ಮಲೆನಾಡಿನ ಪ್ರದೇಶಗಳಲ್ಲಿಯೂ ಇದರ ಬಾಧೆ ತಪ್ಪಿಲ್ಲ. ಬಹುತೇಕ ಗ್ರಾಮಗಳಲ್ಲಿ ಶುದ್ಧ ಕುಡಿಯುವ ನೀರಿನ ಆಕರಗಳ ಕೊರತೆ ಇದೆ. ಸಂಪೂರ್ಣ ಅರಸೀಕೆರೆ ತಾಲ್ಲೂಕು ಸೇರಿದಂತೆ ಜಿಲ್ಲೆಯ ಕೆಲ ಪ್ರದೇಶಗಳಲ್ಲಿ ಫ್ಲೋರೈಡ್ ಪ್ರಮಾಣ ಹೆಚ್ಚಿದ್ದು



**ಕಾರ್ಯದರ್ಶಿ – ಧರ್ಮೇಶ್**

ಜನರು ಮಾರಕ ರೋಗಗಳಿಗೆ ತುತ್ತಾಗುತ್ತಿದ್ದಾರೆ. ಜಿಲ್ಲೆಯಾದ್ಯಂತ ಅಂತರ್ಜಲ ಪ್ರಮಾಣದಲ್ಲಿ ತೀವ್ರ ಕುಸಿತವುಂಟಾಗಿದೆ.

1 ರಿಂದ 10ನೇ ತರಗತಿ ಒಳಗೆ 250761 ಮಕ್ಕಳಿದ್ದು 13669 ಶಿಕ್ಷಕರಿದ್ದಾರೆ ಇದರಂತೆ 18 ಮಕ್ಕಳಿಗೆ ಒಬ್ಬರಂತೆ ಒಬ್ಬರು ಶಿಕ್ಷಕರಿದ್ದಾರೆ. ಅನುದಾನಿತ ಹಾಗೂ ಪದವಿ ಕಾಲೇಜುಗಳಲ್ಲಿ ದಾಖಲಾದ ವಿದ್ಯಾರ್ಥಿಗಳು 17145, ಒಟ್ಟು ಜನಸಂಖ್ಯೆ 1776421. ಅಂದರೆ ಒಂದು ಲಕ್ಷ ಜನ ಸಂಖ್ಯೆಗೆ ಕೇವಲ 965 ಜನ ಪದವಿಗೆ ದಾಖಲಾಗುತ್ತಿದ್ದಾರೆ.

**ಆರೋಗ್ಯ**

ಜನಾರೋಗ್ಯದ ಪರಿಸ್ಥಿತಿ ಭೀಕರವಾಗಿದ್ದು, ಜಿಲ್ಲೆಯಲ್ಲಿ ಖಾಸಗಿ ಆಸ್ಪತ್ರೆ ಹಾಗೂ ನರ್ಸಿಂಗ್ ಹೋಂಗಳ ಹಾವಳಿ ಜಾಸ್ತಿಯಾಗಿದೆ. ದಿನದಿಂದ ದಿನಕ್ಕೆ ಸರ್ಕಾರಿ ಆಸ್ಪತ್ರೆಗಳ ಸೌಲಭ್ಯಗಳ ಕಡಿಮೆಯಾಗುತ್ತಿದೆ. ಜಿಲ್ಲೆಯ ಖಾಸಗಿ ಆಸ್ಪತ್ರೆ ನರ್ಸಿಂಗ್ ಹೋಂಗಳ ಲಾಭಿ ಎಷ್ಟಿದೆ ಎಂದರೆ ಸುತ್ತಮುತ್ತಲ ಕೆಲ ಜಿಲ್ಲೆಗಳನ್ನೂ ನಿಯಂತ್ರಿಸುವಷ್ಟರ ಮಟ್ಟಿಗೆ ಬೆಳೆದಿದೆ. ಜಿಲ್ಲೆಯಲ್ಲಿ 1776421 ಜನಸಂಖ್ಯೆಗೆ ಒಟ್ಟು ಸರ್ಕಾರಿ ಮತ್ತು ಖಾಸಗಿ ಅಸ್ಪತ್ರೆಗಳು ಸೇರಿ 781 ಜನ ವೈದ್ಯರಿದ್ದಾರೆ. ಅಂದರೆ 10,000 ಜನರಿಗೆ 4 ವೈದ್ಯರ ಸೇವೆ ದೊರೆಯುತ್ತಿದೆ. ಒಟ್ಟು 4,579 ಹಾಸಿಗೆಗಳಿದ್ದು 10,000 ಜನಸಂಖ್ಯೆಗೆ 26 ಹಾಸಿಗೆಗಳು ಲಭ್ಯವಾಗುತ್ತವೆ. ಜಿಲ್ಲೆಯಲ್ಲಿ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು 135 ಇದ್ದು ಅದರಲ್ಲಿ 960 ಹಾಸಿಗೆಯಷ್ಟು ಸಾಮರ್ಥ್ಯವಿದೆ. 15 ಸಮುದಾಯ ಆರೋಗ್ಯ ಕೇಂದ್ರಗಳಿದ್ದು 450 ಹಾಸಿಗೆಯಷ್ಟು ಸಾಮರ್ಥ್ಯವಿದೆ. ಹಾಸನ ಜಿಲ್ಲೆಯಲ್ಲಿ 3 ರಕ್ತ ನಿಧಿ ಕೇಂದ್ರಗಳಿದ್ದು ಎಲ್ಲವೂ ಜಿಲ್ಲಾ ಕೇಂದ್ರದಲ್ಲೇ ಇವೆ. ಇದು ಜಿಲ್ಲೆಯ ಜನಾರೋಗ್ಯದ ನೈಜ ಪರಿಸ್ಥಿತಿಯಾಗಿದೆ.

ಇಂತಹ ಸ್ಥಿತಿಯಲ್ಲಿ ಸಿಪಿಐ(ಎಂ) ಪಕ್ಷವು ರೈತರು, ಕಾರ್ಮಿಕರು ಮುಂತಾದ ನೆಲೆಯಲ್ಲಿ ಶೋಷಿತ ಜನರನ್ನು ಸಂಘಟಿಸುತ್ತಾ ಅವರ ಬದುಕಿನ ಜ್ವಲಂತ ಪ್ರಶ್ನೆಗಳಿಗಾಗಿ, ಇವುಗಳ ಜೊತೆಗೆ ಅಸ್ಪೃಶ್ಯತೆ, ಜಾತಿ ತಾರತಮ್ಯ ಮಹಿಳೆಯರ ಮೇಲಿನ ದೌರ್ಜನ್ಯ, ಮೂಢ ನಂಬಿಕೆ ಮುಂತಾದ ಸಾಮಾಜಿಕ ಅನಿಷ್ಟಗಳ ವಿರುದ್ಧ, ಶಿಕ್ಷಣ–ಆರೋಗ್ಯದ ವ್ಯಾಪಾರೀಕರಣ ಮುಂತಾದ ಪಿಡುಗುಗಳ ವಿರುದ್ಧ, ಜನರಲ್ಲಿ ವೈಚಾರಿಕ, ವೈಜ್ಞಾನಿಕ ಮನೋಭಾವವನ್ನು ಹರಡಲು ಕೆಲಸ ಮಾಡುತ್ತಿದೆ.

ಕಳೆದ ಮೂರು ವರ್ಷಗಳಲ್ಲಿ ಈ ವಿಷಯಗಳಲ್ಲಿ ಆಗಿರುವ ಬೆಳವಣಿಗೆಗಳನ್ನು ಹಾಗೂ ಚಳುವಳಿ ಮುಂದೆ ಸಾಗಬೇಕಾದ ಹಾದಿಯ ಕುರಿತು ಸಮ್ಮೇಳನವು ಚರ್ಚಿಸಿತು.

**ಸಿಪಿಐ(ಎಂ) ಸಮ್ಮೇಳನ ಉದ್ಘಾಟನೆ**

ಜಾತಿ ಧರ್ಮ ಹಾಗೂ ಭಾಷೆಯ ಆ ಧಾರದ ಮೇಲೆ ದೇಶವನ್ನು ಒಡೆಯುತ್ತಿರುವ ಮತ್ತು ಸಂವಿಧಾನ ಹಾಗು ಪ್ರಜಾಪ್ರಭುತ್ವ ಶಕ್ತಿಯನ್ನು ತಿರುಚುವಂತಹ ದುಷ್ಟ ಶಕ್ತಿಗಳ ವಿರುದ್ಧ ಎಚ್ಚೆತ್ತುಕೊಳ್ಳಬೇಕು ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯೆ ಎಸ್.ವರಲಕ್ಷ್ಮಿ ಕರೆ ನೀಡಿದರು. ಜಿಲ್ಲೆಯ ಸಮಗ್ರ ಅಭಿವೃದ್ಧಿಗಾಗಿ ಆಗ್ರಹಿಸಿ ಸಿಪಿಐ(ಎಂ)ನ ಎರಡು ದಿನಗಳ 9ನೇ ಹಾಸನ ಜಿಲ್ಲಾ ಸಮ್ಮೇಳನದ ಬಹಿರಂಗ ಸಭೆಯನ್ನು ಉಧ್ಘಾಟಿಸಿ ಅವರು ಮಾತನಾಡಿದರು. ದೇಶದಲ್ಲಿ ಬಿಜೆಪಿಯನ್ನು ಬೆಂಬಲಿಸಿದರೆ ಐಕ್ಯತೆ ಹಾಗು ಸಮಾನತೆ ಸಾಧ್ಯವಿಲ್ಲ, ಅತ್ಯಂತ ಅಪಾಯಕಾರಿ ನೀತಿಗಳು ಜಾರಿಯಾಗಲಿವೆ ಎಂದು ಅವರು ಎಚ್ಚರಿಸಿದರು. ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಚಳಿಗಾಲದ ಅಧಿವೇಶನದಲ್ಲಿ ಆರ್ಥಿಕವಾಗಿ ಬದಲಾವಣೆ ರೂಪಿಸುವ ಮೂಲಕ ನವ ವಸಾಹತುಶಾಹಿಗಳ ಕೈಗೆ ದೇಶದ ಅರ್ಥವ್ಯವಸ್ಥೆಯನ್ನು ನೀಡುವ ಪ್ರಯತ್ನ ನಡೆಯುತ್ತಿದೆ. ವಿಮಾ ಕ್ಷೇತ್ರದಲ್ಲಿ ವಿದೇಶಿ ಬಂಡವಾಳ ಹೂಡಿಕೆಯ ಮಿತಿಯನ್ನು ಹೆಚ್ಚಳ ಮಾಡುವ ಮಸೂದೆ ಸೇರಿದಂತೆ ಜನವಿರೋಧಿ ಹಾಗೂ ಕಾರ್ಮಿಕ ವಿರೋಧಿ ಕಾಯ್ದೆಗಳ ಜಾರಿಗೆ ಸರ್ಕಾರ ಮುಂದಾಗುತ್ತಿದೆ ಎಂದು ಟೀಕಿಸಿದರು. ಪೆಟ್ರೋಲ್ ಡಿಸೆಲ್‌ಗಳ ಮೇಲಿನ ನಿಯಂತ್ರಣವನ್ನು ತೆಗೆಯಲಾಗಿದೆ. ಮೋದಿ ಇವುಗಳ ಬೆಲೆಗಳನ್ನು ಇಳಿಕೆ ಮಾಡಿದರು ಎನ್ನಲಾಗುತ್ತಿದೆ. ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲ ಬೆಲೆ ಇಳಿಕೆಯಾಗಿರುವುದರಿಂದ ಭಾರತದಲ್ಲಿ ದರ ಕಡಿಮೆಯಾಗಲು ಕಾರಣವಾಗಿದೆ ಎಂದರು.



**ಹಿರಿಯ ಸಂಗಾತಿಗಳಿಗೆ ಗೌರವ : ಎ.ಕೆ.ವಿಶ್ವನಾಥ್, ರಾಘುಶೆಟ್ಟಿ, ಕೆ.ಸುಕುಮಾರ್, ವಿ.ಸುಕುಮಾರ್**

ದೇಶದ 40 ಕೋಟಿ ಕಾರ್ಮಿಕರಿಗೆ ಮಾಸಿಕ 10 ಸಾವಿರ ರೂ ಕನಿಷ್ಟ ವೇತನ ನಿಗದಿಪಡಿಸುವ ಕಾರ್ಮಿಕ ಕಾನೂನು ಜಾರಿಗೊಳಿಸಿದ್ದರೆ ಮೋದಿಯವರನ್ನು ಪ್ರಧಾನ ಜನ ಸೇವಕ ಎಂದು ಒಪ್ಪಿಕೊಳ್ಳಬಹುದಿತ್ತು. ಬಿಸಿಯೂಟ, ಅಂಗನವಾಡಿಗಳಿಗೆ ಆಹಾರ ಪೂರೈಕೆಗೆ ಸಂಬಂಧಿಸಿದಂತೆ ಖಾಸಗೀಕರಣ ಮಾಡಲು ಹೊರಟಿದ್ದಾರೆ ಎಂದರು.

ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯರಾದ ಮೀನಾಕ್ಷಿ ಸುಂದರಂ ಮಾತನಾಡಿ ಹಿಂದೆ ಕಾಂಗ್ರೆಸ್‌ನವರು ಮಾಡಿರುವ ಕೆಲಸವನ್ನೇ ಇಂದು ಬಿಜೆಪಿಯವರು ಮಾಡುತ್ತಿದ್ದಾರೆ. ಕಾನೂನುಗಳನ್ನು ತಿದ್ದುಪಡಿ ಮಾಡಿ ಕಾಂಗ್ರೆಸ್‌ನ ಕೆಲಸ ಕಾರ್ಯಗಳನ್ನು ಬಿಜೆಪಿಯವರು ನಕಲು ಮಾಡುತ್ತಿದ್ದಾರೆ. ಕಾಂಗ್ರೆಸ್ ಬೇರೆಯಲ್ಲ. ಬಿಜೆಪಿ ಬೇರೆಯಲ್ಲ ಇಬ್ಬರು ರೈತ ಕಾರ್ಮಿಕ ವಿರೋಧಿ ನೀತಿಯನ್ನು ಅನುಸರಿಸುತ್ತಿದ್ದಾರೆ. ಎಲ್ಲಾ ಬಂಡವಾಳಶಾಹಿಪರವಾದ ರಾಜಕೀಯ ಪಕ್ಷಗಳು ದುಡಿಯುವ ಜನತೆಯನ್ನು ಹತ್ತಿಕ್ಕುವ ಕೆಲಸ ಮಾಡುತ್ತವೆ, ವಿವಿಧ ಇಲಾಖೆಗಳಲ್ಲಿ ಕನಿಷ್ಟ ವೇತನವಿಲ್ಲದೆ ದುಡಿಯುತ್ತಿರುವವರನ್ನು ಪ್ರೋತ್ಸಾಹಿಸುವ ಹಾಗು ಅವರಿಗೆ ಕನಿಷ್ಟವೇತನ ನಿಗದಿಯಂತಹ ಕೆಲಸವನ್ನು ಪಕ್ಷಗಳು ಮಾಡಿಲ್ಲ. ತಮ್ಮ ಸ್ವಾರ್ಥ ರಾಜಕಾರಣಕ್ಕಾಗಿ ಕಾರ್ಮಿಕರನ್ನು ಹಾಗೂ ಜನಸಾಮಾನ್ಯರನ್ನು ರಾಜಕೀಯ ಮುಖಂಡರು ಬಳಸಿಕೊಳ್ಳುತ್ತಿದ್ದಾರೆ ಎಂದರು.

**ಹಿರಿಯ ಸಂಗಾತಿಗಳಿಗೆ ಗೌರವ :**

ಸಿಪಿಐ(ಎಂ) ನ 50 ವರ್ಷದ ಸಂಭ್ರಮದ ಸಂದರ್ಭದಲ್ಲಿ ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಪಕ್ಷ ಮತ್ತು ದುಡಿಯುವ ವರ್ಗದ ಚಳುವಳಿಯನ್ನು ಕಟ್ಟಿ ಬೆಳೆಸಿದ ಹಿರಿಯ ಸಂಗಾತಿಗಳಾದ ಕಾಂ.ವಿ.ಸುಕುಮಾರ್, ಕಾಂ.ಎ.ಕೆ.ವಿಶ್ವನಾಥ್, ಕಾಂ.ರಾಘುಶೆಟ್ಟಿ ಮತ್ತು ಕಾಂ.ಕೆ.ಸುಕುಮಾರ್ ರವರನ್ನು ಸ್ಮಾನಿಸಿ ಗೌರವಿಸಲಾಯಿತು.

ಬಹಿರಂಗ ಸಭೆಗೂ ಮುನ್ನ ನಗರದ ಪ್ರಮುಖ ಬೀದಿಗಳಲ್ಲಿ ಕೆಂಪು ಸಮವಸ್ತ್ರಧಾರಿಗಳ ಆಕರ್ಷಕ ಮೆರವಣಿಗೆಯನ್ನು ನಡೆಸಲಾಯಿತು.

ಬಹಿರಂಗ ಸಭೆಯ ವೇದಿಕೆಯಲ್ಲಿ ಪಕ್ಷದ ಜಿಲ್ಲಾ ಮುಖಂಡರಾದ ಧರ್ಮೇಶ್, ಎಚ್.ಆರ್.ನವೀನ್‌ಕುಮಾರ್, ಜಿ.ಪಿ.ಸತ್ಯನಾರಾಯಣ, ಮಂಜಮ್ಮ ಇದ್ದರು. ನಂತರ ನಡೆದ ಪ್ರತಿನಿಧಿಗಳ ಅಧಿವೇಶನಕ್ಕೆ ಹಿರಿಯ ಸಂಗಾತಿ ಕಾಂ.ಎ.ಕೆ.ವಿಶ್ವನಾಥ್ ಧ್ವಜಾರೋಹಣ ಮಾಡುವ ಮೂಲಕ ಚಾಲನೆ ಕೊಟ್ಟರು.

**ನೂತನ ಜಿಲ್ಲಾ ಸಂಘಟನಾ ಸಮಿತಿ ಆಯ್ಕೆ :**

ಸಮ್ಮೇಳನದಲ್ಲಿ 13 ಜನರನ್ನೊಳಗೊಂಡ ನೂತನ ಜಿಲ್ಲಾ ಸಂಘಟನಾ ಸಮಿತಿಯನ್ನು ಆಯ್ಕೆ ಮಾಡಲಾಯಿತು. ಇದರ ಕಾರ್ಯದರ್ಶಿಯಾಗಿ ಧರ್ಮೇಶ್ ರವರು ಆಯ್ಕೆಯಾದರು. ಸದಸ್ಯರಾಗಿ: ವಿ. ಸುಕುಮಾರ್, ಜಿ.ಪಿ. ಸತ್ಯನಾರಾಯಣ, ಶ್ರೀಧರ್, ಎಚ್. ಆರ್. ನವೀನ್‌ಕುಮಾರ್, ಹರೀಶ್, ಮಂಜು, ಪೃಥ್ವಿ, ರಾಘವೇಂದ್ರ, ಮಂಜುನಾಥ್ ಕೆ.ಎಸ್. ಮಹಮದ್, ಎಂ.ಬಿ. ಪುಷ್ಪ, ಮತ್ತು ಟಿ. ರಮೇಶ್ ಇದ್ದಾರೆ.

**ಸಮಾರೋಪ ಸಮಾರಂಭ :**

ಜಾಗತಿಕವಾಗಿ ಕಮ್ಯೂನಿಸ್ಟ್ ಚಳುವಳಿಗಳನ್ನು ಹತ್ತಿಕ್ಕಲು ಎಲ್ಲಾ ಬಂಡವಾಳಶಾಹಿ ಶಕ್ತಿಗಳು ಒಂದಾಗಿ ಕೆಲಸ ಮಾಡುತ್ತಿರುವ ಇಂತಹ ಸಂದರ್ಭದಲ್ಲಿ ದೇಶದಲ್ಲಿ ಜನತಾ ಪ್ರಜಾಪ್ರಭುತ್ವ ಕ್ರಾಂತಿಗೆ ಪೂರಕವಾದ ವಾತಾವರಣವನ್ನು ನಿರ್ಮಾಣ ಮಾಡಬೇಕಾದ ಜವಾಬ್ದಾರಿ ಪ್ರತಿಯೊಬ್ಬ ಸಿಪಿಐ(ಎಂ) ಸದಸ್ಯನದು ಎಂದು ಮೀನಾಕ್ಷಿ ಸುಂದರಂ ಸಮಾರೋಪ ಸಮಾರಂಭದಲ್ಲಿ ಹೇಳಿದರು. ದೇಶದಲ್ಲಿ ಒಂದೆಡೆ ಎಡ ಸಾಹಸವಾದಗಳು ಮತ್ತೊಂದೆಡೆ ಬಲಪಂಥೀಯ ಪರಿಷ್ಕರಣಾ ವಾದಗಳು ಬೆಳೆಯುತ್ತಿರುವಾಗ ಜನತೆಯ ಪ್ರಶ್ನೆಗಳ ಆಧಾರದಲ್ಲಿ ಒಂದು ಪರ್ಯಾಯ ರಾಜಕೀಯ ಶಕ್ತಿಯಾಗಿ ಚಳುವಳಿಯನ್ನು ಬೆಳೆಸಬೇಕಿದೆ. ಹಾಸನದ ಜಿಲ್ಲಾ ಸಮ್ಮೇಳನ ತೆಗೆದುಕೊಂಡಿರುವ ನಿರ್ಣಯಗಳು ಇದೇ ನಿಟ್ಟಿನಲ್ಲಿವೆ ಎಂದು ಅವರು ಹೇಳಿದರು.

ಎಸ್. ವರಲಕ್ಷ್ಮಿ ಮತ್ತು ಜಿಲ್ಲಾ ಕಾರ್ಯದರ್ಶಿ ಸ್ಥಾನದಿಂದ ಬಿಡುಗಡೆಯಾದ ವಿ. ಸುಕುಮಾರ್ ರವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ■

# ದೆಹಲಿ : ಚರ್ಚ್ ಸುಟ್ಟು ಹಾಕಿದ್ದರ ವಿರುದ್ಧ ಪ್ರತಿಭಟನೆ



ಪೂರ್ವ ದಿಲ್ಲಿಯ ದಿಲ್ಶದ್ ಗಾರ್ಡನ್ ಪ್ರದೇಶದಲ್ಲಿ ಕೆಲವು ದಿನಗಳ ಹಿಂದೆ ಮತಾಂಧರು ಚರ್ಚೊಂದನ್ನು ಸುಟ್ಟುಹಾಕಿದ್ದನ್ನು ಪ್ರತಿಭಟಿಸಲು ಸಿಪಿಐ(ಎಂ) ದಿಲ್ಲಿ ರಾಜ್ಯ ಸಮಿತಿಯು ಆಯೋಜಿಸಿದ್ದ ಪ್ರತಿಭಟನಾ ರ‍್ಯಾಲಿಯಲ್ಲಿ ದಿಲ್ಲಿಯ ಎಲ್ಲ ಭಾಗಗಳಿಂದಲೂ ಬಂದ ಪಕ್ಷದ ನೂರಾರು ಮಂದಿ ಭಾಗವಹಿಸಿದರು. ಎಸ್‌ಎಫ್‌ಐ, ಡಿವೈಎಫ್‌ಐ ಮತ್ತು ಪಕ್ಷದ ಮುಖಂಡರು ಮಾತನಾಡಿ ಸಂಘ ಪರಿವಾರವು ಮತೀಯ ದ್ವೇಶವನ್ನು ಹರಡಲು ವಿಶೇಷ ಪ್ರಯತ್ನ ನಡೆಸುತ್ತಿದೆ. ಸುಮಾರು ಒಂದು ವರ್ಷದಿಂದ ಬಿಜೆಪಿಯು ಅಲ್ಪ ಸಂಖ್ಯಾತ ಧರ್ಮಿಯರನ್ನು ಗುರಿ ಮಾಡಿಕೊಂಡು ಅವರ ಮೇಲೆ ದಾಳಿ ಮಾಡಲು ತನ್ನ ಹಿಂಬಾಲಕರನ್ನು ಪ್ರಚೋದಿಸುತ್ತಿದೆ. ರಾಜಕೀಯ ಲಾಭಪಡೆಯುವ ಉದ್ದೇಶದಿಂದ ಇತ್ತೀಚೆಗೆ ತ್ರಿಲೋಕಪುರದಲ್ಲಿ, ಬವಾನದಲ್ಲಿ ಮತ್ತು ಈಗ ನಡೆದಿರುವ ಚರ್ಚ್‌ಮೇಲಿನ ದಾಳಿಯು ಅವರು ಧರ್ಮದ ಆ ಧಾರದ ಮೇಲೆ ಜನರನ್ನು ವಿಂಗಡಿಸಿ ಅವರನ್ನು ಹಿಂಸೆಗೆ ಗುರಿಪಡಿಸುವ ನೀಚ ಕೃತ್ಯದಲ್ಲಿ ತೊಡಗಿರುವುದು ದಿನೇ ದಿನೇ ಹೆಚ್ಚುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಕೋಮು ಸೌಹಾರ್ದತೆ ಕಾಪಾಡುವುದು ಮತ್ತು ಅಲ್ಪ ಸಂಖ್ಯಾತರಿಗೆ ರಕ್ಷಣೆ ದೊರೆಯುವಂತೆ ಮಾಡುವುದು ಅವಶ್ಯವಾಗಿದೆ ಎಂದರು. ದಾಳಿ ಪ್ರಕರಣಗಳನ್ನು ಖಂಡಿಸಿದ ಮುಖಂಡರು ಈ ಬಗ್ಗೆ ನ್ಯಾಯಾಂಗ ತನಿಖೆಯಾಗಬೇಕೆಂದು ಒತ್ತಾಯಿಸಿದರು.

**ಡಿಸೆಂಬರ್ 5ರಂದು ರಾಷ್ಟ್ರ ಮಟ್ಟದ ಪ್ರತಿಭಟನೆ ಆಚರಿಸಿದ ಕೇಂದ್ರ ಕಾರ್ಮಿಕ ಸಂಘಟನೆಗಳು**

ಕೇಂದ್ರ ಸರ್ಕಾರದ ಕಾರ್ಮಿಕ ನೀತಿಗಳನ್ನು ವಿರೋಧಿಸಿ, ದೇಶದ ಎಲ್ಲ ಕೇಂದ್ರ ಕಾರ್ಮಿಕ ಸಂಘಟನೆಗಳು 'ಕಾರ್ಮಿಕ ಸಂಘಟನೆಗಳ ಜಂಟಿ ವೇದಿಕೆ'ಯ ಆಶ್ರಯದಲ್ಲಿ ಡಿಸೆಂಬರ್ 5ರಂದು ಒಂದು ರಾಷ್ಟ್ರ ವ್ಯಾಪಿ ಪ್ರತಿಭಟನೆ ನಡೆಸಿವೆ. ರಾಜ್ಯದ ರಾಜಧಾನಿಗಳು ಮತ್ತು ಕೆಲವು ರಾಜ್ಯಗಳಲ್ಲಿ ಜಿಲ್ಲಾ ಕೇಂದ್ರಗಳಲ್ಲೂ ಪ್ರತಿಭಟನಾ ರ‍್ಯಾಲಿಗಳು ನಡೆದಿವೆ. ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕರು, ಸಾರ್ವಜನಿಕ



ಚರ್ಚ್ ಧಾಳಿ ಖಂಡಿಸಿ ದೆಹಲಿಯಲ್ಲಿ ಪ್ರತಿಭಟನೆ

ಮತ್ತು ಖಾಸಗಿ ವಲಯಗಳ ಕಾರ್ಮಿಕರು ಭಾರಿ ಸಂಖ್ಯೆಯಲ್ಲಿ ಈ ಪ್ರತಿಭಟನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

'ಶ್ರಮ ಏವ ಜಯತೆ' ಎಂಬ ಬಣ್ಣದ ಮಾತನಾಡುತ್ತಿರುವ ಮೋದಿ ಸರ್ಕಾರವು ಮಾಲಿಕರು ಮತ್ತು ವಿದೇಶಿ ಹೂಡಿಕೆದಾರರನ್ನು ಓಲೈಸಲು ಈ ವರೆಗೆ ಜಾರಿಯಲ್ಲಿದ್ದ ಕಾರ್ಮಿಕ ಕಾನೂನುಗಳಿಗೆ ಮಾಡುತ್ತಿರುವ ಕೆಲವು ತೀವ್ರ ಸ್ವರೂಪದ ಬದಲಾವಣೆಗಳು ಕಾರ್ಮಿಕರನ್ನು ಗುಲಾಮರನ್ನಾಗಿ ಮಾಡುತ್ತವೆ. ಈ ಬದಲಾವಣೆಗಳಿಂದಾಗಿ 80% ಕಾರ್ಮಿಕರು ತಮಗೆ ದೊರೆಯಬಹುದಾಗಿದ್ದ ಕಾರ್ಮಿಕ ಕಾನೂನುಗಳ ವ್ಯಾಪ್ತಿಯಿಂದ ಹೊರಗುಳಿಯುತ್ತಾರೆ. ಅವರಿಗೆ ಯಾವುದೇ ರಕ್ಷಣೆ ಇರುವುದಿಲ್ಲ. ಕಾರ್ಮಿಕರು ತಮಗೆ ಬೇಕಾದ ಸಂಘಟನೆಗೆ ಸೇರುವ ಸ್ವಾತಂತ್ರ್ಯವನ್ನು ಮಾಲಿಕರು ಮಾನ್ಯ ಮಾಡುತ್ತಿಲ್ಲ. ಇದಕ್ಕೆ ತಾಜಾ ಉದಾಹರಣೆ ಮಾರುತಿ ಸುಜುಕಿ ಕಂಪನಿಯ 147 ಉದ್ಯೋಗಿಗಳು ಎರಡೂವರೆ ವರ್ಷಗಳಿಗಿಂತಲೂ ಹೆಚ್ಚಿನ ಅವಧಿಯಿಂದ ಜಾಮೀನುಕೂಡ ಸಿಗದೆ ಜೈಲಿನಲ್ಲಿ ಕೊಳೆಯುತ್ತಿರುವುದು. ಅವರಿಗೆ ಜಾಮೀನು ಲಭಿಸಿದರೆ ಎಂಎನ್‌ಸಿಗಳು ಈ ದೇಶದಿಂದ ತಮ್ಮ ಬಂಡವಾಳ ಹಿಂತೆಗೆಯುತ್ತಾರೆ ಎನ್ನುವ ನೆಪ ಒಡ್ಡಲಾಗುತ್ತಿದೆ. ಪ್ರತಿಭಟನೆಗಳು ನಡೆಯುತ್ತಿರುವುದು ಈ ಹಿನ್ನೆಲೆಯಲ್ಲಿ.

ದಿಲ್ಲಿಯ ಜಂತರ್ ಮಂತರ್ ಬಳಿ ನಡೆದ ಕಾರ್ಮಿಕರ ಬೃಹತ್ ರ‍್ಯಾಲಿಯನ್ನು ಉದ್ದೇಶಿಸಿ ಎಲ್ಲ ಕೇಂದ್ರ ಕಾರ್ಮಿಕ ಸಂಘಟನೆಗಳ ಮುಖಂಡರು ಮಾತನಾಡಿದರು. ಅನೇಕ ಉದ್ದಿಮೆ, ಕೈಗಾರಿಕೆಗಳಲ್ಲಿ ನಡೆಯುತ್ತಿರುವ ಹೋರಾಟಗಳ ಬಗ್ಗೆ ಪ್ರಸ್ತಾಪಿಸಿದ ಮುಖಂಡರುಗಳು ಮುಂಬರುವ ದಿನಗಳಲ್ಲಿ ಭಾರಿ ದೊಡ್ಡ ಹೋರಾಟಗಳು ನಡೆಯುವ ಸುಳಿವು ನೀಡಿದರು. ದೇಶದ ಎಲ್ಲ ಪ್ರದೇಶ ಮತ್ತು ಕೈಗಾರಿಕೆಗಳಲ್ಲಿ ಕೆಲಸಮಾಡುವ ಕಾರ್ಮಿಕರಿಂದ ಪ್ರತಿಭಟನೆಗೆ ಒಳ್ಳೆಯ ಸ್ಪಂದನೆ ಸಿಕ್ಕಿದೆಯೆಂದು ತಿಳಿಸಿದರು.

ಭಾರತೀಯ ಮಜ್ದೂರ್ ಸಂಘ, ಐಎನ್‌ಟಿಯುಸಿ, ಎಐಟಿಯುಸಿ, ಹೆಚ್‌ಎಂಎಸ್, ಸಿಐಟಿಯು, ಎಐಯುಟಿಯುಸಿ, ಟಿಯುಸಿಸಿ, ಸೇವಾ, ಮತ್ತು ಇತರ ಹಲವು ಕಾರ್ಮಿಕ ಸಂಘಟನೆಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದವು.

**ತಡೆಗಟ್ಟೆಗಳು ಎಡ ಚಳುವಳಿಯನ್ನು ತಡೆಯಲಾರವು**

ಕೇಂದ್ರ ಸರ್ಕಾರದ ಜನ ವಿರೋಧಿ ನೀತಿಗಳು ಮತ್ತು ಕೋಮು ಚಟುವಟಿಕೆಗಳ ವಿರುದ್ಧ ಪಶ್ಚಿಮ ಬಂಗಾಳದ ಎಡ ಪಕ್ಷಗಳು ಡಿಸೆಂಬರ್ 11ರಂದು ಕೊಲ್ಕತಾದಲ್ಲಿ ಒಂದು ಬೃಹತ್ ರ‍್ಯಾಲಿಯನ್ನು ಆಯೋಜಿಸಿದ್ದವು. ನಿಗದಿತ ಸಮಯದಲ್ಲಿ ರ‍್ಯಾಲಿಯ ಸ್ಥಳಕ್ಕೆ ಜನರು ತಲುಪದಂತೆ ಪೋಲೀಸರು ತಡೆಗಟ್ಟೆಗಳನ್ನು ಹಾಕಿ ಅವರನ್ನು ತಡೆಯಲು ಯತ್ನಿಸಿದರು. ಅವರು ಅದಕ್ಕೆ ಸೊಪ್ಪು ಹಾಕದಿದ್ದಾಗ ಲಾಠಿ ಪ್ರಹಾರ ಮಾಡಿದರು. ಅನೇಕರು ಗಾಯಗೊಂಡು, ಇಬ್ಬರನ್ನು ಆಸ್ಪತ್ರೆಗೆ ಸೇರಿಸಲಾಗಿದೆ.

ರ‍್ಯಾಲಿಯನ್ನುದ್ದೇಶಿಸಿ ಮಾತನಾಡಿದ ಎಡರಂಗದ ಅಧ್ಯಕ್ಷ ಬಿಮಾನ್ ಬಸು ಅವರು ತೃಣಮೂಲ ಸರ್ಕಾರವು ನಾವು ಕೇಂದ್ರ ಸರ್ಕಾರದ ಜನ ವಿರೋಧಿ ನೀತಿಗಳ ವಿರುದ್ಧ ನಡೆಸುತ್ತಿರುವ ಈ ಪ್ರತಿಭಟನೆಯನ್ನು ಏಕೆ ಹತ್ತಿಕ್ಕುತ್ತಿದೆ? ಇಬ್ಬರ ನಡುವೆ ಏನಾದರೂ ಗುಪ್ತ ಅಜೆಂಡಾ ಇದೆಯೇ ಎಂದು ಪ್ರಶ್ನಿಸಿದರು. ಅಗತ್ಯ ವಸ್ತುಗಳ ಏರುತ್ತಿರುವ ಬೆಲೆಗಳು, ಉದ್ಯೋಗ ಖಾತ್ರಿ ಯೋಜನೆಯ ಸಬ್ಸಿಡಿಯ ಕಡಿತ, ವಿಮಾ ಕ್ಷೇತ್ರದಲ್ಲಿ ವಿದೇಶಿ ನೇರ ಬಂಡವಾಳದ ಹೂಡಿಕೆಯ ಮಿತಿಯಲ್ಲಿನ ಹೆಚ್ಚಳ, ಶಿಕ್ಷಣ ಕ್ಷೇತ್ರದಲ್ಲಿ ಆರ್‌ಎಸ್‌ಎಸ್‌ನ ಕೈವಾಡ, ಲವ್ ಜಿಹಾದ್ ಹೆಸರಿನಲ್ಲಿ ಅಲ್ಪ ಸಂಖ್ಯಾತ ಸಮುದಾಯದ ಮೇಲೆ ನಡೆಯುತ್ತಿರುವ ದಾಳಿ, ಲಿಂಗ ತಾರತಮ್ಯ, ಎಸ್‌ಸಿ ಎಸ್‌ಟಿಗಳು ಮತ್ತು ಹಿಂದುಳಿದ ವರ್ಗಗಳ ಶೋಷಣೆ, ಕೋಮುವಾದಿ ಚಟುವಟಿಕೆಗಳ ಹೆಚ್ಚಳ ಮತ್ತು ಕಪ್ಪು ಹಣ ವಾಪಸಾತಿಯಲ್ಲಿ ಆಗುತ್ತಿರುವ ವಿಳಂಬ ಇವುಗಳನ್ನು ವಿರೋಧಿಸಲು ನಾವು ಈ ಪ್ರತಿಭಟನೆ ನಡೆಸುತ್ತಿದ್ದೇವೆ ಎಂದರು. ಪೋಲಿಸರು ತಡೆಗಟ್ಟುಗಳನ್ನು ಹಾಕುವುದರಿಂದ ನಮ್ಮ ಪ್ರತಿಭಟನೆಗಳನ್ನು ಹತ್ತಿಕ್ಕಲಾಗದು. ನಾವು ತೃಣಮೂಲ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಜನ ವಿರೋಧಿ ನೀತಿಗಳ ವಿರುದ್ಧ ನಮ್ಮ ಹೋರಾಟಗಳನ್ನು ಮುಂದುವರಸುತ್ತೇವೆ ಎಂದು ಅವರು ಹೇಳಿದರು.ಈ ಪ್ರತಿಭಟನೆ ರಾಷ್ಟ್ರವ್ಯಾಪಿಯಾಗಿ ನಾನಾ ರಾಜ್ಯಗಳಲ್ಲಿ ನಡೆದಿದೆ.



## ಈ ವಾರ ......

ಪುಟ 3 ರಿಂದ

ಪ್ರಧಾನ ಪ್ರಶ್ನೆಯನ್ನಾಗಿಸಿ ಆಂದೋಲನಕ್ಕೆ ಚಾಲನೆ ಕೊಡಬಹುದಿತ್ತು. ಸಾಹಿತ್ಯ ಸಮ್ಮೇಳನಗಳಲ್ಲಿ ಜನರ ಪಾಲ್ಗೊಳ್ಳುವಿಕೆ ಅಗಾಧವಿದೆ. ಅವರ ಒಡಲಲ್ಲಿ ಕುತೂಹಲ, ಅರಿವಿನ ಹಸಿವು, ಸಾಂಸ್ಕೃತಿಕ ಅಸ್ತಿತ್ವದ ಅಂಶಗಳು ಇವೆ. ಈಗ ಒಬ್ಬ ವ್ಯಕ್ತಿಯಾಗಷ್ಟೇ (ದೇವನೂರು ಕೇವಲ ವ್ಯಕ್ತಿಯಲ್ಲ, ಒಂದು ಆಂದೋಲನದ ಪ್ರತಿನಿಧಿ ಎನ್ನುವಾಗಲೂ) ಮಾತನಾಡುವ ಬದಲಿಗೆ ಅಲ್ಲಿ ಜನ ಸಮೂಹವನ್ನು ಒಳಗೊಳಿಸಿ ಧ್ವನಿಸಬಹುದಿತ್ತು. ಆ ಬಳಿಕವೂ ರಾಜ್ಯದಾದ್ಯಂತ ಜನರನ್ನು ಸಂಘಟಿಸಲು ಸಮ್ಮೇಳನದ ಅಧ್ಯಕ್ಷರು ಎಂಬ ಅವರ 'ಹೊಸ ಪಾತ್ರ-ಪ್ರಭಾವವನ್ನು' ಬಳಸಿ ತೊಡಗಬಹುದು. ಕ.ಸಾ.ಪ. ಸಮ್ಮೇಳನದ ವೇದಿಕೆಯಲ್ಲಿ ಇದ-ಕ್ಕೆ ಸ್ವಲ್ಪವಾದರೂ ಇಂಬು ಕೊಡಬಹುದಾದ ವಾತಾವರಣವಿದೆ. ಕ.ಸಾ.ಪ.ದ ಕಾರ್ಯವಿಧಾನ ಇತ್ಯಾದಿಗಳ ಬಗ್ಗೆ ಕಟು ಟೀಕೆ ಇದೆಯಾದರೂ ಅದು ಈಗಲೂ ಸದಸ್ಯರನ್ನು ಹೊಂದಿದ ಚುನಾಯಿತ ಪ್ರಜಾಸತ್ತಾತ್ಮಕ ಸಂಸ್ಥೆ ಎಂಬುದನ್ನು ನಿರ್ಲಕ್ಷಿಸಲಾಗದು. ಈ ಸಂಸ್ಥೆಯು ಸಮ್ಮೇಳನಕ್ಕೆ ಸರಕಾರದ ಸಹಾಯ ಪಡೆಯುವಾಗಲೂ ಅದಕ್ಕೆ ತನ್ನದೇ ಸ್ವಾಯತ್ತತೆಯನ್ನೂ ಹೊಂದಿದೆ.

ಸರಕಾರದ ಅನುದಾನ (ಅದು ಜನರ ಹಣ) ಪಡೆಯುವಾಗಲೇ ಕ.ಸಾ.ಪ.ದಂತಹ ಸಂಸ್ಥೆ ಕೇವಲ ಸರಕಾರದ ಅನುದಾನದ ಹಂಗಿನಲ್ಲೇ ತನ್ನತನವನ್ನು ಕಳೆದುಕೊಳ್ಳುವುದನ್ನು, ಆಳುವವರ ಮರ್ಜಿಗೆ ಬಾಗುವುದನ್ನು ಖಂಡಿತಕ್ಕೂ ಒಪ್ಪಲಾಗುವುದಿಲ್ಲ. ತನ್ನ ಕಾಲ ಮೇಲೆ, ಜನರ ಸಹಾಯದೊಂದಿಗೆ ಸ್ವಾಭಿಮಾನಿಯಾಗಿ ನಿಲ್ಲಬೇಕು.

ಈಗಾಗಲೇ ಕನ್ನಡದ ಸಾಹಿತ್ಯ-ಸಾಂಸ್ಕೃತಿಕ ವಲಯದಲ್ಲಿ ಬಹು ದೊಡ್ಡ ಕಾರ್ಪೋರೇಟ್ ಸಂಸ್ಥೆಗಳು ಬಂಡವಾಳ ಹೂಡಿಕೆಯನ್ನು ನಡೆಸಿದ್ದು ಸಾಹಿತಿ, ಕಲಾವಿದರನ್ನು ಒಳಗೊಂಡು ಪೂರ್ತಿಯಾಗಿ ತಮ್ಮ ತೆಕ್ಕೆಗೆ ತೆಗೆದುಕೊಳ್ಳಲು ಶಕ್ತಿಯುತವಾಗಿ ನಿರಂತರ ಧಾಳಿ ಮಾಡುತ್ತಿರುವ ಸಂದರ್ಭವನ್ನು ನಿರ್ಲಕ್ಷಿಸಲಾಗದು. ಅದ-ಕ್ಕೆದುರಾಗಿ ಬಂಡಾಯ, ಸಮುದಾಯ, ಜನನುಡಿಯಂತಹವುಗಳ ಜೊತೆಗೆ ಕನ್ನಡ ಸಾಹಿತ್ಯ ಸಮ್ಮೇಳನದಂತಹ ಚಟುವಟಿಕೆಗಳು ಮಹತ್ವವನ್ನು ಪಡೆದಿವೆ. ಇವು ದುರ್ಬಲವಾಗುವುದು ಹಾನಿಯನ್ನು ತರುವುದು. ಆದ್ದರಿಂದಲೇ ಸಾಹಿತ್ಯ ಸಮ್ಮೇಳನಗಳನ್ನು ಅರ್ಥಪೂರ್ಣವನ್ನಾಗಿಸುವುದು ಆಗಬೇಕಾದ ಕೆಲಸ. ದೇವನೂರರು ಈ ಹೊಣೆಗಾರಿಕೆಯನ್ನು ಅರ್ಥ ಮಾಡಿಕೊಳ್ಳಬಲ್ಲರು.

ಅಂತೂ ಈಗ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ನಿರಾಕರಿಸುವ ಮೂಲಕ ದೇವನೂರರು ಒಂದು ನಿಲುವಿಗೆ ಬದ್ಧರಾಗಿರುವುದನ್ನು ಪ್ರಕಟಿಸಿದ್ದಾರೆ. ಸಾಹಿತ್ಯ ಸಮ್ಮೇಳನಕ್ಕೆ ಬೇರೊಬ್ಬ ಅಧ್ಯಕ್ಷರ ಆಯ್ಕೆ ಆಗುವುದರಲ್ಲಿ, ಸಮ್ಮೇಳನ ನಡೆಯುವುದರಲ್ಲಿ ಅನುಮಾನವಿಲ್ಲ. ಆದರೆ ಮಾತೃ ಭಾಷೆಯನ್ನು ಪ್ರಾಥಮಿಕ ಕಲಿಕೆಯ ಶಿಕ್ಷಣದ ಮಾಧ್ಯಮವನ್ನಾಗಿಸುವ ವೈಜ್ಞಾನಿಕವಾದ ಭಾಷಾ ನೀತಿ ಜಾರಿಗೊಳಿಸುವ, ಅದಕ್ಕೆ ಸಂವಿಧಾನದ ತಿದ್ದುಪಡಿ ತರಲು ಎಲ್ಲಾ ಹಂತಗಳಲ್ಲಿ ಪ್ರಬಲ ಆಂದೋಲನ ರೂಪಿಸುವ ಅಗತ್ಯವನ್ನು ಕನ್ನಡ ಸಾಹಿತ್ಯ ಸಮ್ಮೇಳನ ಹೇಗೆ ಕೈಗೆತ್ತಿಕೊಳ್ಳಲಿದೆ? ಇದಕ್ಕೆ ಚಾಲನೆ ನೀಡಬಹುದಾದ ಚಾಲಕರೇ ಪ್ರಸ್ತಾವನೆ ಬರೆದು ದೂರ ನಿಂತಿರುವಾಗ ಹೇಗೆಲ್ಲಾ ಚಾಲನೆ ಪಡೆದುಕೊಳ್ಳಬಹುದು? ಚಾಲನಾಕಾರರೂ ಒಳಗೊಂಡು ಎಲ್ಲರೂ ಚಿಂತಿಸಬೇಕಾದ ವಿಷಯ.

# ಬಡ ದಲಿತ ರೈತರ ಬಲವಂತದ ಒಕ್ಕಲೆಬ್ಬಿಸುವಿಕೆಗೆ ಕರ್ನಾಟಕ ಪ್ರಾಂತ ರೈತ ಸಂಘದ ಬಲವಾದ ಖಂಡನೆ



ಫಾರಂ ನಂ: 50 ಹಾಗೂ 53 ಹಾಕಿದ ಕೃಷಿ ಉದ್ದೇಶದಿಂದ ಸರ್ಕಾರಿ ಜಮೀನಿನಲ್ಲಿ ಸಾಗು ನಿರತ ಬಡ ಸಾಗು ದಾರರನ್ನು ಒಕ್ಕಲೆಬ್ಬಿಸುವುದಿಲ್ಲವೆಂದು ಕರ್ನಾಟಕ ಪ್ರಾಂತ ರೈತ ಸಂಘ ಜೊತೆ ಮಾತುಕತೆ ನಡೆಸಿದ ಮುಖ್ಯ ಮಂತ್ರಿಗಳು ಮಾತು ತಪ್ಪಿ ಭೂಗಳ್ಳತನದ ಹೆಸರಿನಲ್ಲಿ ಬಡವರನ್ನು ಒಕ್ಕಲೆಬ್ಬಿಸುವುದನ್ನು ಮುಂದುವರೆಸಿರುವುದನ್ನು ಕನಾಟಕ ಪ್ರಾಂತ ರೈತ ಸಂಘ ಬಲವಾಗಿ ಖಂಡಿಸಿದೆ. ಧಾರವಾಡ ಜಿಲ್ಲೆಯ ಕಲಗಟಗಿ, ಮೈಸೂರು ಜಿಲ್ಲೆಯ ಹೆಗ್ಗಡದೇವನ ಕೋಟೆ, ಬಿಜಾಪುರ ಜಿಲ್ಲೆಯ ಬಿಜಾಪುರ ಹಾಗೂ ಹಾಸನ ಜಿಲ್ಲೆಯ ಸಕಲೇಶಪುರ ತಾಲೂಕು ಮತ್ತು ತುಮುಕೂರು ಜಿಲ್ಲೆಯ ತಿಪಟೂರು ತಾಲೂಕಿನಲ್ಲಿ ಈ ಕೆಲಸವನ್ನು ತಹಸಿಲ್ದಾರರುಗಳು ಪೋಲೀಸ್ ಬಲ ಉಪಯೋಗಿಸಿ ಈ ಬಡವರ ಮೇಲೆ ದೌರ್ಜನ್ಯವನ್ನು ನಡೆಸಿದ್ದಾರೆ. ಕೂಡಲೇ ದೌರ್ಜನ್ಯವನ್ನು ನಿಲ್ಲಿಸಿ ಅವರಿಗೆ ಹಕ್ಕುಪತ್ರನೀಡಲು ಕ್ರಮವಹಿಸಬೇಕೆಂದು ಅದೇ ರೀತಿ, ಕೃಷಿ ಉದ್ದೇಶದಿಂದ 40– 50 ವರ್ಷಗಳಿಂದ ಸಾಗು ನಿತ 10 ಎಕರೆಕೆಳಗಿನ ಬಡ ಸಾಗುದರರು ಭೂಗಳ್ಳರಲ್ಲವೆಂದು ಭೂಕಬಳಿಕೆ ನಿಷೇಧಕಾಯ್ದೆಗೆ ಮತ್ತು ಇಂತಹವರಿಗೆ ಹಕ್ಕುಪತ್ರ ನೀಡಲು ಅಡ್ಡಿಯಾಗಿರುವ ಎಲ್ಲಾ ಸಂಭಂದಿಸಿದ ಕಾಯ್ದೆಗಳಿಗೆ ಕೂಡಲೆ ತಿದ್ದು ಪಡಿ ತರಬೇಕೆಂದು ಒತ್ತಾಯಿಸಿದೆ.

ಬಲವಂತದ ಒಕ್ಕಲೆಬ್ಬಿಸಿಕೆ ನಿಲ್ಲಿಸಲು ಭೂಮಿ ಉಳಿಸಿ ಕೊಳ್ಳಲು ದಲಿತ ರೈತ ಮಹಿಳೆ ಆತ್ಮಹತ್ಯೆಗೆ ಯತ್ನ: 40–50 ವರ್ಷಗಳಿಂದ ಹಾಸನ ಜಿಲ್ಲೆ ಸಕಲೇಶಪುರ ತಾಲ್ಲೂಕಿನ ಮಡ್ಡಿನಕೆರೆ, ಹೊಸಗದ್ದೆ ಗ್ರಾಮದಲ್ಲಿ ಸುಮಾರು 25 ಜನ ದಲಿತರು ತಲಾ ಒಂದು ಎಕ್ಕರೆಯಂತೆ ಸರ್ವೆ ನಂಬರ್ 48 ರಲ್ಲಿ ಭೂಮಿಯನ್ನು ಸಾಗುವಳಿ ಮಾಡಿಕೊಂಡು ಬರುತ್ತಿದ್ದಾರೆ. ಜೊತೆಗೆ ಹಲವು ವರ್ಷಗಳಿಂದ ಸರ್ಕಾರದ ಮುಂದೆ ಅರ್ಜಿ ನಮೂನೆ 53 ರನ್ನು ಸಲ್ಲಿಸಿ ಹೋರಾಟವನ್ನು ನಡೆಸಿಕೊಂಡು ಬಂದಿದ್ದಾರೆ. ಇವರಿಗೆ ಭೂಮಿಯನ್ನು ಮಂಜೂರು ಮಾಡಬೇಕಾದ ಸರ್ಕಾರ ಇವರನ್ನು ಭೂಮಿಯಿಂದ ಒಕ್ಕಲೆಬ್ಬಿಸಿ ಆ ಭೂಮಿಯನ್ನು ಜೀತ ವಿಮುಕ್ತಿರಿಗೆ ನೀಡಲು ಹೊರಟಿದೆ. ದಲಿತರಮೇಲೆ ದಲಿತರನ್ನು ಎತ್ತಿ ಕಟ್ಟುವ ಭೂಮಾಲಕರ ಕುತಂತ್ರದ ಭಾಗವಾಗಿ ಇದು ನಡೆದಿದೆ. ಇದರಿಂದ ಸಾಗುವಳಿ ಮಾಡುತ್ತಿರುವ ಈ ದಲಿತರು ಭೂಮಿಯನ್ನು ಕಳೆದುಕೊಂಡು ಜೀತ ಮಾಡುವ ಪರಿಸ್ಥಿತಿ ನಿರ್ಮಾಣಗೊಳ್ಳಲಿದೆ. ರಾಜ್ಯ ಸರ್ಕಾರ ದ ಇಂತಹ ರೈತ, ದಲಿತ ವಿರೋಧಿ ನಿಲುವನ್ನು ಕರ್ನಾಟಕ ಪ್ರಾಂತ ರೈತ ಸಂಘ ತೀವ್ರವಾಗಿ ಖಂಡಿಸುತ್ತದೆ.



ಇಂದು ಈ ಗ್ರಾಮಗಳಿಗೆ ತಹಸಿಲ್ದಾರ್ ನೇತೃತ್ವದಲ್ಲಿ ಪೋಲೀಸ್ ಪಡೆಯೊಂದಿಗೆ ಸ್ಥಳಕ್ಕೆ ದಾವಿಸಿ ಸಾಗುವಳಿದಾರರನ್ನು ಬಲವಂತವಾಗಿ ಒಕ್ಕಲೆಬ್ಬಿಸಲು ಪ್ರಯತ್ನಿಸಿದಾಗ ಆಕ್ರೋಶಗೊಂಡ ಸರೋಜಮ್ಮ ಎಂಬ ರೈತ ಮಹಿಳೆ ಸ್ಥಳದಲ್ಲೇ ವಿಷ ಸೇವಿಸಿದ್ದಾರೆ. ಇವರನ್ನು ಕೂಡಲೇ ಆಸ್ಪತ್ರೆಗೆ ದಾಖಲಿಸಲಾಗಿದೆ.

ಇಂತಹ ಘಟನೆ ನಡೆದರೂ, ಸಹ ತಹಸೀಲ್ದಾರ್ ನೇತೃತ್ವದ ತಂಡ ತೆರವುಗೊಳಿಸುವ ಕಾರ್ಯವನ್ನು ನಿಲ್ಲಿಸದೇ ಮುಂದುವರೆಸಿರುವುದು ಅತ್ಯಂತ ಹೇಯವಾಗಿದೆಮತ್ತು ಖಂಡನೀಯವಾಗಿದೆ. ಈ ಹಿಂದೆ ರೈತರು ಪ್ರತಿಭಟನೆ ನಡೆಸಿದಾಗ ಸ್ವತಹ ಮುಖ್ಯಮಂತ್ರಿಗಳೇ ಅರ್ಜಿ ನಮೂನೆ 50–53 ರನ್ನು ಸಲ್ಲಿಸಿರುವ 10 ಎಕರೆ ಒಳಪಟ್ಟಿರುವ ಯಾವುದೇ ರೈತರನ್ನು ಒಕ್ಕಲೆಬ್ಬಿಸುವುದಿಲ್ಲ ಎಂದು ಬರವಸೆ ನೀಡಿದ್ದರು, ಆದರೂ ಬಲವಂತವಾಗಿ ಒಕ್ಕಲೆಬ್ಬಿಸುವ ಕಾರ್ಯ ನಡೆಯುತ್ತಿರುವುದಕ್ಕೆ ಇದು ತಾಜಾ ಉದಾಹರಣೆ..

ರೈತ ವಿರೋಧಿಯಾಗಿರುವ ಬಗರ್‌ಹುಕುಂ ಸಾಗುವಳಿಯನ್ನು ತೆರವುಗೊಳಿಸುವ ಕಾರ್ಯವನ್ನು ಸರ್ಕಾರ ಕೂಡಲೇ ನಿಲ್ಲಿಸಬೇಕು ಮತ್ತು ರೈತ ಮಹಿಳೆ ವಿಷ ಸೇವಿಸಲು ರಾಜ್ಯ ಸರ್ಕಾರವೇ ನೇರ ಹೊಣೆ ಎಂದು ಆರೋಪಿಸಿ ತಾಲ್ಲೂಕು ಆಡಳಿತದ ವಿರುದ್ಧ ನಾಳೆ ಕರ್ನಾಟಕ ಪ್ರಾಂತ ರೈತ ಸಂಘ ಮತ್ತಿತರೆ ಎಲ್ಲಾ ಸಂಘಟನೆಗಳು ಸೇರಿ ಪ್ರತಿಭಟಿಸಲು ನಿರ್ಧರಿಸಿದ್ದು ಅದನ್ನು ಯಶಸ್ವಿಗೊಳಿಸಲು ರಾಜ್ಯ ಸಮಿತಿ ಕರೆ ನೀಡಿದೆ. ಅದೇ ರೀತಿ ಬಡವರ ಮೇಲಿನ ಈ ದಾಳಿಯನ್ನು ಎಲ್ಲಾ ರೈತ ಸಂಘದ ಘಟಕಗಳು ಮತ್ತು ಪ್ರಗತಿಪರರು ಖಂಡಿಸಿ ಹೋರಾಟವನ್ನು ಸಕಲೇಶ್‌ಪುರದಲ್ಲಿ ನಡೆಸಿದರು.

# 'ಸಮರ್ಪಕ ಮರಳು ಪೂರೈಕೆಗೆ ಆಗ್ರಹಿಸಿ ಕಟ್ಟಡ ನಿರ್ಮಾಣ ಕಾರ್ಮಿಕರ ಅನಿರ್ದಿಷ್ಟ ಧರಣಿ'

ಸಮರ್ಪಕ ಮರಳು ಪೂರೈಕೆ ಮಾಡುವಲ್ಲಿ ಜಿಲ್ಲಾ ಆಡಳಿತ ಸಂಪೂರ್ಣವಾಗಿ ವಿಫಲವಾಗಿದ್ದು, ಕಟ್ಟಡ ನಿರ್ಮಾಣಕ್ಕೆ ಮರಳು ಪೂರೈಸದಿದ್ದರೆ ಜಿಲ್ಲಾಡಳಿತವೇ ಕಟ್ಟಡ ಕಾರ್ಮಿಕರಿಗೆ ಕೆಲಸ ನೀಡಬೇಕೆಂದು ಕಟ್ಟಡ ಕಾರ್ಮಿಕರು ಆಗ್ರಹಿಸಿದ್ದಾರೆ.

ಸಮರ್ಪಕ ಮರಳು ಪೂರೈಕೆಗೆ ಆಗ್ರಹಿಸಿ ಹಾಗೂ ಮನೆ ನಿರ್ಮಿಸಿಕೊಳ್ಳುವವರ ಮತ್ತು ಕಟ್ಟಡ ಹಾಗೂ ಇತರೆ ನಿರ್ಮಾಣ ಕಾರ್ಮಿಕರ ಹಿತಕಾಯಲು ಒತ್ತಾಯಿಸಿ ಗದಗ ಜಿಲ್ಲೆ ರೋಣ ತಾಲ್ಲೂಕಿನ ಗಜೇಂದ್ರಗಢ ನಗರದಲ್ಲಿ ಕಟ್ಟಡ ಹಾಗೂ ಇತರೆ ನಿರ್ಮಾಣ ಕಾರ್ಮಿಕ ಸಂಘ (ಸಿಐಟಿಯು) ಹಾಗೂ ಶ್ರೀ ಸಿದ್ದರಾಮೇಶ್ವರ ಕಟ್ಟಡ ಮತ್ತು ಬಾರ್ ಬೆಂಡಿಂಗ್ ಕಾರ್ಮಿಕರ ಸಂಘ (ಎಐಟಿಯುಸಿ)ಗಳ ಜಂಟಿ ನೇತೃತ್ವದಲ್ಲಿ ಡಿಸೆಂಬರ್ 17 ರಂದು ರಾಜವಾಡೆ ಮೈದಾನದಿಂದ ಪ್ರತಿಭಟನಾ ರ್‍ಯಾಲಿ ನಡೆಯಿಸಿ ದುರ್ಗಾ ವೃತ್ತದಲ್ಲಿ ಮಾನವ ಸರಪಳಿ ರಚಿಸಿ ತಹಶೀಲ್ದಾರ ಕಛೇರಿ ಎದಿರು ಪ್ರತಿಭಟನಾ ಧರಣಿ ಆರಂಭಿಸಲಾಯಿತು.

ಈ ಸಂದರ್ಭದಲ್ಲಿ ಸಿಐಟಿಯು ಮುಖಂಡ ಮಾರುತಿ ಚಿಟಗಿ ಮಾತನಾಡಿ ಮರಳು ಪೂರೈಕೆಯಲ್ಲಿ ಆಗುತ್ತಿರುವ ವ್ಯತ್ಯಯದಿಂದ ಗಜೇಂದ್ರಗಡ ನಗರದಲ್ಲಿ ಇಂದು ಕಟ್ಟಡ ಕಾರ್ಮಿಕರು ಸೇರಿದಂತೆ ಮನೆ ನಿರ್ಮಿಸಿಕೊಳ್ಳುತ್ತಿರುವ ಮಾಲಿಕರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಕಟ್ಟಡ ಕಾರ್ಮಿಕರಿಗೆ ನಿರಂತರ ಕೆಲಸ ದೊರೆಯದೆ ತೀವ್ರ ಸಂಕಷ್ಟ ಅನುಭವಿಸುವಂತಾಗಿದೆ. ಮತ್ತೊಂದು ಕಡೆ ಮರಳಿನ ಅಸಮರ್ಪಕ ಪೂರೈಕೆಯಿಂದ ಮನೆ ನಿರ್ಮಾಣ ಕಾರ್ಯ ಸ್ಥಗಿತಗೊಂಡಿದೆ. ಇದರಿಂದ ಮನೆಯ ಮಾಲಿಕರಿಗೆ ದಿನದಿಂದ ದಿನಕ್ಕೆ ಸಿಮೆಂಟ್, ಕಬ್ಬಿಣ ಹಾಗೂ ಇಟ್ಟಿಗೆ ಸೇರಿದಂತೆ ನಿರ್ಮಾಣಕ್ಕೆ ಬೇಕಾದ ವಸ್ತುಗಳು ದುಬಾರಿಯಾಗುತ್ತಿವೆ ಎಂದು ತೀವ್ರ ಅಸಮಧಾನ ವ್ಯಕ್ತಪಡಿಸಿದರು.



ಎಐಟಿಯುಸಿ ಮುಖಂಡರಾದ ರೇಣಪ್ಪ ಇಂಗಳೆ ಮಾತನಾಡಿ ಈ ವರ್ಷದಲ್ಲಿ ಸಾಕಷ್ಟು ಮಳೆ ಸುರಿದು ಸುತ್ತಮುತ್ತಲಿನ ಹಳ್ಳಗಳು ತುಂಬಿ ಹರಿದು ಸಾಕಷ್ಟು ಮರಳು ಹಳ್ಳಗಳಲ್ಲಿ ಶೇಖರಣೆ ಆಗಿದ್ದರೂ ಕೂಡಾ ಮನೆ ನಿರ್ಮಾಣಕ್ಕೆ ಮಾತ್ರ ಮರಳು ದೊರೆಯುತ್ತಿಲ್ಲ. ಮರಳು ಬೇಕಾದರೆ ಕದ್ದುಮುಚ್ಚಿ ಒಂದು ಟ್ರ್ಯಾಕ್ಟರ್ ಮರಳಿಗೆ 3000/- ರೂಗಳನ್ನು ನೀಡಿ ಪಡೆಯಬೇಕಾದ ಸ್ಥಿತಿ ಬಂದಿದೆ. ಇಲ್ಲಿಯವರೆಗೂ ಜನಸಾಮಾನ್ಯರಿಗೆ ಟ್ರ್ಯಾಕ್ಟರ್ ಒಂದಕ್ಕೆ 300 ರಿಂದ 400 ರೂ.ಗಳಿಗೆ ದೊರೆಯುತ್ತಿದ್ದ ಮರಳು ಈಗ ದುಬಾರಿ ಹಣ ನೀಡಿದರು ದೊರೆಯುತ್ತಿಲ್ಲ ಏಕೆ? ಎಂದು ಅವರು ಜಿಲ್ಲಾಡಳಿತದ ವಿರುದ್ಧ ಹರಿಹಾಯ್ದರು.

ಸಿಪಿಐ(ಎಂ) ಪುರಸಭೆ ಸದಸ್ಯ ಎಂ.ಎಸ್.ಹಡಪದ ಹೋರಾಟ ಬೆಂಬಲಿಸಿ ಮಾತನಾಡಿ ಇಂದು ಕೃಷಿರಂಗ ತೀವ್ರ ಬಿಕ್ಕಟ್ಟಿಗೆ ಒಳಗಾಗಿರುವುದರಿಂದ ಕೃಷಿಕೂಲಿಕಾರರಿಗೆ ನಿರಂತರ ಕೆಲಸವಾಗಲಿ ಅಥವಾ ಕೈತುಂಬ ಸಂಬಳ ನೀಡುವ ಸ್ಥಿತಿ ರೈತನಿಗಿಲ್ಲ. ಆದ್ದರಿಂದ ಇಂದು ಕೃಷಿಕೂಲಿಕಾರರೆಲ್ಲರೂ ಕಟ್ಟಡ ಕಾರ್ಮಿಕರಾಗಿ ಪರಿವರ್ತನೆಗೊಂಡಿದ್ದಾರೆ. ಇಂದು ಕಟ್ಟಡ ನಿರ್ಮಾಣ ಕಾರ್ಯವು ಒಂದು ಉದ್ಯಮವಾಗಿ ಬೆಳೆದಿದೆ. ಪಾಯ ತೆಗೆಯುವ ಕಾರ್ಮಿಕರಿಂದ ಹಿಡಿದು, ಇಟ್ಟಿಗೆ ತಯಾರಿಸುವ, ಬಡಿಗ, ಪ್ಲಂಬಿಂಗ್, ಪೇಯಿಂಟಿಂಗ್, ಗ್ರಿಲ್ಲಿಂಗ್ ಮಾಡುವ ಕಾರ್ಮಿಕರಿಗೆ ಕೆಲಸ ನೀಡಿದ ವಲಯ ಇಂದು ಮರಳಿನ ಸಮರ್ಪಕ ಪೂರೈಕೆ ಇಲ್ಲದೆ ಕಾರ್ಮಿಕರಿಗೆ ಕೆಲಸವಿಲ್ಲದಂತಾಗಿದೆ. ಹಾಗೂ ನಗರದ ಮಾರುಕಟ್ಟೆಯಲ್ಲಿ ವ್ಯಾಪಾರ-ವಹಿವಾಟು ಕುಸಿದಿದೆ ಎಂದರು.

ಜಿಲ್ಲಾಡಳಿತ ನಗರಕ್ಕೆ ತಕ್ಷಣವೇ ಸಮರ್ಪಕ ಮರಳು ಪೂರೈಕೆಗೆ ಸಂಬಂಧಿಸಿ ತುರ್ತು ಕ್ರಮ ಕೈಗೊಳ್ಳಬೇಕು. ಸಾಮಾನ್ಯ ಜನರಿಗೂ ಕೈಗೆಟುಕುವ ದರದಲ್ಲಿ ಮರಳು ದರವನ್ನು ನಿಗದಿಗೊಳಿಸಬೇಕು. ಮುಂದಿನ ಮಳೆಗಾಲದ ಹೊತ್ತಿಗೆ ಮರಳು ಶೇಖರಣೆಗೆ ಸಂಬಂಧಿಸಿ ಮುಂಜಾಗ್ರತೆಯಾಗಿ ವೈಜ್ಞಾನಿಕ ಕ್ರಮಗಳನ್ನು ಅನುಸರಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನಾಕಾರರನ್ನು ಉದ್ದೇಶಿಸಿ ಶ್ರೀ ಸಿದ್ದರಾಮೇಶ್ವರ ಕಟ್ಟಡ ಮತ್ತು ಬಾರ್ ಬೆಂಡಿಂಗ್ ಕಾರ್ಮಿಕರ ಸಂಘದ ಎಲ್ಲಪ್ಪ ಬಂಕದ ಮತ್ತು ಡಿ.ವೈ.ಎಫ್.ಐ. ಮುಖಂಡ ಪೀರು ರಾಠೋಡ್ ಮಾತನಾಡಿದರು. ಪ್ರತಿಭಟನಾ ಧರಣಿಯಲ್ಲಿ ಯಲ್ಲಪ್ಪ ಕಲ್ಲುಡಿ, ಮಾಸುಮಲಿ ಹವಲ್ದಾರ, ಪರಶುರಾಮ ಕಲ್ಗುಡಿ, ಬಾಲು ರಾಠೋಡ, ಫಯಾಜ್ ತೋಟದ, ನಾಗಪ್ಪ ಯಲಬುಣಚಿ, ಮುತ್ತಣ್ಣ ರೇಣಿ, ಗುಂಡಣ್ಣ ಶಿಂಗ್ರಿ, ಷಣ್ಮುಕಪ್ಪ ನಿಡಗುಂದಿ, ನಭೀಸಾಬ ಹೊನ್ನಳ್ಳಿ, ಬಾಲು ಕುಂಬಾರ ವಕೀಲರು, ಎಂ.ಬಿ.ಸೋಂಪೂರ, ಮೈಬು ಹವಲ್ದಾರ, ಶ್ರೀಕಾಂತ ಗೋಸಾಯಿ, ಶಿವಾಜಿ ಕಲ್ಗುಡಿ, ನೇತೃತ್ವವಹಿಸಿದ್ದರು. ಪ್ರತಿಭಟನೆಗೆ ಸಾಯಿ ಪೇಂಟರ್ಸ್ ಅಸೋಶಿಯಷನ್, ಸ್ನೇಹಜೀವಿ ಪ್ಲಂಬರ್ಸ್ ವರ್ಕರ್ಸ್ ಯೂನಿಯನ್ ಮತ್ತು ಬಡಿಗೇರ ಅಭಿವೃದ್ಧಿ ಸಂಘಗಳು ಬೆಂಬಲ ವ್ಯಕ್ತಪಡಿಸಿ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಸ್ಥಳಕ್ಕೆ ಆಗಮಿಸಿ ಮನವಿಯನ್ನು ಸ್ವೀಕರಿಸಿದ ತಹಶಿಲ್ದಾರರು ಸಮಸ್ಯೆಯನ್ನು ಇತ್ಯರ್ಥಪಡಿಸಲು ಸಮಯಾವಕಾಶವನ್ನು ಕೋರಿದರು. ಆದರೆ ಕಾರ್ಮಿಕರು ತಮ್ಮ ಬೇಡಿಕೆ ಈಡೇರುವವರೆಗೂ ಹೋರಾಟವನ್ನುಮುಂದುವರೆಸಲು ನಿರ್ಧರಿಸಿದರು. 400 ಕ್ಕೂ ಹೆಚ್ಚು ಜನ ಭಾಗವಹಿಸಿರುವ ಧರಣಿ ಅಹೋರಾತ್ರಿ ಮುಂದುವರೆದಿದೆ.

## ಜಗದಗಲ

ಆರ್. ರಾಮಕೃಷ್ಣ

# ಪೇಶಾವರ: ಮುಗ್ಧ ಮಕ್ಕಳ ಮಾರಣ ಹೋಮ



ನಿಜಕ್ಕೂ ಮಾನವೀಯ ಮನಸ್ಸುಳ್ಳವರು ಮನುಷ್ಯರಾದವರು ಇದನ್ನು ಕಲ್ಪಿಸಿಕೊಳ್ಳುವುದು ಕಷ್ಟ. ಬಹುತೇಕ ಪುಟ್ಟ ಪುಟ್ಟ ಶಾಲಾ ಮಕ್ಕಳು ತುಂಬಿರುವ ಶಾಲೆಗೆ ನುಗ್ಗಿ ಆತ್ಮಹತ್ಯಾ ಬಾಂಬರ್‌ಗಳು ತಮ್ಮನು ತಾವೇ ಸ್ಫೋಟಿಸಿಕೊಳ್ಳುವುದು, ಮನಬಂದಂತೆ ಗುಂಡು ಹಾರಿಸಿ ನೂರಾರು ಮಕ್ಕಳನ್ನು ಕೊಂದು ಹಾಕುವುದು !!!

ಅಬ್ಬಬ್ಬ ಎಂತಹ ವಿಕೃತ ಮನಸ್ಸುಗಳು, ಎಂತಹ ಪೈಶಾಚಿಕ ವ್ಯವಸ್ಥೆ. ಪಾಕಿಸ್ತಾನದ ಪೇಷಾವರದಲ್ಲಿ ಡಿಸೆಂಬರ್ 17, 2014 ರಂದು ನಡೆದಿರುವ ಉಗ್ರ ಧಾಳಿಯನ್ನು ಯಾವ ಪದಗಳಲ್ಲಿ ವಿವರಿಸುವುದು ಎಂಬುದೇ ತೋಚದು.

132 ಅಮಾಯಕ ಮಕ್ಕಳು, ಒಟ್ಟಾರೆ 148 ಜನರು ಈ ಹೀನ ಧಾಳಿಯಲ್ಲಿ ಪ್ರಾಣಗಳನ್ನು ಕಳೆದುಕೊಂಡಿದ್ದಾರೆ.

ಅದೊಂದು ಸೈನಿಕ ಮಕ್ಕಳ ಶಾಲೆ. ಮಕ್ಕಳನ್ನು ಕೊಂದವರು ತಾಲಿಬಾನ್ ಉಗ್ರರು. ಜಗತ್ತಿನಾದ್ಯಂತ ಜನರ ಮನಸ್ಸುಗಳು ತಲ್ಲಣಗೊಂಡಿವೆ. ತಾಲಿಬಾನ್ ಉಗ್ರರು ಮಕ್ಕಳತ್ತ ಬಂದೂಕು ತಿರುಗಿಸಿರುವುದೇನು ಇದು ಮೊದಲಲ್ಲ. ಈ ಶಾಲೆಗಳು ಇಸ್ಲಾಂ ವಿರೋಧಿ ಮೌಲ್ಯಗಳನ್ನು ಹರಡುವ ಕೇಂದ್ರಗಳು ಎಂದು ಅವರು ಭಾವಿಸಿರುವುದೇ ಧಾಳಿಗೆ ಕಾರಣ ಎನ್ನಲಾಗಿದೆ. ಸಂಪ್ರದಾಯಬದ್ಧ ಬಿಗಿಹಿಡಿತದ ಸಮಾಜವನ್ನು ನಿರ್ಮಿಸಬೇಕು, ಸಮಾಜ ತಮ್ಮ ದೃಷ್ಟಿಕೋನದಂತೆ ತಮ್ಮ ಕಪಿಮುಷ್ಠಿಯಲ್ಲಿರಬೇಕು ಎಂಬ ಮುಸ್ಲಿಂ ಮೂಲಭೂತವಾದಿಗಳ ಉದ್ದೇಶವೇ ಈ ದಾಳಿಯ ಮೂಲ ಕಾರಣ.

ನೈಜೀರಿಯಾದಲ್ಲಿ ಬೋಕೋ ಹರಾಮ್ ಎಂಬ ಉಗ್ರಗಾಮಿ ಸಂಘಟನೆಯು ಇದೇ ರೀತಿ ಮಕ್ಕಳ ಮೇಲೆ ದಾಳಿ ಮಾಡುವುದು, ಅವರನ್ನು ಸುಡುವುದು, ಅಪಹರಣ ಮಾಡುವುದು, ವಿದ್ಯಾರ್ಥಿನಿಯರನ್ನು ಅಪಹರಿಸಿ ಅವರನ್ನು ಲೈಂಗಿಕ ಗುಲಾಮರನ್ನಾಗಿ ಬಳಸಿಕೊಳ್ಳುವುದು ಮತ್ತು ಅವರನ್ನು ಬಲಾತ್ಕಾರದಿಂದ ಮತಾಂತರ ಮಾಡುವುದು ಮುಂತಾದ ಹೀನಾಯ ದುಷ್ಕೃತ್ಯಗಳಲ್ಲಿ ತೊಡಗಿದೆ.


ಬೆಂಗಳೂರಿನಲ್ಲಿ ಪ್ರತಿಭಟನೆ

ಗುಂಡಿನ ದಾಳಿ ನಡೆದ ಸಭಾಂಗಣದಲ್ಲಿ ಹರಿದಿರುವ ಮುಗ್ಧ ಮಕ್ಕಳ ರಕ್ತ, ಗೋಡೆಗಳ ಮೇಲೆ ಉಂಟಾಗಿರುವ ತೂತುಗಳು ದಾಳಿಯ ತೀವ್ರತೆ ಸಾಕ್ಷಿಯಾಗಿವೆ.

ಭಾರತ ವಿದ್ಯಾರ್ಥಿ ಫೆಡರೇಷನ್, ಮಾರ್ಕ್ಸವಾದಿ ಕಮ್ಯೂನಿಸ್ಟ್ ಪಕ್ಷಗಳು ಈ ಜೀವ ಜೀವ ವಿರೋಧಿ ಧಾಳಿಯನ್ನು ತೀವ್ರವಾಗಿ ಖಂಡಿಸಿವೆ. ಎಸ್ಎಫ್ಐ ಸಂಘಟನೆಯು ಈ ಭಯೋತ್ಪಾಕ ದಾಳಿಯ ವಿರುದ್ದ ತೀವ್ರವಾದ ಪ್ರತಿಭಟನೆಗೆ ಕರೆ ನೀಡಿದೆ.

ಜಗತ್ತನ್ನು ತನ್ನ ಸುಲಿಗೆಕೋರ ದುಷ್ಟ ಉದ್ದೇಶಗಳಿಗೆ ತಕ್ಕಂತೆ ತಿರುಚಲು ಯತ್ನಿಸುತ್ತಿರುವ ಸಾಮ್ರಾಜಶಾಹಿಯೇ ಈ ತಾಲಿಬಾನಿನ್ ಮೂಲವಾಗಿದೆ.

ಧಾರ್ಮಿಕ ಮೂಲಭೂತವಾದ ಮತ್ತು ಸಾಮ್ರಾಜ್ಯಶಾಹಿಗಳು ಎಂತಹ ಮಾನವ ವಿರೋಧಿಗಳೆಂದು ಜಗತ್ತು ಸಾಧ್ಯವಾದಷ್ಟು ಬೇಗ ಅರಿಯಬೇಕಾಗಿದೆ. ●

---

# ತುಮಕೂರು: 'ಕಾರ್ಮಿಕರ ಬಗ್ಗೆ ಲಘುವಾಗಿ ಮಾತನಾಡುವ ಡಿ.ಕೆ. ಶಿವಕುಮಾರನ್ನು ಸಚಿವ ಸಂಪುಟದಿಂದ ಕೈಬಿಡಿ'

– ಸಿಐಟಿಯು ಆಗ್ರಹ


ಸಾಮಾಜಿಕ ನ್ಯಾಯದ ಬಗ್ಗೆ ತುಂಬಾ ಮಾತನಾಡುವ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಸಂವಿಧಾನದ ಆಶಯಗಳಿಗೆ ಪೂರಕವಾಗಿ ಕೆಲಸ ಮಾಡುತ್ತೇನೆ ಮತ್ತು ಸಂವಿಧಾನವನ್ನು ರಕ್ಷಣೆ ಮಾಡುತ್ತೇವೆ ಎಂದು ಪ್ರಮಾಣ ಮಾಡಿ ಅಧಿಕಾರದ ಗದ್ದುಗೆ ಏರಿರುವ ಡಿ.ಕೆ. ಶಿವಕುಮಾರ್ 'ಕಾರ್ಮಿಕರು ನನ್ನ ಬಳಿ ಬಂದರೆ ಅವರಿಗೆ ಉಗಿದು ಬುದ್ದಿ ಹೇಳುತ್ತೇನೆ.' ಎಂಬುದಾಗಿ ಮತ್ತು 'ರಾಜ್ಯದಲ್ಲಿ ಯಾವುದೇ ಕಾರ್ಮಿಕ ಸಂಘಟನೆಗಳನ್ನು ಬೆಳೆಸಲು ಬಿಡುವುದಿಲ್ಲ.' ಎಂದು ಹೇಳುವ ಮೂಲಕ ಈ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಗೆ ವಿರುದ್ದವಾಗಿ ವರ್ತಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಇಂಧನ ಸಚಿವ ಡಿ.ಕೆ. ಶಿವಕುಮಾರ್‌ರವರನ್ನು ಈ ಕೂಡಲೇ ಸಿದ್ದರಾಮಯ್ಯ ತಮ್ಮ ಸಂಪುಟದಿಂದ ಕೈಬಿಡಬೇಕು ಮತ್ತು ಸಿದ್ದರಾಮಯ್ಯನವರು ಈ ವಿಷಯದಲ್ಲಿ ಡಿ.ಕೆ. ಶಿವಕುಮಾರ್‌ರವರಿಗೆ ಬುದ್ದಿ ಹೇಳಬೇಕು ಎಂದು ಸಿಐಟಿಯು ಜಿಲ್ಲಾಧ್ಯಕ್ಷ ಸೈಯದ್‌ಮುಜೀಬ್ ಸರ್ಕಾರವನ್ನು ಆಗ್ರಹಿಸಿದರು.

ಅವರು ಸಿಐಟಿಯು ನೇತೃತ್ವದಲ್ಲಿ ಡಿಸೆಂಬರ್ 19, 2014ರಂದು ಕಾರ್ಮಿಕರ ಬಗ್ಗೆ ಲಘುಬವಾಗಿ ಮಾತನಾಡಿರುವ ಮತ್ತು ಸಂವಿಧಾನದ ಆಶಯಗಳಿಗೆ ವಿರುದ್ದವಾಗಿ ವರ್ತಿಸಿರುವ ಡಿ.ಕೆ.ಶಿವಕುಮಾರ್ ರವರನ್ನು ಸಂಪುಟದಿಂದ ಕೈಬಿಡುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯದಾದ್ಯಂತ ನಡೆಸುತ್ತಿರುವ ಹೋರಾಟದ ಭಾಗವಾಗಿ ನಗರದ ಬಿಎಸ್‌ಎನ್‌ಎಲ್ ಕಛೇರಿಯಿಂದ ಹೊರಟ ಮೆರವಣಿಗೆ ಜಿಲ್ಲಾಧಿಕಾರಿಗಳ ಕಛೇರಿ ಎದುರು ಸಮಾವೇಶಗೊಂಡ ಕಾರ್ಮಿಕರನ್ನು ಉದ್ದೇಶಿಸಿ ಮಾತನಾಡುತ್ತಿದ್ದರು. ಪ್ರತಿ ಗಂಟೆಗೂ ಸಹ ಕಾರ್ಮಿಕರು ದುಡಿಮೆಯಲ್ಲಿ ದೇಶದ ಜಿಡಿಪಿಗೆ 250 ರೂ.ಗಳಷ್ಟು ಹಣವನ್ನು ನೀಡುತ್ತಿರುವ




ಕಾರ್ಮಿಕರು ದೇಶದ ಆರ್ಥಿಕ ಬೆಳವಣಿಗೆ ತನ್ನದೇ ಆದ ಕೊಡುಗೆಯನ್ನು ನೀಡುತ್ತಿದ್ದಾರೆ. ಕಾರ್ಮಿಕರು ತಮ್ಮ ಹಕ್ಕುಗಳನ್ನು ಪಡೆದುಕೊಳ್ಳಲು ಸಂಘ ಕಟ್ಟುವ ಹಕ್ಕನ್ನು ಸಂವಿಧಾನ ನೀಡಿದೆ ತಮ್ಮ ಶ್ರಮದಿಂದ ದುಡಿಯುತ್ತಿರುವ ಕಾರ್ಮಿಕರು ತಮ್ಮ ಹಕ್ಕುಗಳನ್ನು ಪಡೆಯಲು ಅರ್ಹರಾಗಿದ್ದಾರೆ. ಡಿ.ಕೆ.ಶಿವಕುಮಾರ್‌ರವರು ಬೈದು ಬುದ್ದಿ ಹೇಳಿಸಿಕೊಳ್ಳುವಂತಹ ಯಾವುದೇ ತಪ್ಪನ್ನು ಕಾರ್ಮಿಕರು ಮಾಡಿಲ್ಲ ಎಂದ ಅವರು ಸಾಮಾಜಿಕ ನ್ಯಾಯದ ಬಗ್ಗೆ ಮಾತನಾಡುವ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಭ್ರಷ್ಟ ಡಿ.ಕೆ. ಶಿವಕುಮಾರ್ ರವರನ್ನು ತನ್ನ ಸಚಿವ ಸಂಪುಟದ ಕೈ ಬಿಡಬೇಕು ಮತ್ತು ಬುದ್ದಿ ಹೇಳಬೇಕು ಎಂದರು.



ಸಿಐಟಿಯು ಜಿಲ್ಲಾ ಉಪಾಧ್ಯಕ್ಷ ಲೋಕೇಶ್ ಮಾತನಾಡಿ ಕಾರ್ಮಿಕರು ತಮ್ಮ ರಕ್ತ ಬೆವರನ್ನು ಸುರಿಸಿ ದುಡಿದು ತಮ್ಮ ಕುಟುಂಬವನ್ನು ಸಾಕುತ್ತಿದ್ದಾ–ರೆ. ಕಲ್ಲುಗಣಿಗಾರಿಕೆ, ಭೂಮಾಫಿಯಾದಂತಹ ಆರೋಪಗಳು ಡಿ.ಕೆ. ಶಿವಕುಮಾರ್‌ರವರ ಮೇಲೆ ಇವೆ. ಜೊತೆಗೆ ರಾಜ್ಯದ ಸಂಪತ್ತನ್ನು ಸಾರ್ವಜನಿಕ ಸ್ವತ್ತುಗಳನ್ನು ಅಧಿಕಾರದ ಮದದಿಂದ ಲೂಟಿ ಹೊಡೆದು ಭ್ರಷ್ಟಾಚಾರದಲ್ಲಿ ಮುಳುಗಿ ಭ್ರಷ್ಟಾಚಾರದ ಕಪ್ಪುಚುಕ್ಕೆ ಅವರನ್ನು ಮೆತ್ತಿಕೊಂಡಿದೆ. ಇದಕ್ಕೆ ಮೊದಲು ಅವರು ರಾಜ್ಯದ ಜನರ ಕ್ಷೇಮೆಯಾಚಿಸಬೇಕು ಮತ್ತು ಸಿದ್ದರಾಮಯ್ಯನವರ ಸಂಪುಟದಿಂದ ಕೈಬಿಡಬೇಕು ಎಂದರು

ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎನ್.ಕೆ. ಸುಬ್ರಮಣ್ಯ ಮಾತನಾಡಿ ಈ ದೇಶದ ಜನರು ಸ್ವಾತಂತ್ರ್ಯ ಹೋರಾಟದಲ್ಲಿ ಹಲವು ತ್ಯಾಗಬಲಿದಾನಗಳ ಮೂಲಕ ಪಡೆದಿರುವ ಪ್ರಜಾಪ್ರಭುತ್ವ ಹಕ್ಕುಗಳನ್ನು ಮೊಟಕುಗೊಳಿಸಿ ಕೇವಲ ಬಂಡವಾಳಗಾರರಿಗಾಗಿ ಭಾರತ ಎನ್ನುವಂತೆ ಕಾಂಗ್ರೆಸ್ ಸರಕಾರದ ಹಿರಿಯ ಮಂತ್ರಿ ಡಿ.ಕೆ.ಶಿವಕುಮಾರ್ ಬಹಿರಂಗ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದು, ಸಂವಿಧಾನಕ್ಕೆ ಮಾಡಿದ ಅಪಚಾರವಾಗಿದೆ. ಕಾರ್ಮಿಕರು, ಶ್ರಮಜೀವಿಗಳು ದುಡಿಮೆಯನ್ನು ಶೋಷಣೆ ಯನ್ನು ಮತ್ತಷ್ಟು ತೀವ್ರಗೊಳಿಸಲು ಪುಷ್ಟಿ ನೀಡುತ್ತದೆ. ಕಾರ್ಮಿಕರು ಹಗಲು ರಾತ್ರಿ ದುಡಿಯುವುದರಿಂದ ಎಲ್ಲಾ ಕಂಪನಿಗಳ ಆಸ್ತಿ ವರ್ಷದಿಂದ ವರ್ಷಕ್ಕೆ ವೃದ್ಧಿಯಾಗುತ್ತಿದೆ. ಹೋರಾಟವನ್ನು ಬೆಂಬಲಿಸಿ ಡಿವೈಎಫ್ಐ ಜಿಲ್ಲಾಧ್ಯಕ್ಷ ರಾಘವೇಂದ್ರ ವಿನಾಯಕ ಸಿಎನ್‌ಸಿಯ ವಿಜಯ್, ತ್ರಿವೇಣಿ ಏರೋನಾಟಿಕ್ಸ್‌ನ ಸಂದೀಫ್, ಶ್ರೀಧರ್ ಪೌರಕಾರ್ಮಿಕರ ಸಂಘದ ಕೆ. ಮಂಜುನಾಥ್ ಬೆಂಬಲಿಸಿ ಮಾತನಾಡಿದರು ಹೋರಾಟದ ನೇತೃತ್ವವನ್ನು ಮುತ್ತುರಾಜ್, ಕುಮಾರ್, ಉಮೇಶ್, ರಫೀಕ್ ಮುಂತದವರು ವಹಿಸಿದ್ದರು

– ಎಸ್. ರಾಘವೇಂದ್ರ ■

## ಜನನುಡಿ.........

ಪುಟ 16 ರಿಂದ

ಪ್ರಾಬಲ್ಯ ಇದಕ್ಕೆ ಕಾರಣವೆಂದು ಒಂದು ವಾದ. ಆದರೆ ಕರಾವಳಿಯದ್ದೂ ಅವೈದಿಕ ಪರಂಪರೆಯ ಬುಡಕಟ್ಟು ಸಂಸ್ಕೃತಿ ಇದ್ದು, ಬರೇ ಅದೊಂದೇ ಕೋಮುವಾದದ ದಾಳಿ ತಡೆಯಲಾಗದು ಎನ್ನುವುದು ಇನ್ನೊಂದು ವಾದವಾಗಿತ್ತು. ಕರಾವಳಿಯಲ್ಲಿ ಮುಸ್ಲಿಮರು ಆರ್ಥಿಕವಾಗಿ ಪ್ರಬಲ ಕೋಮು ಆಗಿದ್ದು, ಶಿಕ್ಷಣ, ಬಂಡವಾಳಶಾಹಿ ಬೆಳೆದಿದ್ದು, ಬುಡಕಟ್ಟು ಸಂಸ್ಕೃತಿಯ ಆಚರಣೆಗಳನ್ನು ಪ್ರವೇಶಿಸಿ ವೈದಿಕೀಕರಿಸಿ ಅದನ್ನು ಕೋಮುವಾದೀಕರಣಕ್ಕೆ ಸಾಂಸ್ಕೃತಿಕ ರಾಜಕಾರಣಕ್ಕೆ ಬಳಸಿಕೊಂಡದ್ದು, ಪೇಜಾವರ ಸ್ವಾಮಿಜಿಯಂಥವರ ಬೆಂಬಲದಿಂದ 1960ರ ದಶಕದಲ್ಲೇ ಕೋಮುವಾದಿ ಪ್ರಯೋಗಶಾಲೆಯಾಗಿ ಈ ಪ್ರದೇಶದ ಆಯ್ಕೆ, ಇತ್ಯಾದಿ ಕಾರಣವಾಗಿರಬಹುದು. ಆದ-ರೆ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿಯ ಪರಾಭವ ಗಮನಿಸಿದರೆ ಕೋಮುವಾದೀಕರಣ ಜನಮಾನಸವನ್ನು ಪೂರ್ತಿಯಾಗಿ ಹಿಡಿದಿದೆ ಎಂದೂ ಹೇಳುವಂತಿಲ್ಲ.

ಈಗ ಕೇಂದ್ರ ಸರಕಾರದಲ್ಲಿ ಅಧಿಕಾರ ಹಿಡಿದಿರುವುದು, ವಿಧಾನಸಭೆ-ಲೋಕಸಭೆ ಎರಡರಲ್ಲೂ ಚುನಾವಣೆಯಲ್ಲಿ ಬಿಜೆಪಿ ಬಹುಮತ ಪಡೆದಿರುವುದು ಕೆಲವು ಲಿಂಗಾಯತ ಮಠಗಳು ವಿಶ್ವ ಹಿಂದೂ ಪರಿಷತ್ತಿಗೆ ಬೆಂಬಲ ನೀಡುತ್ತಿರುವುದನ್ನು ಗಮನಿಸಿದರೆ, ಹೈದರಾಬಾದ್ ಕರ್ನಾಟಕ ಸೇರಿದಂತೆ ಯಾವ ಪ್ರದೇಶವೂ ಕೋಮುವಾದೀಕರಣದ ಅಪಾಯದಿಂದ ಮುಕ್ತವಾಗಿಲ್ಲ. ಧರ್ಮಸ್ಥಳ ಮತ್ತು ಆಳ್ವಾಸ್ ನುಡಿಸಿರಿ ಎರಡಕ್ಕೂ ರಾಜ್ಯದಾದ್ಯಂತದಿಂದ ಜನ-ಧನ ಹರಿದು ಬರುತ್ತಿರುವುದು ಕೋಮುವಾದೀಕರಣದ ಅಪಾಯ ಇಡೀ ರಾಜ್ಯ-ಕ್ಕೆ ಇದೆ ಎಂಬ ಅಭಿಪ್ರಾಯವೂ ವ್ಯಕ್ತವಾಯಿತು. ಜಾತಿ ಜತೆ ಸ್ವಲ್ಪ ಮಟ್ಟಿಗೆ ತಳುಕು ಹಾಕಿಕೊಂಡಿದ್ದ 'ವೃತ್ತಿಕೌಶಲ್ಯ'ವನ್ನೂ ಬಂಡವಾಳಶಾಹಿ ನುಂಗಿ ಹಾಕಿರುವುದು; ಮಹಿಳಾ ವಿಮೋಚನಾ ಚಳುವಳಿ ಮೇಲು ವರ್ಗ-ಜಾತಿ ಮತ್ತು ಕೆಳವರ್ಗ-ಜಾತಿಯ ಮಹಿಳೆಯ ಸಮಸ್ಯೆಗಳ ವ್ಯತ್ಯಾಸ ಗುರುತಿಸದಿರುವುದು: ಜಾತಿ, ಧರ್ಮ, ಲಿಂಗ ಎಂಬ ಮೂರೂ ತಾರತಮ್ಯ ಎದುರಿಸುವುದರಿಂದ ಅತ್ಯಂತ ಹೆಚ್ಚು ದಮನಿತ ದಲಿತ ಮಹಿಳೆಯ ಮೇಲಾಗುವ ಸತತ ಭೀಕರ ದೌರ್ಜನ್ಯಗಳು ನಿರ್ಭಯ ಪ್ರಕರಣದಂತೆ ಪ್ರತಿಸ್ಪಂದನೆ ಪಡೆಯದಿರುವುದು; ಜಾತಿ ತಾರತಮ್ಯ-ಅಸ್ಪೃಶ್ಯತೆಗಳ ಸಾರ ಬದಲಾಗದೆ ರೂಪಗಳು ಮಾತ್ರ ಬದಲಾಗಿರುವುದು;- ಇತ್ಯಾದಿಗಳ ಬಗೆಗೂ ಪ್ರಸ್ತಾಪ ಬಂತು. ದೇವು ಪತ್ತಾರ್ ಮತ್ತು ಗೌರಿ ವಿಷಯ ಮಂಡನೆ ಮಾಡಿದರು. ಡಾ.ಎಚ್.ಎಸ್. ಅನುಪಮ ಅಧ್ಯಕ್ಷತೆ ವಹಿಸಿದ್ದರು.

ಮೊದಲ ದಿನ ಸಂಜೆ ಸಾಂಸ್ಕೃತಿಕ ಸಂಜೆ ಏರ್ಪಡಿಸಲಾಗಿತ್ತು. ಆ ದಿನಗಳು ಖ್ಯಾತಿಯ ಸಿನಿಮಾ ನಟ ಚೇತನ್ ಅವರ ಅನುಭವಗಳ ಬಗ್ಗೆ ಮಾತನಾಡಿದರು. ಪಿಚ್ಚಳ್ಳಿಯವರು ಅಧ್ಯಕ್ಷೀಯ ಮಾತುಗಳನ್ನು ಹೇಳಿದ್ದಲ್ಲದೆ ತತ್ವಪದಗಳನ್ನೂ ಹಾಡಿದರು. ಆಟ ಮಾಟ ಧಾರವಾಡ ತಂಡ ಗಿರೀಶ್ ಕಾರ್ನಾಡ್ ಅವರ ತಲೆದಂಡ ನಾಟಕ ಪ್ರದರ್ಶಿಸಿತು.

**ಸಾಮಾಜಿಕ ಮಾಧ್ಯಮದ ಸವಾಲುಗಳು**

ಸಾಮಾಜಿಕ ಮಾಧ್ಯಮ ಜನಪ್ರಿಯವಾಗುತ್ತಿರುವುದು ಮತ್ತು ಅದು ಕೋಮುವಾದಿ ವಿಷ ಹರಡಲು ಪ್ರಗತಿಪರರ ವಿರುದ್ಧ ನಿಂದನೆ, ಭಯೋತ್ಪಾದನೆಗೆ ಬಳಕೆಯಾಗುತ್ತಿರುವ ಹಿನ್ನೆಲೆಯಲ್ಲಿ, "ಸಾಮಾಜಿಕ ಜಾಲತಾಣದ ಸವಾಲುಗಳು" ಬಗೆಗಿನ ಗೋಷ್ಠಿಯನ್ನೂ ಹಮ್ಮಿಕೊಳ್ಳಲಾಗಿತ್ತು. ಬಿಜೆಪಿ ಹಮ್ಮಿಕೊಂಡಿರುವ ಕಾಂಗ್ರೆಸ್-ಮುಕ್ತ ಭಾರತಕ್ಕಾಗಿ ಸಾಮಾಜಿಕ ಮಾಧ್ಯಮ ಯೋಜನೆ ಪ್ರಜಾಪ್ರಭುತ್ವ-ಮುಕ್ತ ಭಾರತದತ್ತ ಹೋಗುವ ಅಪಾಯ; ಪ್ರಗತಿಪರ ಸಂಘಟನೆಗಳು, ಚಳುವಳಿಗಳು ವ್ಯಕ್ತಿಗಳು ಈ ದಾಳಿಯನ್ನು ಸಂಘಟಿತವಾಗಿ ಎದುರಿಸುವ ಮತ್ತು ಸೆಕ್ಯುಲರ್ ಪ್ರಗತಿಪರ ಮೌಲ್ಯಗಳ ಪ್ರಸಾರಕ್ಕೆ ಬಳಸುವ ತುರ್ತು ಅಗತ್ಯತೆ; 'ಮುಖ್ಯವಾಹಿನಿ' ಮಾಧ್ಯಮ'ಗಳಲ್ಲಿ ಅಭಿವ್ಯಕ್ತಿ ವಂಚಿತರಿಗೆ ದಲಿತ ಇತ್ಯಾದಿ ಜನವಿಭಾಗಗಳಿಗೆ ಸಾಮಾಜಿಕ ಮಾಧ್ಯಮ ಒದಗಿಸುವ ಅವಕಾಶ; ನೈಜ ಮತ್ತು ಹುಸಿ ಅಂಬೇಡ್ಕರ್ ವಾದಿಗಳನ್ನು ಗುರುತಿಸುವ ಸವಾಲು; ಅಕ್ಷರ-ಬದ್ಧತೆ (ಫೇಸ್ ಬುಕ್ ಕಲಿಗಳು) ಮತ್ತು ಚಳುವಳಿ-ಬದ್ಧತೆ ನಡುವಿನ ಕಂದಕ; ಫೇಸ್-ಬುಕ್ ಅಸ್ಪೃಶ್ಯತೆ; ಫೇಕ್ ಅಕೌಂಟುಗಳು, ಪ್ರೊಮೋಟೆಡ್ ಲೈಕುಗಳು, 'ಕಲ್ಪಿತ ಜನಪ್ರಿಯತೆ'ಯಿಂದ ನೈಜ ಜನಪ್ರಿಯತೆಯ ಉತ್ಪಾದನೆ; ಅಸಹನೆ, ಹಿರೋಯಿಸಂಗಳನ್ನು ಹಿಗ್ಗಿಸಿ ಪ್ರಜಾಪ್ರಭುತ್ವ ಮತ್ತು ಸಾಂಘಿಕ ಶಕ್ತಿಯನ್ನು ಕುಗ್ಗಿಸುವ ಅಪಾಯ? ಇತ್ಯಾದಿಗಳನ್ನು ವಿಷಯ ಮಂಡನೆ ಮತ್ತು ಚರ್ಚೆ ಒಳಗೊಂಡಿತ್ತು. ಪ್ರಭಾ ಬೆಳವಂಗಲ, ನಾಗರಾಜ್ ಹೆತ್ತೂರ್, ಅರುಣ ಜೋಳದ ಕೂಡ್ಲಿಗಿ ವಿಷಯ ಮಂಡನೆ ಮಾಡಿದರು. ಶಶಿಧರ ಹೆಮ್ಮಾಡಿ ಗೋಷ್ಠಿಯ ನಿರ್ವಹಣೆ ಮಾಡಿದರು.



**ಕರಾವಳಿ ತಲ್ಲಣಗಳು**

'ಕರಾವಳಿಯ ತಲ್ಲಣಗಳು' ಗೋಷ್ಠಿ ಈಗ ಎಲ್ಲರನ್ನೂ ಕಾಡುತ್ತಿರುವ ಕೋಮುವಾದೀಕರಣ ಅಲ್ಲದೆ ಅಭಿವೃದ್ಧಿಯ ಪ್ರಶ್ನೆಗಳನ್ನೂ ಒಳಗೊಂಡಿತ್ತು. ಕರಾವಳಿಯ ಬದುಕಿನ ಆಧಾರವಾಗಿದ್ದ ಕೃಷಿಯ ನಾಶ; (ಅವೈದಿಕ) ದೇವರುಗಳ 'ಮತಾಂತರ' (ವೈದಿಕೀಕರಣ); ಪ್ರಮುಖ ಒಬಿಸಿ ಸಮುದಾಯಗಳ ವ್ಯವಸ್ಥಿತ ಕೋಮುವಾದೀಕರಣ; ಹೊರರಾಜ್ಯ-ಹೊರದೇಶಗಳ ಮೇಲೆ ಆಧಾರಿತ ಆರ್ಥಿಕ; ಹೊರರಾಜ್ಯ-ಹೊರದೇಶಗಳ ಉದ್ಯೋಗ ಮಾರುಕಟ್ಟೆ ಏರುಪೇರು ಆದಾಗ ಸಹಾಯಕ್ಕೆ ಬಾರದ ಸರಕಾರಗಳು, ಸ್ಥಳೀಯ ಉದ್ಯೋಗ ಸೃಷ್ಟಿಸದ ಕೈಗಾರಿಕೆಗಳು; ಒಂದಕ್ಕೊಂದು ಪೂರಕವಾಗುವ ಎರಡೂ ಮೂಲಭೂತವಾದಗಳ ಅಪಾಯ; ಯಾವುದೇ ನಿಜವಾದ ಪ್ರಶ್ನೆಗಳನ್ನು ಎತ್ತಿಕೊಳ್ಳದೆ ಸಾಂಸ್ಕೃತಿಕ ರಾಜಕಾರಣದಿಂದಲೇ ರಾಜಕೀಯ ಬೆಂಬಲ ಗಳಿಸಿ ಉಳಿಸಿಕೊಳ್ಳುವ ಮತೀಯ ಶಕ್ತಿಗಳು; ನಿಜವಾದ ಪ್ರಶ್ನೆಗಳನ್ನು ಎತ್ತಿ-ಕೊಂಡು ಹೋರಾಟ ಮಾಡಿಯೂ ರಾಜಕೀಯ ಬೆಂಬಲ ಗಳಿಸಿ ಉಳಿಸಿಕೊಳ್ಳುವಲ್ಲಿ ಸೋತಿರುವ ಪ್ರಗತಿಪರ ಶಕ್ತಿಗಳು; ಸೆಕ್ಯುಲರ್ ಸಾಂಸ್ಕೃತಿಕ ರಾಜಕಾರಣ ಮಾಡುವ ಅನಿವಾರ್ಯತೆ; ರಾಜ್ಯದ ಅತ್ಯಂತ ಹಿಂದುಳಿದ ತಾಲೂಕು ಜೋಯ್ಡಾ (ಉತ್ತರ ಕನ್ನಡ)ದ ವಿಶಿಷ್ಟ ಸಮಸ್ಯೆಗಳು ದೂರದ ಬೆಂಗಳೂರಿಗೆ ಕೇಳಿಸದಿರುವುದು; - ಇತ್ಯಾದಿಗಳನ್ನು ವಿಷಯ ಮಂಡನೆ ಮತ್ತು ಚರ್ಚೆ ಒಳಗೊಂಡಿತ್ತು. ಡಾ. ಜಯಪ್ರಕಾಶ ಶೆಟ್ಟಿ, ಸುಬ್ರತೊ ಮಂಡಲ್ ಮತ್ತು ಮುನೀರ್ ಕಾಟಿಪಳ್ಳ ವಿಷಯ ಮಂಡನೆ ಮಾಡಿದರು. ವಿಷ್ಣು ನಾಯ್ಕ ಅಧ್ಯಕ್ಷತೆ ವಹಿಸಿದ್ದರು.

ಜಾಗತೀಕರಣ ಮತ್ತು ಕೋಮುವಾದ ಪ್ರಮುಖ ಸಮಕಾಲೀನ ಸವಾಲು ಎಂದು "ಸಮಕಾಲೀನ ಸವಾಲುಗಳು ಮತ್ತು ಐಕ್ಯತೆಯ ಅಗತ್ಯತೆ' ಗೋಷ್ಠಿಯಲ್ಲಿ ಗುರುತಿಸಲಾಯಿತು. ಜಾಗತೀಕರಣದ ಸಣ್ಣ ಮತ್ತು ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳು ಕುಂಠಿತವಾಗುತ್ತಿರುವುದು ಅಥವಾ ಮುಚ್ಚಿ ಹೋಗುತ್ತಿರುವುದು, ಅದರಿಂದಾಗಿ ಮೀಸಲಾತಿಯ ಅವಕಾಶಗಳು ಇಲ್ಲವಾಗುತ್ತಿರುವುದು, ಖಾಸಗಿ ಉದ್ಯಮಗಳಲ್ಲಿ ಮೀಸಲಾತಿಯ ನೀತಿಯನ್ನು 200 ಉದ್ಯಮಗಳಲ್ಲಿ 198 ವಿರೋಧಿಸಿರುವುದು, ರಾಜ್ಯ ಸರಕಾರಗಳಿಗೆ ಖಾಸಗಿ ಕಂಪನಿಗಳ 'ಬೆದರಿಕೆ', ಬಿಜೆಪಿಯ ಕೋಮುವಾದಿ ಚುನಾವಣಾ ಪ್ರಚಾರ ಬಯಲು ಮಾಡದ ಮಾಧ್ಯಮಗಳು, ಬಿಜೆಪಿಯ ಪಿಆರ್ ಏಜೆನ್ಸಿಗಳಿಗೆ ಶರಣಾದ ಮಾಧ್ಯಮಗಳು, ದೇಶವನ್ನೆಲ್ಲಾ ಜೈಲು ಮಾಡಿದ ತುರ್ತು ಪರಿಸ್ಥಿತಿ ಮರುಕಳಿಸುವ ಮತ್ತು ಈ ಬಾರಿ ಜೈಲಿನ ಕೀಲಿ ಕೈ ಸ್ಥಳೀಯ ಕೋಮುವಾದಿ ಕಟುಕರ ಕೈಲಿ ಇರುವ ಅಪಾಯ - ಇತ್ಯಾದಿಗಳ ಬಗೆಗೆ ಪ್ರಸ್ತಾಪ ಬಂತು. ಡಾ. ಎಲ್.ಹನುಮಂತಯ್ಯಮತ್ತು ಡಿ. ಉಮಾಪತಿ ವಿಷಯ ಮಂಡನೆ ಮಾಡಿದರು. ದಿನೇಶ್ ಅಮಿನ್ ಮಟ್ಟು ಅಧ್ಯಕ್ಷತೆ ವಹಿಸಿದ್ದರು.

**ನಿಜವಾದ ಶತ್ರುಗಳ ಅನಾವರಣ ಮಾಡುವುದು ಜನನುಡಿಯ ಪ್ರಮುಖ ಕೆಲಸ**

ಅಧ್ಯಕ್ಷೀಯ ಮಾತುಗಳನ್ನಾಡುತ್ತಾ ದಿನೇಶ್ ಆರ್ಥಿಕ ಉದಾರೀಕರಣ ಮತ್ತು ಕೋಮುವಾದೀಕರಣದ ಬಗ್ಗೆ ಯುವಜನರನ್ನು ಎಚ್ಚರಿಸುವುದು ಜನನುಡಿಯ ಪ್ರಮುಖ ಜವಾಬ್ದಾರಿ ಎಂದರು. ಕಳೆದ ಎರಡು ದಶಕಗಳಲ್ಲಿ ಅವರು ಈ ಜಗತ್ತಿಗೆ ಕಣ್ಣು ತೆರೆಯುತ್ತಿದ್ದಂತೆ ನಡೆದ ಈ ಪ್ರಮುಖ ವಿದ್ಯಮಾನಗಳ ಅದರಲ್ಲೂ ರೂಪ ವಿನ್ಯಾಸಗಳಲ್ಲಿ ಬದಲಾಗುತ್ತಿರುವ ಕೋಮುವಾದ ಹಾಕುವ ಹಲವು ವೇಷಗಳ ಮುಖವಾಡಗಳನ್ನು ಬಯಲು ಮಾಡಬೇಕು. ಬಿಜೆಪಿಯ ಸಾಂಸ್ಕೃತಿಕ ರಾಜಕಾರಣದ ಅಪಾಯ ಮತ್ತು ಸೂಕ್ಷ್ಮತೆಗಳನ್ನು ಅರ್ಥ ಮಾಡಿಕೊಳ್ಳುವಲ್ಲಿ ಸೆಕ್ಯುಲರ್ ಪ್ರಗತಿಪರರು ಸೋತಿದ್ದಾರೆ. ಅದನ್ನು ಅರ್ಥ ಮಾಡಿಕೊಂಡು ಸೆಕ್ಯುಲರ್ ಸಾಂಸ್ಕೃತಿಕ ರಾಜಕಾರಣ ಮಾಡಬೇಕು. ಜನನುಡಿ ಒಂದು ಸೆಕ್ಯುಲರ್ ಮತ್ತು ಪ್ರಗತಿಪರ ಚಳುವಳಿಗಳ ಸಂಘಟನೆಗಳ ವ್ಯಕ್ತಿಗಳ ವೇದಿಕೆ. ಜನರ ನಿಜವಾದ ಶತ್ರುಗಳನ್ನು ಜನತೆಯ ಮುಂದೆ ಅನಾವರಣ ಮಾಡುವುದು ಜನನುಡಿಯ ಪ್ರಮುಖ ಕೆಲಸವಾಗಬೇಕು. ಇದಕ್ಕಾಗಿ ಇಲ್ಲಿರುವವರೆಲ್ಲ ತಮ್ಮ ಭಿನ್ನಾಭಿಪ್ರಾಯ ಮರೆತು ಐಕ್ಯತೆ ಸಾಧಿಸಬೇಕು. ನಮ್ಮ ದೇಶದ ವರ್ತಮಾನ ಅಧ್ಯಯನ ಮಾಡಬೇಕು. ಅದಕ್ಕಾಗಿ ಗಾಂಧಿ, ಅಂಬೇಡ್ಕರ್, ಲೋಹಿಯಾ, ಮಾರ್ಕ್ಸ್‌ರನ್ನು ಓದಬೇಕು ಎಂದು ಜನನುಡಿಯ ಯುವ ಕಾರ್ಯಕರ್ತರಿಗೆ ಕಿವಿಮಾತು ಹೇಳಿದರು. ಸಮಾರೋಪದಲ್ಲಿ ಕೆ. ನೀಲಾ ಕರಾವಳಿಯಲ್ಲಿ ಕೋಮುವಾದಿ ಶಕ್ತಿಗಳನ್ನು ನಿಯಂತ್ರಿಸಲು ಆಗ್ರಹಿಸುವ ನಿರ್ಣಯ ಮಂಡಿಸಿ ಅದನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು. ಡಾ. ಜಿ. ರಾಮಕೃಷ್ಣ, ಪ್ರೊ. ಆರ್.ಕೆ. ಹುಡಗಿ ಮತ್ತು ಡಾ. ಮೀನಾಕ್ಷಿ ಬಾಳಿ ಮಾತನಾಡಿದರು.

ಜನನುಡಿ ಎರಡನೇ ಸಮಾವೇಶ ಎಲ್ಲಾ ಅಂಶಗಳಲ್ಲೂ ಪ್ರಗತಿ ಸಾಧಿಸಿದ್ದರೂ, ಕರ್ನಾಟಕವನ್ನು ಬಾಧಿಸುವ ಇನ್ನೂ ಹಲವು ವಿಷಯಗಳ ಬಗ್ಗೆ ನಿರ್ಣಯ ತೆಗೆದುಕೊಳ್ಳಬಹುದಿತ್ತು. ಕರಾವಳಿಯಲ್ಲಿ ಕೋಮುವಾದಿ ಶಕ್ತಿಗಳನ್ನು ನಿಯಂತ್ರಿಸಲು ಆಗ್ರಹಿಸುವ ನಿರ್ಣಯವನ್ನು ಸರಕಾರಕ್ಕೆ ಕೊಟ್ಟು ಆ ಬಗ್ಗೆ ಫಾಲೋ-ಅಪ್ ಮಾಡಲಾಗುವುದಂತೆ. ಸಮಾವೇಶದ ಮುಂದುವರಿಕೆಯಾಗಿ ಇನ್ನೂ ಇಂತಹ ಕೆಲವು ನಿರ್ದಿಷ್ಟ ಕಾರ್ಯಾಚರಣೆಗಳ ಕಾರ್ಯಕ್ರಮ ಹಾಕಿಕೊಳ್ಳಬಹುದಿತ್ತು. ಚಳುವಳಿಗಳ ಐಕ್ಯತೆ ಮುಂದಿರುವ ಸವಾಲುಗಳ ಬಗ್ಗೆ ಒತ್ತು ಆ ಬಗೆಗಿನ ಗೋಷ್ಠಿಯಲ್ಲಿ ಸಾಲದಾಯಿತು.

★★★★★

**ಕರಾವಳಿಯಲ್ಲಿ ಕೋಮುವಾದಿ ಶಕ್ತಿಗಳನ್ನು ನಿಯಂತ್ರಿಸಲು ಆಗ್ರಹಿಸುವ ನಿರ್ಣಯದ ಪ್ರಮುಖ ಅಂಶಗಳು**

* ಕರಾವಳಿಯಲ್ಲಿ ಸೇವೆ ಸಲ್ಲಿಸುತ್ತಿರುವ ಪೊಲೀಸ್ ಅಧಿಕಾರಿಗಳ ದಾಖಲೆಗಳನ್ನು ಪರಿಶೀಲಿಸಿ ಕೋಮುವಾದಿ ಶಕ್ತಿಗಳಿಗೆ ಬೆಂಬಲವಾಗಿ ನಿಂತವರನ್ನು ಕಡ್ಡಾಯವಾಗಿ ಕರಾವಳಿಯಿಂದ ಹೊರಹಾಕಬೇಕು.
* ಐಕ್ಯತೆ-ಸಾಮರಸ್ಯ ಬೆಸೆಯುವ ಕೆಲಸ ಚಟುವಟಿಕೆಗಳನ್ನು ಸರಕಾರ ವಿವಿಧ ಇಲಾಖೆಗಳ ಮೂಲಕ ಹಮ್ಮಿಕೊಳ್ಳಬೇಕು.
* 'ಧರ್ಮ ಸಂಸ್ಕೃತಿಯ ಹೆಸರಿನಲ್ಲಿ ಯುವಜನರ ಮೇಲೆ ದಾಳಿ ನಡೆಸುವ ಶಕ್ತಿಗಳ ಮೇಲೆ ನಿರ್ದಾಕ್ಷಿಣ್ಯ ಕ್ರಮ ತೆಗೆದುಕೊಳ್ಳಬೇಕು.
* ಕೋಮುವಾದವನ್ನು ಹಿಮ್ಮೆಟ್ಟಿಸುವ ನಿಟ್ಟಿನಲ್ಲಿ ಕೋಮುವಾದಿ ಹಿನ್ನೆಲೆ ಇರುವ ಸಂಘ ಸಂಸ್ಥೆ, ವ್ಯಕ್ತಿ, ಶಕ್ತಿಗಳು ನಡೆಸುವ ಯಾವುದೇ ಸಾಹಿತ್ಯಿಕ ಸಾಂಸ್ಕೃತಿಕ ಸಮಾವೇಶಗಳಿಗೆ ಸರ್ಕಾರ ಅನುದಾನ ಕೊಡಬಾರದು ಮತ್ತು ಸರಕಾರದ ಪ್ರತಿನಿಧಿಗಳು ಭಾಗವಹಿಸಬಾರದು.
* ದೇವಮಾನವರು, ಮಠಾಧಿಪತಿಗಳು, ಧರ್ಮಾಧಿಕಾರಿಗಳು ನಡೆಸುವ ಸಾಹಿತ್ಯ ಸಮ್ಮೇಳನ, ಸರ್ವ ಧರ್ಮ ಸಮ್ಮೇಳನ, ಸಮಾಜ ಸೇವಾ ಚಟುವಟಿಕೆಗಳಿಗೆ ಸರ್ಕಾರ ಅನುದಾನ ನೀಡಬಾರದು.

## ಸಾಮಾಜಿಕ ಅನಿಷ್ಟಗಳನ್ನು ಜಾಲಾಡುವ...............

ಪುಟ 9 ರಿಂದ

ಪಟ್ಟಭದ್ರರಿಂದ ದೌರ್ಜನ್ಯ, ಹಲ್ಲೆ, ಕೊಲೆಗಳು ಹೆಚ್ಚುತ್ತಿವೆ.

ಆಳುವ ಪಕ್ಷಗಳು, ಹೇಗಾದರೂ ಸರಿ ಅಧಿಕಾರ ಪಡೆಯಬೇಕೆಂದು ಬಯಸುವ ಪಕ್ಷಗಳು ಪ್ರತಿಯೊಂದನ್ನು ತಮ್ಮ ಮತ ಸಮೀಕರಣಗಳ ಆಧಾರದಲ್ಲಿ ನೋಡಿ ತೂಗಿ ನಿಲುವು ತೆಗೆದುಕೊಳ್ಳುತ್ತವೆ.

ಆದರೆ ಕಮ್ಯೂನಿಸ್ಟ್ ಚಳುವಳಿಯ ಕಾಳಜಿ ಶೋಷಿತರ, ಅನ್ಯಾಯಕ್ಕೆ ತುತ್ತಾದವರ ಪರವಾಗಿ ನಿಲ್ಲುವ ಪ್ರಾಮಾಣಿಕ ಉದ್ದೇಶದಿಂದ ಪ್ರೇರಿತವಾದದ್ದು. ಜಾತಿತಾರತಮ್ಯ, ಅಸ್ಪೃಶ್ಯತೆ, ಸಾಮಾಜಿಕ ಅನಿಷ್ಟ ಪರಂಪರೆಗಳಿಗೆ ಕೊನೆಹಾಡಬೇಕೆಂಬ ಉದ್ದೇಶದ ಚಳುವಳಿ ಇದು. ಸಾಮಾಜ ಬದಲಾವಣೆಯ ಗುರಿಯ ಚಳುವಳಿ. ಇದರಲ್ಲಿ ದಲಿತರು, ಅನ್ಯಾಯಕ್ಕೆ ತುತ್ತಾದ ಜಾತಿ, ಸಮುದಾಯಗಳ ಜನರು ಮಾತ್ರವಲ್ಲ ಮಾನವೀಯ ಕಾಳಜಿಯುಳ್ಳ ಎಲ್ಲರೂ ಸೇರಬೇಕು. ವಿಶಾಲ ಐಕ್ಯತೆ ಮೂಡಬೇಕು. ಪ್ರಬಲ ಸಮೂಹಿಕ ಆಂದೋಲನ ಮೂಡಿಬರಬೇಕು. ಸಮಾನತೆಯ ನೆಲೆಯ ಹೊಸ ಸಾಮಾಜಿಕ ವ್ಯವಸ್ಥೆಯ ಕಡೆಗೆ ಸಮಾಜ ಸಾಗಬೇಕು. ಮುಂದಿನ ದಿನಗಳಲ್ಲಿ ಈ ನಿಟ್ಟಿನಲ್ಲಿ ಚಳುವಳಿ ಮತ್ತಷ್ಟು ದೃಢವಾದ ಹೆಜ್ಜೆಗಳನ್ನು ಇಡಬೇಕಿದೆ. ಸಿಪಿಐ(ಎಂ) ಪಕ್ಷದ 21 ನೇ ಸಮ್ಮೇಳನ ಈ ನಿಟ್ಟಿನಲ್ಲಿ ಅಗತ್ಯ ಚರ್ಚೆ ಕೈಗೊಳ್ಳಲಿದೆ.

JANASHAKTHI KANNADA VARA PATRIKE DEC 28, 2014 Price : Rs. 10/- RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2013-15 Posted at MBC Bangalore GPO Licensed to Post without prepayment License No. WPP-283

# "ಕೋಮುವಾದಿ ಗಾಢಾಂಧಕಾರದ ಸುರಂಗದ ಕೊನೆಯಲ್ಲೊಂದು ಬೆಳಕಿನ ಕಿಂಡಿ - ಜನನುಡಿ" : ಅಮಿನ್ ಮಟ್ಟು

ಇವು ದಿನೇಶ ಅಮಿನ್ ಮಟ್ಟು ಅವರು ಡಿಸೆಂಬರ್ 13-14ರಂದು ಮಂಗಳೂರಿನಲ್ಲಿ ನಡೆದ ಜನನುಡಿ ಸಮಾವೇಶದ "ಸಮಕಾಲೀನ ಸವಾಲುಗಳು- ಐಕ್ಯತೆಯ ಅಗತ್ಯತೆ' ಬಗೆಗಿನ ಗೋಷ್ಠಿಯಲ್ಲಿ ಅಧ್ಯಕ್ಷೀಯ ಭಾಷಣದ



ಜನನುಡಿ ಉದ್ಘಾಟಿಸುತ್ತಿರುವ ನಿಡುಮಾಮಿಡಿ ಶ್ರೀಗಳು

ಕೊನೆಯಲ್ಲಿ ಆಡಿದ ಮಾತುಗಳು. ತಾರ್ಕಿಕವಾಗಿ ತಣ್ಣಗೆ ವಿಚಾರ ಮಂಡಿಸುವ ದಿನೇಶ್ ಇಂತಹ 'ಅತಿಶಯೋಕ್ತಿ'ಯಂತೆ ಕಾಣುವ ಮಾತುಗಳನ್ನು ಸಾಮಾನ್ಯವಾಗಿ ಆಡುವುದಿಲ್ಲವಲ್ಲ ಎಂದು ಬಹಳ ಜನರಿಗೆ (ಅದರಲ್ಲೂ ಜನನುಡಿ ಸಮಾವೇಶದಲ್ಲಿ ಭಾಗವಹಿಸದೆ ಇದ್ದವರಿಗೆ) ಆಶ್ಚರ್ಯವಾಗಬಹುದು. ಎರಡೂ ದಿನ ಭಾಗವಹಿಸಿದ ಬಹುಪಾಲು ಜನರಿಗೆ ಮಾತ್ರ ಇದು ಎರಡು ದಿನದ ಸಮಾವೇಶದ 'ಕ್ಲೈಮಾಕ್ಸ್' ಮತ್ತು ಸಾರಾಂಶವಾಗಿ ಕಂಡಿತು.

ಇದಕ್ಕೆ ಸಮಾವೇಶದ ಹಿಂದಿನ ಕೆಲವು ದಿನಗಳಲ್ಲಿ ಸಂಘ ಗ್ಯಾಂಗ್ ನಮ್ಮೆಲ್ಲರ ಮೇಲೆ ಹರಿಯಬಿಟ್ಟ ಕೋಮುವಾದಿ-ಫ್ಯಾಸಿಸ್ಟ್ ಗಾಢಾಂಧಕಾರ ಸೃಷ್ಟಿಸುವ ಪ್ರಚೋದನಕಾರಿ ಹುನ್ನಾರಗಳೂ (ಭಗವದ್ಗೀತೆ ರಾಷ್ಟ್ರೀಯ ಗ್ರಂಥ, "ಘರ್ ವಾಪಸಿ" ಮತಾಂತರ, ಚುನಾವಣಾ ಪ್ರಚಾರದಲ್ಲಿ ರಾಮಜಾದೆ-ಹರಾಮ್‌ಜಾದೆ, ರಾಷ್ಟ್ರೀಯ ಪ್ರೊಫೆಸರ್ ಭೈರಪ್ಪ, ಸಂಸ್ಕೃತ ಹೇರಿಕೆ ಇತ್ಯಾದಿ) ಮತ್ತು ಅವುಗಳ ಬಗ್ಗೆ ನಡೆದ ಚರ್ಚೆಗಳೂ ಕಾರಣವಾಗಿರಬಹುದು. ಕಳೆದ ಬಾರಿ 'ಆಳ್ವಾಸ್ ನುಡಿಸಿರಿ'ಗೆ ಪ್ರತಿಭಟನೆಯಾಗಿ ಜನಪರ ಪರ್ಯಾಯವಾಗಿ ತಳಮಟ್ಟದಿಂದ ಹುಟ್ಟಿಕೊಂಡ ಜನನುಡಿ, ಹಲವು ಇಂತಹ ಪ್ರತಿಭಟನಾ ವೇದಿಕೆಗಳಂತೆ 'ಒನ್ ಟೈಂ ವಂಡರ್' ಆಗಿಲ್ಲ. ಎರಡನೇ ವರ್ಷಕ್ಕೆ ಇನ್ನೂ ಹೆಚ್ಚಿನ ಬಲ, ಕಸುವು, ದೃಢತೆ, ಆತ್ಮವಿಶ್ವಾಸ ಮತ್ತು ಐಕ್ಯತೆಯೊಂದಿಗೆ ಕಾಲಿಟ್ಟಿರುವುದು ಇಂತಹ ಉತ್ಸಾಹ ಮತ್ತು ಭರವಸೆಯ ವಾತಾವರಣಕ್ಕೆ ಕಾರಣವಾಗಿರಬೇಕು.

**ಎರಡನೇ ಸಮಾವೇಶದ ಮುನ್ನಡೆ**

ಪಾಲ್ಗೊಂಡವರ ಸಂಖ್ಯೆ ಸುಮಾರು ಇಮ್ಮಡಿಯಾದ್ದು ಮಾತ್ರವಲ್ಲದೆ ದೊಡ್ಡ ಸಂಖ್ಯೆಯಲ್ಲಿ ಯುವಜನರ ಪಾಲ್ಗೊಳ್ಳುವಿಕೆ, ಎರಡು ದಿನದ ಉದ್ದಕ್ಕೂ ಎಲ್ಲಾ ಗೋಷ್ಠಿಗಳಲ್ಲೂ ಸಭಾಂಗಣ ತುಂಬಿತ್ತಲ್ಲದೆ ನಡೆದ ಬಿಚ್ಚುಮನಸ್ಸಿನ ಪ್ರಬುದ್ಧ ಚರ್ಚೆ- ಈ ಎಲ್ಲವೂ ಸ್ಫೂರ್ತಿದಾಯಕವಾಗಿತ್ತು. ಮುಂದಿನ ವರ್ಷ ಕನಿಷ್ಟ ನಾಲ್ಕು ವಲಯವಾರು ಜನನುಡಿ ಸಮಾವೇಶಗಳನ್ನು ಸಂಘಟಿಸಿ ಇನ್ನಷ್ಟು ಪ್ರಗತಿಪರ ಸಂಘಟನೆಗಳನ್ನು ಒಳಗೊಳ್ಳಬೇಕು, ಇನ್ನಷ್ಟು ಜನರನ್ನು ತಲುಪಬೇಕು ಎಂಬ ಉತ್ಸಾಹ,



ದೃಢನಿಶ್ಚಯ ಕಂಡುಬಂತು.

ಜನನುಡಿ-2013ರಲ್ಲೂ ಇದ್ದ ಕರಾವಳಿಯ ತಲ್ಲಣಗಳು, ಕವಿಗೋಷ್ಠಿ ಅಲ್ಲದೆ, ಇನ್ನೂ ಹಲವು ಹೊಸ ವಿಷಯಗಳ ಬಗ್ಗೆ ಗೋಷ್ಠಿಗಳು ಇದ್ದಿದ್ದು ಈ ಬಾರಿಯ ವಿಶೇಷವಾಗಿತ್ತು. "ಕಾರ್ಪೊರೆಟ್ ಮೌಲ್ಯಗಳ ಮುಖಾಮುಖಿಯಲ್ಲಿ ಸಾಹಿತ್ಯ", 'ಶ್ರೇಣೀಕೃತ ಜಾತಿ ವ್ಯವಸ್ಥೆಯ ಹೊಸರೂಪ ಹಾಗೂ ದಲಿತ ಮಹಿಳಾ ಸಂವೇದನೆ', "ಸಾಮಾಜಿಕ ಜಾಲತಾಣದ ಸವಾಲುಗಳು" ಮತ್ತು "ಸಮಕಾಲೀನ ಸವಾಲುಗಳು-ಐಕ್ಯತೆಯ ಅಗತ್ಯತೆ" ಇಂತಹ ಗೋಷ್ಠಿಗಳಾಗಿದ್ದವು. ಸಮಾರಂಭ, ಸಮಾರೋಪ ಅಲ್ಲದೆ ಮೇಲೆ ಹೇಳಿದ ಗೋಷ್ಠಿಗಳಲ್ಲಿ ಹಲವು ವಿಷಯಗಳ ಬಗ್ಗೆ (ಕೆಲವು ಬಾರಿ ಬಿಸಿ ಬಿಸಿ) ವಾಗ್ವಾದ, ಸಂವಾದ ನಡೆಯಿತು. ದೇಶೀ ಕಪ್ಪು ಹಣ ಹೊರಗೆಳೆಯುವ ಅಗತ್ಯತೆ, ಕಪ್ಪುಹಣ ಚಲಾವಣೆಗೆ ಅದ್ದೂರಿ ಸಾಹಿತ್ಯ ಮೇಳ-ಸಾಂಸ್ಕೃತಿಕ ಜಂಭೂರಿ ಉತ್ಸವಗಳನ್ನು ನಡೆಸುವುದು, ಸಂವಿಧಾನ ಬಿಟ್ಟರೆ ಬೇರೇ ಯಾವುದೇ ರಾಷ್ಟ್ರೀಯ ಗ್ರಂಥ ಆಗುವ ಅಸಾಧ್ಯತೆ, ಪುರೋಹಿತಶಾಹಿಯ ವಿರುದ್ಧ ದನಿಎತ್ತಿದವರ ಕೊಲೆ-ದಮನದ ಚರಿತ್ರೆ, ಇವುಗಳ ಬಗ್ಗೆ ಉದ್ಘಾಟನಾ ಸಮಾರಂಭದಲ್ಲೇ ಚರ್ಚೆ ಆರಂಭವಾಯಿತು.

**ಕಾರ್ಪೊರೆಟ್ ಮೌಲ್ಯಗಳ ಮುಖಾಮುಖಿಯಲ್ಲಿ**

"ಕಾರ್ಪೊರೆಟ್ ಮೌಲ್ಯಗಳ ಮುಖಾಮುಖಿಯಲ್ಲಿ ಸಾಹಿತ್ಯ", ಗೋಷ್ಠಿಯಲ್ಲಿ ಎರಡು ಭಿನ್ನವಾದ ಅಭಿಪ್ರಾಯಗಳನ್ನು ಮಂಡಿಸಲಾಯಿತು. ಕಾರ್ಪೊರೆಟ್ ಮತ್ತು ಸಾಹಿತ್ಯವನ್ನು ಎದುರು ಬದಿರು ಮಾಡುವುದು ಕಷ್ಟ. ಎರಡೂ ನಮ್ಮದಲ್ಲ. ಎಲ್ಲದಕ್ಕೂ ಬೆಲೆ ಕಟ್ಟುವ, ಚರಿತ್ರೆಯನ್ನು ನಮ್ಮಿಂದ ಬೇರ್ಪಡಿಸುವ, ಬಹುತ್ವ ನಾಶ ಮಾಡಿ ಏಕತ್ವ ಸ್ಥಾಪಿಸುವ ಕಾರ್ಪೊರೆಟ್ ಮೌಲ್ಯಗಳನ್ನು ನಿರಾಕರಿಸಿ ಬರಿಯ ಪ್ರತಿಭಟನಾ ನೆಲೆಗಳನ್ನು ಬಿಟ್ಟು ಆತ್ಮಸ್ಥೈರ್ಯದ ಸಾಂಸ್ಕೃತಿಕ ಅಭಿವ್ಯಕ್ತಿಯ ಸ್ವಾಯತ್ತ ನೆಲೆಯನ್ನು ಕಂಡುಕೊಳ್ಳುವುದು ಪ್ರತಿಪಾದಿತವಾದ ಒಂದು ಅಭಿಪ್ರಾಯ. ಕಾರ್ಪೊರೆಟ್ ಮತ್ತು ಸಾಹಿತ್ಯ ಎರಡನ್ನು ಸಮಾನವಾಗಿ ಟೀಕಿಸುವುದು ಸರಿಯಲ್ಲ. ಕಾರ್ಪೊರೆಟ್ ಬರಿಯ ಬೆಲೆ ಕಟ್ಟುತ್ತದೆ. ಸಾಹಿತ್ಯ ಮೌಲ್ಯಗಳನ್ನು ಸೃಷ್ಟಿಸುತ್ತದೆ. ಸಾಹಿತ್ಯ ಡಿಕನ್ಸ್ಟ್ರಕ್ಟ್ ಮಾಡುತ್ತದೆ. ಕಾರ್ಪೊರೆಟ್ ರಿಕನ್ಸ್ಟ್ರಕ್ಟ್ ಮಾಡುತ್ತದೆ. ಸಾಹಿತ್ಯ ಸಮುದಾಯದಲ್ಲಿ ನೆಲೆಗೊಂಡ ವಿವೇಕದ ಮಾದರಿಗಳ ಮೌಲ್ಯಮಾಪನ ಮಾಡುತ್ತದೆ. ಕಾರ್ಪೊರೆಟ್ ಅನಿವಾರ್ಯ ಅನಿಷ್ಟ ಎಂಬುದನ್ನು ತಿರಸ್ಕರಿಸಬೇಕು. ಇದು ಪ್ರತಿಪಾದಿತವಾದ ಇನ್ನೊಂದು ಅಭಿಪ್ರಾಯ. ಇವರೆಡರ ಬಗ್ಗೆ ಹಾಗೂ ಸಾಹಿತ್ಯ ಮತ್ತು ಕಾರ್ಪೊರೆಟ್ ಮೌಲ್ಯಗಳೆಂದರೇನು ಎನ್ನುವ ಬಗ್ಗೆ ಸಹ ಸಾಕಷ್ಟು ಚರ್ಚೆ ಆಯಿತು. ಡಾ. ನಟರಾಜ ಬೂದಾಳ್ ಮತ್ತು ಡಾ. ಮಲ್ಲಿಕಾರ್ಜುನ ಮೇಟಿ ಈ ಗೋಷ್ಠಿಯಲ್ಲಿ ವಿಷಯ ಮಂಡನೆ ಮಾಡಿದರು.

**ಕರಾವಳಿಯಲ್ಲೇ ಏಕೀ ಉಗ್ರ ಕೋಮುವಾದ?**

'ಶ್ರೇಣೀಕೃತ ಜಾತಿ ವ್ಯವಸ್ಥೆಯ ಹೊಸರೂಪ ಹಾಗೂ ದಲಿತ ಮಹಿಳಾ ಸಂವೇದನೆ' ಅತ್ಯಂತ ಹೆಚ್ಚು ಬಿಸಿ-ಬಿಸಿ ಚರ್ಚೆ ನಡೆದ ಗೋಷ್ಠಿಯಾಗಿತ್ತು. ಹೈದರಾಬಾದ್ ಮತ್ತು ಕರಾವಳಿ ಕರ್ನಾಟಕ ಎರಡರಲ್ಲೂ ಮುಸ್ಲಿಮರು ದೊಡ್ಡ ಸಂಖ್ಯೆಯಲ್ಲಿದ್ದರೂ ಕೋಮುವಾದಿ ಹಿಂಸಾಚಾರ-ದಂಗೆಗಳು ಮತ್ತು ಕೋಮುವಾದೀಕರಣದಲ್ಲಿ ಭಾರೀ ವ್ಯತ್ಯಾಸಕ್ಕೆ ಏನು ಕಾರಣವೆನ್ನುವುದು ಚರ್ಚೆಯ ವಿಷಯವಾಗಿತ್ತು. ಅನುಭಾವಿ ಸೂಫಿಸಂ ಮತ್ತು ಅವೈದಿಕ ಪರಂಪರೆಯ ಲಿಂಗಾಯತ ಮಠಗಳ

ಪುಟ 15 ಕ್ಕೆ

## ಜನನುಡಿ-2014ರಲ್ಲಿ ಕೇಳಿ ಬಂದ ನುಡಿಗಳು

"..ಬಡವರ ಬದುಕು ಉರಿಯಲ್ಲಿರುವಾಗ 'ನುಡಿ' ಎಂದರೆ 'ಸಿರಿ' ಎಂದು ಭಾವಿಸುವುದು ಶೋಷಣೆಯ ಘೋಷಣೆಯಾಗಿದೆ. ಬಂಡವಾಳಶಾಹಿಗಳು ತಮ್ಮ ಅವ್ಯವಹಾರಗಳ ಕಳಂಕ ಮುಚ್ಚಿ ಹಾಕಲು, ರಾಜಕೀಯ ಸ್ಥಾನಮಾನ-ಪ್ರತಿಷ್ಟೆ ಸಾಂಸ್ಥಿಕ ಬಲ ಗಟ್ಟಿಗೊಳಿಸಲು ಸಾಹಿತ್ಯ-ಸಾಂಸ್ಕೃತಿಕ ವಲಯದ ಮೇಲೆ ಹಿಡಿತ ಸಾಧಿಸಲು ಯತ್ನಿಸುತ್ತಿದ್ದಾರೆ.."

**-ನಿಡುಮಾಮಿಡಿ ವೀರಭದ್ರ ಚೆನ್ನಮಲ್ಲ ಸ್ವಾಮಿಜಿ ಉದ್ಘಾಟನಾ ಭಾಷಣದಲ್ಲಿ,**



ಕರಾವಳಿ ಯಲ್ಲಿ ಇಂದು ಉಸಿರುಗಟ್ಟಿಸುವ ವಾತಾವರಣ ಇದೆ. ಇಲ್ಲಿ ಕಂಬಳಕ್ಕೆ ಹೇರಿದ ನಿಷೇಧ ಮಡೆಸ್ನಾನಕ್ಕೆ ಇಲ್ಲ. ಉಳಾಯಿಬೆಟ್ಟುವಿನ ಘಟನೆ ಸಂಬಂಧ ಪತ್ರಿಕೆಯೊಂದು 300 ಮುಸ್ಲಿಮರು ಆಕ್ರಮಣ ಮಾಡಿದರು ಎಂದು ವರದಿ ಮಾಡಿರುವುದು ಪತ್ರಕರ್ತರ ಮನಸ್ಸು ಎಷ್ಟು ಮಲಿನವಾಗಿದೆ ಎಂಬುದನ್ನು ತೋರಿಸುತ್ತದೆ. 60 ವರ್ಷಗಳ ಹಿಂದೆ ಇಡೀ ಜಿಲ್ಲೆಯಲ್ಲಿ ನಾನೊಬ್ಬಳೇ ಮುಸ್ಲಿಂ ಹುಡುಗಿ ಶಾಲೆಗೆ ಹೋಗುತ್ತಿದ್ದಾಗ ಆಕ್ಷೇಪಿಸಿದವರಿಗೆ ನನ್ನ ತಂದೆ ದಿಟ್ಟ ಉತ್ತರ ಕೊಟ್ಟಿದ್ದರು. ಇಂದು ಶಾಲೆಗೆ ಹೋಗುವ ಮುಸ್ಲಿಂಹೆಣ್ಣು ಮಕ್ಕಳಿಗೆ ರಕ್ಷಣಾ ಪಡೆ ಬೇಡ. ನಾವಿದ್ದೇವೆ ಎಂದು ತಂದೆ-ತಾಯಿ ಹೇಳಲು ಸಾಧ್ಯವಾಗುತ್ತಿಲ್ಲ. ಇಂದು ಜನ ಹಿಂದೂಗಳಾಗಿ, ಮುಸ್ಲಿಮರಾಗಿ ಬದುಕುತ್ತಿದ್ದಾರೆ. ಮನುಷ್ಯರಾಗಿ ಬದುಕುತ್ತಿಲ್ಲ.

**- ಸಾರಾ ಅಬೂಬಕ್ಕರ್,**



"ಹಸಿವು, ಅಪಮಾನ, ಸಾಮಾಜಿಕ ತಾರತಮ್ಯ ಇರುವಾಗ ನುಡಿಯು 'ಸಿರಿ' ಹೇಗಾಗುತ್ತದೆ?.. 1981ರಲ್ಲಿ ಪೇಜಾವರ ಸ್ವಾಮಿ ಮೀನಾಕ್ಷಿಪುರಂನಲ್ಲಿ ಇಸ್ಲಾಮಿಗೆ ಮತಾಂತರವಾದವರನ್ನು ವಾಪಾಸು ಕರೆಸುತ್ತೇನೆಂದು ಹೊರಟಾಗ, ಅವರನ್ನು 'ಯಾವ ಜಾತಿಗೆ ಸೇರಿಸುತ್ತೀರಿ? ಎಂದು ಪ್ರಶ್ನೆ ಕೇಳಲಾಗಿತ್ತು. ಅದಕ್ಕೆ ಇಲ್ಲಿಯವರೆಗೆ ಪೇಜಾವರರಿಂದ ಉತ್ತರ ಸಿಕ್ಕಿಲ್ಲ?."

**- ಮಾವಳ್ಳಿ ಶಂಕರ್,**



ಬಂಡವಾಳಶಾಹಿ ವಸ್ತುಗಳನ್ನು ಮಾತ್ರವಲ್ಲ ವಿಚಾರಗಳನ್ನೂ ಉತ್ಪಾದಿಸುತ್ತದೆ. ಕಾರ್ಪೊರೆಟ್ ವಲಯ ಸಾಹಿತ್ಯ ಮತ್ತು ಶಿಕ್ಷಣವನ್ನು ಹಿಡಿದಿಟ್ಟುಕೊಂಡಿದೆ. ಸಾಹಿತಿಗಳನ್ನು 'ಮೈಲಿಗೆ' ಮಾಡಲು ಸಾಹಿತ್ಯ ಉತ್ಸವ ನಡೆಯುತ್ತಿದೆ. ..ಇಸಂ ಚಳುವಳಿ ಬೇಡವೆನ್ನುವರು, ಎಡ-ಬಲ ಎರಡೂ ಅಲ್ಲ, ಮಧ್ಯಮ ಎನ್ನುವವರು ಬಲದ ಬಾಲವೇ ಆಗಿದ್ದಾರೆ.."

**- ಕೆ. ನೀಲಾ, ಆಶಯ ಭಾಷಣದಲ್ಲಿ**

**JANASHAKTHI KANNADA VARA PATRIKE:** Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **NITHYANANDASWAMI** EMS Bhavana, No.37/A, 8th Cross, Mahalakshmi Layout, BANGALORE-560086 Editor : **NITHYANANDASWAMI**